ಹಳಗನ್ನಡ ಜೈನ ಪುರಾಣಗಳು ಪ್ರತಿಬಿಂಬಿಸುವ ಸಮಾಜ

ಮದರಾಸು ವಿಶ್ವವಿದ್ಯಾಲಯದ ಎಂ.ಫಿಲ್

ಪದವಿಗಾಗಿ ಸಾದರಪಡಿಸುವ ಪ್ರಬಂಧ

ರಮೇಶ್ ಚಂದ್ರ ದತ್

ರಿಜಿಸ್ಟರ್ ನಂಬ್ರ: 540

ಮಾರ್ಗದರ್ಶಕರು:

ಡಾ: ಜೆ. ರಾಮಸ್ವಾಮಿ, ಎಂ.ಎ. (ಕನ್ನಡ), ಎಂ.ಎ. (ಭಾಷಾವಿಜ್ಞಾನ), ಪಿಹೆಚ್.ಡಿ.

ಕನ್ನಡ ವಿಭಾಗ

ಮದರಾಸು ವಿಶ್ವವಿದ್ಯಾನಿಲಯ

ಮದರಾಸು -600 005

ಡಿಸೆಂಬರ್ - 1991

ವಿಷಯಾನುಕ್ರಮಣಿಕೆ

ಅಧ್ಯಾಯ ಒಂದು : ಪ್ರವೇಶ

ಅಧ್ಯಾಯ ಒಂದು

: ಪ್ರವೇಶ :

1.1. 'ಜೈನ' ಪದದ ಉತ್ಪತ್ತಿ 'ಜಿನ' ಶಬ್ದದಿಂದಾಗಿದೆ. 'ಜಿನ' ಎಂದರೆ =VICTORIOUS, TRIUMPHANT, ಅಜಿತ – ಎಂದರ್ಥ. (ಕಿಟ್ಟೆಲ್ ನಿಘಂಟು (ನಾನಾರ್ಥ ರತ್ನಾಕರ Manuscript) ಜಿನನು ಪ್ರತಿಪಾದಿಸಿರುವ ಧರ್ಮ ಜೈನ ಧರ್ಮ.

ವೈದಿಕ ಧರ್ಮದ ಶೋಷಣಾವ್ಯವಸ್ಥೆಯನ್ನು ಪ್ರತಿಭಟಿಸಿ, ಶೋಷಣೆಗೆ ಒಳಗಾದ ಕೆಳವರ್ಗದ ಜನರಿಗೊಂದು ಭರವಸೆಯನ್ನು, ಅಸ್ತಿತ್ವವನ್ನೂ ತಂದುಕೊಡುವ ಉದ್ದೇಶದಿಂದ ಜೈನ ಧರ್ಮವು ಉದಯವಾಯಿತು. ಜೈನ ಧರ್ಮವು ವೇದಗಳ ಪ್ರಾಮಾಣ್ಯವನ್ನು ಒಪ್ಪುವುದಿಲ್ಲ. ಆದುದರಿಂದ ಇದು ಅವೈದಿಕವೆಂದು ಪರಿಗಣಿತವಾಗಿದೆ. ಜೈನ ದರ್ಶನವು 'ಸೃಷ್ಟಿವಾದ' ವಾದವನ್ನೂ ಒಪ್ಪುವುದಿಲ್ಲ. ಆದರೆ ಮನುಷ್ಯನ ಆದರ್ಶವೆನಿಸಿಕೊಳ್ಳುವ ಪರಮಾತ್ಮ ಅಥವಾ ಸರ್ವಜ್ಞನನ್ನು ಕುರಿತು ಪ್ರಸ್ತಾಪಿಸುತ್ತದೆ.

ಜೈನಧರ್ಮ ಕರ್ನಾಟಕವನ್ನು ಪ್ರವೇಶಿಸಿದ ಕಾಲ ಸ್ಪಷ್ಟವಾಗಿಲ್ಲ. ಜೈನ ಸಾಂಪ್ರದಾಯಿಕ ಕಥಾಕೋಶಗಳಾದ ಜಿನಸೇನನ ಹರಿವಂಶ ಮತ್ತು ಹರಿಷೇಣನ ಬೃಹತ್ಕಥಾಕೋಶಗಳಲ್ಲಿ ಮೌರ್ಯವಂಶ ಸ್ಥಾಪಕ ಚಂದ್ರಗುಪ್ತನು ತನ್ನ ಗುರುವಾದ ಭದ್ರಬಾಹುವಿನೊಡನೆ ದಕ್ಷಿಣಕ್ಕೆ ವಲಸೆ ಬಂದು ಶ್ರವಣಬೆಳಗೊಳದಲ್ಲಿ ನೆಲಸಿದನೆಂದು ಹೇಳಲಾಗಿದೆ. ವಡ್ಡಾರಾಧನೆಯಲ್ಲಿ 'ಉಜ್ಜಯಿನಿಯನ್ನು ಆಳುತ್ತಿದ್ದ ಚಕ್ರವರ್ತಿ ಸಂಪ್ರತಿ ಚಂದ್ರಗುಪ್ತ ಮಹಾರಾಜನ ರಾಜ್ಯದಲ್ಲಿ ಘೋರವಾದ ಕ್ಷಾಮವು ತಲೆದೋರುತ್ತದೆ. ಆದುದರಿಂದ ಚಂದ್ರಗುಪ್ತ ಮಹಾರಾಜನು ಭದ್ರಬಾಹು ಮುನಿಯೊಂದಿಗೆ ಎರಡು ಸಾವಿರ ಋಷಿಗಳ ಸಮೂಹವನ್ನು ಕೂಡಿಕೊಂಡು ದಕ್ಷಿಣ ದೇಶಕ್ಕೆ ತೆರಳಿದನು. ಗ್ರಾಮ – ನಗರ – ಖೇಡ – ಖರ್ವಡ – ಮಡಂಬ – ಪಟ್ಟಣ – ದ್ರೋಣಾಮುಖಗಳೆಂಬ ಭೂಭಾಗಗಳನ್ನು ದಾಟಿ 'ಕಲ್ಬಪ್ಪು' ಎಂಬ ಹೆಸರುಳ್ಳ ಶ್ರವಣ ಬೆಳಗೊಳಕ್ಕೆ ಬಂದು ನೆಲಸಿದರು ಎಂದಿದೆ. (ವಡ್ಡಾ –179). ಇಲ್ಲಿ ಉಲ್ಲೇಖಿಸಿರುವ ಚಂದ್ರಗುಪ್ತನು ಅಶೋಕನ ಮೊಮ್ಮಗನಾಗಿದ್ದಲ್ಲಿ ಜೈನಧರ್ಮವು ಅವನೊಂದಿಗೆ ಕಿ.ಶ.ಆರಂಭಕ್ಕೆ ಮೊದಲೇ ಕರ್ನಾಟಕವನ್ನು ಪ್ರವೇಶಿಸಿತು ಎನ್ನಬಹುದು.

1.2. ಕರ್ನಾಟಕದಲ್ಲಿ ಜೈನಧರ್ಮದ ಪ್ರವೇಶ ಹಾಗೂ ಬೆಳವಣಿಗೆಯ ಬಗ್ಗೆ ವಿದ್ವಾಂಸರಲ್ಲಿಯೂ ಒಮ್ಮತವಿಲ್ಲ. ಆದರೆ ಕ್ರಿ.ಶ.ಎರಡನೇ ಶತಮಾನದ ಹೊತ್ತಿಗೆ ಕರ್ನಾಟಕದಲ್ಲಿ

ಜೈನಧರ್ಮವು ಪ್ರಬಲವಾಗಿದ್ದಿರಬೇಕು. ಒಟ್ಟಿನಲ್ಲಿ ಭದ್ರಬಾಹು ಮತ್ತು ಅವರ ಶಿಷ್ಯ ಸಮೂಹ ದಕ್ಷಿಣಕ್ಕೆ ವಲಸೆ ಬಂದಾಗ ಅವರೊಂದಿಗೆ ಜೈನಧರ್ಮದ ಪ್ರವೇಶವಾಯಿತು ಎಂಬುದು ತಿಳಿದು ಬರುತ್ತದೆ.

ಜೈನ ಮುನಿಗಳ ಜೀವನ ವಿಧಾನದಲ್ಲಿ ಒಂದು ಮುಖ್ಯ ಅಂಗವೆಂದರೆ ಅವರು ಯಾವಾಗಲೂ ಸಂಚರಿಸುತ್ತಿರಬೇಕು. ಇಲ್ಲಿ ಅವರು ಹೆಚ್ಚಾಗಿ 'ಏಕವಿಹಾರಿಯಾಗಿ ಸಂಚರಿಸುತ್ತಾರೆ. ಕೆಲವೊಮ್ಮೆ ಶಿಷ್ಯ ಪರಿವಾರದೊಡನೆ ಸಂಚರಿಸುವುದೂ ಉಂಟು. ಗುರುಗಳ ಒಪ್ಪಿಗೆ ಪಡೆದು ಏಕವಿಹಾರಿಯಾಗಿ ಗ್ರಾಮದಲ್ಲಿ ಒಂದು ರಾತ್ರಿಯಿದ್ದರೆ, ನಗರದಲ್ಲಿ ಐದು ರಾತ್ರಿ. ಅಡವಿಯಲ್ಲಿ ಹತ್ತು ರಾತ್ರಿಯಂತೆ ತಂಗುತ್ತಾ ಸಂಚರಿಸುತ್ತಾರೆ. (ವಡ್ಡಾ –20). ಈ ರೀತಿ ಸಂಚರಿಸುವ ಮುನಿಗಳು ವರ್ಷದ ಎಂಟು ತಿಂಗಳನ್ನು ಸಂಚಾರದಲ್ಲಿ ಮುಗಿಸಿ ಉಳಿದ ನಾಲ್ಕು ತಿಂಗಳ ಕಾಲ ಒಂದು ಕಡೆ ನೆಲೆಯಾಗಿ ನಿಂತು ಕಳೆಯುತ್ತಿದ್ದರು. ಈ ವ್ಯವಸ್ಥೆ ಜೈನಧರ್ಮದ ಪ್ರಸಾರ ಮಾಡುವಲ್ಲಿ ಬಹಳ ಅನುಕೂಲಕರವಾಗಿ ಪರಿಣಮಿಸಿತು.

ಭದ್ರಬಾಹುವಿನೊಡನೆ ದಕ್ಷಿಣಕ್ಕೆ ವಲಸೆ ಬಂದಾಗ ಅವಿಭಕ್ತವಾಗಿದ್ದ ಜೈನಧರ್ಮ ಅನತಿ ಕಾಲದಲ್ಲಿ ಶ್ವೇತಾಂಬರ ದಿಗಂಬರಗಳೆಂಬ ಎರಡು ಮುಖ್ಯ ಸಂಪ್ರದಾಯಗಳು ಹುಟ್ಟಿಕೊಂಡಂತೆ ಕಂಡು ಬರುತ್ತದೆ (ವಡ್ಡಾ –190). ಕರ್ನಾಟಕದಲ್ಲಿ ಜೈನ ಧರ್ಮದ ದಿಗಂಬರ ಸಂಪ್ರದಾಯವೇ ಹೆಚ್ಚು ಪ್ರಬಲವಾಗಿದ್ದಿತು. ಶ್ವೇತಾಂಬರ ಸಂಪ್ರದಾಯವು ಉತ್ತರ ಭಾರತದಲ್ಲಿ ಹೆಚ್ಚು ಪ್ರಚಲಿತವಾಗಿದ್ದಿತು. ಕರ್ನಾಟಕದಲ್ಲಿಯೂ ಅಲ್ಲಲ್ಲಿ ಶ್ವೇತಾಂಬರರಿದ್ದರು. ಆದರೆ ಕರ್ನಾಟಕದ ಜೈನಧರ್ಮವೆಂದರೆ ಮುಖ್ಯವಾಗಿ ದಿಗಂಬರ ಸಂಪ್ರದಾಯದ ಜೈನಧರ್ಮವೇ. ಈ ಎರಡೂ ಪಂಗಡಗಳಲ್ಲದೆ ಕರ್ನಾಟಕದಲ್ಲಿ ಯಾಪನೀಯ ಎಂಬ ಒಂದು ಮೂರನೆಯ ಸಂಪ್ರದಾಯವೂ ಹುಟ್ಟಿಕೊಂಡಿತು. ಯಾಪನೀಯರು ಸಹ 'ದಿಗಂಬರ'ರೇ ಆಗಿದ್ದರು. ಆದರೆ 'ದಿಗಂಬರ' ಸಂಪ್ರದಾಯದ 'ಸ್ತ್ರೀಯರಿಗೆ ಮೋಕ್ಷಾಧಿಕಾರವಿಲ್ಲ' ಎಂಬ ಸಿದ್ಧಾಂತವನ್ನು ಅವರು ಒಪ್ಪುತ್ತಿರಲಿಲ್ಲ. ಯಾಪನೀಯ ಪಂಥದವರು 'ಪರಶಾಸನೇ ಮೋಕ್ಷಃ', 'ಸಗ್ರಂಥನಾಂ ಮೋಕ್ಷಃ' 'ಸ್ತ್ರೀಣಾಂ ತದ್ಭವೇ ಮೋಕ್ಷಃ' – ಎಂಬ ಮೂರು ತತ್ವಗಳನ್ನು ಹೊಂದಿದ್ದರು. ಈ ತತ್ವತ್ರಯವನ್ನು ಶ್ವೇತಾಂಬರ ಪಂಥದವರೂ ಒಪ್ಪಿಕೊಂಡಿದ್ದರು.

ದಿಗಂಬರ ಸಂಪ್ರದಾಯದ ಜೈನರು ಕರ್ನಾಟಕದಲ್ಲಿ ಮೊದಲಿನಿಂದಲೂ ಪ್ರಬಲರಾಗಿದ್ದಾರೆ. ಗಂಗ, ಚಾಲುಕ್ಯ, ರಾಷ್ಟ್ರಕೂಟರೇ ಮೊದಲಾದ ರಾಜರುಗಳ ಆಶ್ರಯದಿಂದ ಈ ಸಂಪ್ರದಾಯದ ಜೈನ ಧರ್ಮವು ಆ ಕಾಲಕ್ಕೆ ಕರ್ನಾಟಕದ ಅತ್ಯಂತ ಪ್ರಮುಖ ಧರ್ಮವಾಗಿ ಬೆಳೆಯಿತು.

1.3. ದಕ್ಷಿಣ ಭಾರತದಲ್ಲಿ ತಲಕಾಡಿನ ಗಂಗರೇ ಜೈನ ಧರ್ಮದ ಪ್ರಧಾನ ಆಶ್ರಯದಾತರಾಗಿದ್ದರು. ಕ್ರಿ.ಶ.350ರಲ್ಲಿ ವಂಶ ಸ್ಥಾಪನೆ ಮಾಡಿದ ಗಂಗರು ಕ್ರಿ.ಶ.550 ವರೆಗೆ ಪರಮಾಧಿಕಾರವುಳ್ಳ ದೊರೆಗಳಾಗಿದ್ದರು. ಮುಂದೆ ಚಾಳುಕ್ಯ ಹಾಗೂ ರಾಷ್ಟ್ರಕೂಟರ ಮಾಂಡಳಿಕರಾಗಿದ್ದರು. ಗಂಗರು ಜೈನಧರ್ಮವನ್ನು ಸ್ವೀಕರಿಸಿದ್ದರಿಂದ ಪ್ರಜೆಗಳೂ ಅವರನ್ನು ಅನುಸರಿಸಿದರು. ಪರಿಣಾಮವಾಗಿ ರಾಜ್ಯದಲ್ಲಿ ಜೈನ ಧರ್ಮವು ನಿರಾತಂಕವಾಗಿ ಬೆಳೆಯಿತು. ಕಾಲಾಂತರದಲ್ಲಿ ಗಂಗರು ಜೈನ ಧರ್ಮವನ್ನು ಬಿಟ್ಟು ವೈಷ್ಣವ ಧರ್ಮವನ್ನು ಸ್ವೀಕರಿಸಿದರು. ಕರ್ನಾಟಕದ ಪ್ರಾಚೀನ ಅರಸು ಮನೆತನಗಳಲ್ಲಿ ಒಂದಾದ ಬನವಾಸಿಯ ಕದಂಬ ವಂಶದ ದೊರೆಗಳೂ ತಕ್ಕಮಟ್ಟಿಗೆ ಜೈನಧರ್ಮಕ್ಕೆ ಆಶ್ರಯ ನೀಡಿದ್ದರು. ಗಂಗರ ತರುವಾಯ ಬಂದ ವಾತಾಪಿಯ ಚಾಲುಕ್ಯರು ಮೂಲತಃ ವೈದಿಕ ಸಂಪ್ರದಾಯದವರಾಗಿದ್ದರೂ ಜೈನ ಧರ್ಮವನ್ನು ಪೋಷಿಸಿಕೊಂಡು ಬಂದರು. ಮಾನ್ಯಖೇಟದ ರಾಷ್ಟ್ರಕೂಟರು ವಿಷ್ಣು ಭಕ್ತರು ಶಿವಭಕ್ತರುಗಳಾಗಿದ್ದರೂ ಜೈನ ಧರ್ಮಕ್ಕೆ ಉದಾರ ಪುರಸ್ಕಾರ ನೀಡಿದ್ದಾರೆ. ಹೀಗೆ ಅನೇಕ ರಾಜರುಗಳನ್ನು ಈ ನೆಲೆಯಲ್ಲಿ ಗುರುತಿಸಬಹುದು. ಇಲ್ಲಿ ಅರಸರು ಮತ್ತು ಪ್ರಜೆಗಳು ಪರಧರ್ಮ ಸಹಿಷ್ಣರಾಗಿದ್ದುದರಿಂದ ಬೇರೆ ಧರ್ಮಗಳ ಬೆಳವಣಿಗೆಯನ್ನು ಸ್ವಾಗತಿಸಿ ಪ್ರೋತ್ಸಾಹಿಸಿದ್ದಾರೆಂಬುದು ಗಮನಾರ್ಹವಾದುದು.

ಗಂಗ ರಾಷ್ಟ್ರಕೂಟರ ಆಶ್ರಯದಲ್ಲಿ ಉಚ್ಛ್ರಾಯ ಸ್ಥಿತಿ ತಲುಪಿದ ಜೈನ ಧರ್ಮವು ಹನ್ನೊಂದನೆಯ ಶತಮಾನದ ಹೊತ್ತಿಗೆ ಇಳಿಮುಖವಾಗತೊಡಗಿದೆ. ಹನ್ನೆರಡನೆಯ ಶತಮಾನವನ್ನು ಜೈನ ಧರ್ಮದ ಅವನತಿಯ ಕಾಲ ಎನ್ನಬಹುದು. ಇಲ್ಲಿ ರಾಜಾಶ್ರಯ ತಪ್ಪಿದ್ದು ಮಾತ್ರವಲ್ಲದೆ ಜೈನಧರ್ಮದ ಆಂತರಿಕ ದೌರ್ಬಲ್ಯಗಳೂ ಇದಕ್ಕೆ ಕಾರಣವಾಯಿತು. ಹೊಯ್ಸಳ ರಾಜ ವಿಷ್ಣುವರ್ಧನನು ಜೈನ ಧರ್ಮವನ್ನು ಬಿಟ್ಟು ಶ್ರೀವೈಷ್ಣವ ಧರ್ಮಕ್ಕೆ ಮತಾಂತರ ಹೊಂದಿದ್ದು ಜೈನಧರ್ಮಕ್ಕೊಂದು ಬಲವಾದ ಆಘಾತ ಎನ್ನಬಹುದು.

1.4. ಆರಂಭ ಹಂತದಲ್ಲಿ ಕಠೋರವಾದ ತಪಸ್ಸು ಮತ್ತು ಸಾಧನೆಗಳಿಂದ ಜನರ ಮನಸ್ಸನ್ನು ಗೆದ್ದ ಜೈನ ಮುನಿಗಳು ಅವರನ್ನು ತಮ್ಮ ಧರ್ಮದತ್ತ ಆಕರ್ಷಿಸಿದರು, ರಾಜರುಗಳೂ ಇದಕ್ಕೆ ಹೊರತಲ್ಲ. ಜೈನ ಧರ್ಮದ ಮೂಲ ತತ್ವಗಳು ಅವರಲ್ಲಿ ವಿಶೇಷ ಪರಿಣಾಮವನ್ನುಂಟು ಮಾಡಿತು. ಹಾಗಾಗಿ ರಾಜಾಶ್ರಯವನ್ನು ಗಿಟ್ಟಿಸಿಕೊಳ್ಳುವಲ್ಲಿ ಜೈನರಿಗೆ ಕಷ್ಟವೆನಿಸಿರಲಿಕ್ಕಿಲ್ಲ. 'ಅಹಿಂಸಾ ಪರಮೋ ಧರ್ಮ:' ಎಂದು ಸಾರಿದ ಜೈನರು ಪೂರ್ವ ಕಾಲದಲ್ಲಿ ಯಜ್ಞಕ್ಕಾಗಿ ನಡೆಯುತ್ತಿದ್ದ ಅಸಂಖ್ಯ ಪ್ರಾಣಿ ವಧೆಯನ್ನು ತಡೆಗಟ್ಟುವುದರಲ್ಲಿ ಯಶಸ್ವಿಯಾದರು. ಅಹಿಂಸೆಯನ್ನು ಎತ್ತಿ ಹಿಡಿಯುದ ಯಾವ ಧಾರ್ಮಿಕ ಕ್ರಿಯೆಯನ್ನೂ ಒಪ್ಪದ ಜೈನ ಧರ್ಮವು ಜನರಿಗೆ ಹತ್ತಿರವಾಯಿತು. ಧರ್ಮ ಪ್ರಚಾರದಲ್ಲಿ ತೊಡಗಿದ ಜೈನರು ಸಾಹಿತ್ಯ ಕ್ಷೇತ್ರವನ್ನು ಮಾಧ್ಯಮವನ್ನಾಗಿ ಬಳಸಿಕೊಂಡರು. ಪರಿಣಾಮವಾಗಿ ಕನ್ನಡದಲ್ಲಿ ಶ್ರೀಮಂತ ಸಾಹಿತ್ಯ ಸೃಷ್ಟಿಯಾಯಿತು. ದೇಸೀ ಭಾಷೆಯಲ್ಲಿ ಸಾಹಿತ್ಯ ರಚಿಸುವುದರಿಂದ ಜನರನ್ನು ಆಕರ್ಷಿಸಬಹುದೆಂಬ ಅವರ ಆಲೋಚನೆಯಿಂದ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಹಲವಾರು ಉತ್ತಮ ಕೃತಿಗಳ ಸೇರ್ಪಡೆಯಾಯಿತು

ಧರ್ಮ ಪ್ರಸಾರದ ಉದ್ದೇಶವು ಮುಖ್ಯವಾಗಿದ್ದರೂ ಜೈನ ಕವಿಗಳು ಬರಿಯ ಧಾರ್ಮಿಕ ಕೃತಿಗಳನ್ನೇ ರಚಿಸಲಿಲ್ಲ. ಅವರ ಕೃತಿಗಳನ್ನು ಧಾರ್ಮಿಕ ಮತ್ತು ಲೌಕಿಕ ಎಂದು ಎರಡು ವಿಭಾಗ ಮಾಡಬಹುದು. ವೈದಿಕ ಸಂಪ್ರದಾಯದ ರಾಮಾಯಣ ಮಹಾಭಾರತ ಮೊದಲಾದ ಕಾವ್ಯ ಪರಂಪರೆಗಳನ್ನು ಆಧರಿಸಿ ರಚಿಸಿದ ಕಾವ್ಯಗಳನ್ನು ಲೌಕಿಕ ಕಾವ್ಯಗಳೆಂದು ಗುರುತಿಸಲಾಗುವುದು. ಕವಿಗಳು ತಮ್ಮ ಆಶ್ರಯದಾತರಿಗಾಗಿ ಲೌಕಿಕ ಕಾವ್ಯಗಳನ್ನು ರಚಿಸಿದ್ದಾರೆ. ತಮ್ಮ ಪೋಷಕರನ್ನು ಸ್ತುತಿಸಿ ಕೊಂಡಾಡುವುದೇ ಅವರ ಲೌಕಿಕ ಕಾವ್ಯ ರಚನೆಯ ಉದ್ದೇಶವಾಗಿದ್ದರೂ, ಕಾವ್ಯದ ವಸ್ತು ಪುರಾಣಗಳಿಂದ ಆಯ್ದುಕೊಂಡದ್ದಾಗಿದೆ. ಧಾರ್ಮಿಕ ಕಾವ್ಯಗಳು ಜೈನ ಧರ್ಮ ಮತ್ತು ತತ್ವಕ್ಕೆ ಸಂಬಂಧಿಸಿದವು. ಇಲ್ಲಿನ ಕಾವ್ಯಗಳ ವಸ್ತು ಮುಖ್ಯವಾಗಿ ತೀರ್ಥಂಕರರ ಚರಿತೆ. ತೀರ್ಥಂಕರರ ಚರಿತೆಯನ್ನು ಆಧರಿಸಿ ಬರೆದ ಕೃತಿಗಳು ಜೈನರಿಗೆ ಪುರಾಣಗಳಾದವು. ಅರವತ್ತುಮೂರು ಶಲಾಕಾಪುರುಷರ ಚರಿತೆಯಲ್ಲದೆ, ಮುನಿಗಳ ಮಹಿಮೆಯೂ, ಷಡ್ದ್ರವ್ಯಗಳೂ, ನವ ಪದಾರ್ಥಗಳೂ, ಲೋಕ ಪರಿವರ್ತನೆಯೂ, ಸೃಷ್ಟಿ ಸಂಹಾರವೂ, ಚತುರ್ಗತಿಗಳೂ, ಮೋಕ್ಷ ಮಾರ್ಗವೂ, ಅವುಗಳಿಂದ ಒದಗುವ ಫಲವೂ ವಿಪುಲವಾಗಿ ಜೈನಪುರಾಣಗಳಲ್ಲಿ ಚರ್ಚಿತವಾಗಿದೆ. ಅರವತ್ತುಮೂರು ಶಲಾಕಾ ಪುರುಷರ ಚರಿತೆಯ ಜೊತೆಗೆ ಇಪ್ಪತ್ತನಾಲ್ಕು ಕಾಮದೇವರ

ಚರಿತೆಯೂ ಬರುತ್ತದೆ. ಜೈನರ ಪ್ರಕಾರ ತೀರ್ಥಂಕರರು, ಚಕ್ರವರ್ತಿಗಳು, ಬಲದೇವರು ಮೋಕ್ಷಗಾಮಿಗಳಾದಂತೆ ಕಾಮದೇವರು ಸಹ ತದ್ಭವ ಮೋಕ್ಷಗಾಮಿಗಳೇ ಆಗಿರುತ್ತಾರೆ. ಜೈನ ಕವಿಗಳು ಲೌಕಿಕ ಆಗಮಿಕ ಕಾವ್ಯಗಳ ಜೊತೆಗೆ ಧರ್ಮ, ವ್ಯಾಕರಣ, ಛಂದಸ್ಸು, ಅಲಂಕಾರ ಮೊದಲಾದ ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಹಲವಾರು ಗ್ರಂಥ ರಚನೆಯನ್ನು ಮಾಡಿದ್ದಾರೆ.

ಜೈನ ಪುರಾಣಕ್ಕೆ ಎಂಟು ಅವಯವಗಳೆಂದು ಪಂಪ ಆದಿಪುರಾಣದಲ್ಲಿ ಹೇಳಿದ್ದಾನೆ. 'ಆ ಪುರಾಣಕ್ಕಂ ಲೋಕಾಕಾರ ಕಥನಮುಂ ದೇಶನಿವೇಶೋಪದೇಶಮುಂ ನಗರ ಸಂಪತ್ತಿ ವರ್ಣನಮುಂ ರಾಜ್ಯ ರಮಣೀಯತಾಖ್ಯಾನಮುಂ ತೀರ್ಥಮಹಿಮ ಸಮರ್ಥನಮುಂ ಚತುರ್ಗತಿ ಸ್ವರೂಪ ನಿರೂಪಣಮುಂ ತಪೋದಾನವಿಧಾನ ವರ್ಣನಮುಂ ತತ್ಫಳ ಪ್ರಾಪ್ತಿ ಪ್ರಕಟನಮು ಮೆಂದಿಂತವಯ ವಂಗಳೆಂಟಕ್ಕುಂ. (ಆದಿ.ಪು —71).

ತೀರ್ಥಂಕರರ ಚರಿತೆಯಂತೆಯೇ ಜೈನ ರಾಮಾಯಣ ಮಹಾಭಾರತಗಳೂ ರಚನೆಯಾಗಿವೆ. ನೇಮಿಚಂದ್ರ, ಕರ್ಣಪಾರ್ಯರ 'ನೇಮಿನಾಥ ಪುರಾಣ' ವು 'ಜಿನಭಾರತ' ವೇ ಆಗಿದೆ. ಇಲ್ಲಿ ಜೈನ ಕವಿಗಳು ಕಥೆಯ ದೃಷ್ಟಿಯಲ್ಲಿ ವ್ಯಾಸಭಾರತವನ್ನು ಅನುಸರಿಸಿದ್ದರೂ, ಜಿನ ಭಾರತಗಳಿಗೆ ಎಂಟನೆಯ ಶತಮಾನದ ಜಿನ ಸೇನಾಚಾರ್ಯರಿಂದ ರಚಿತವಾದ 'ಹರಿವಂಶ ಪುರಾಣ' ವೇ ಮೂಲ. ಇದರಲ್ಲಿ ಹರಿವಂಶ — ಕುರುವಂಶಗಳ ಕಥೆ ಜೈನ ದೃಷ್ಟಿಯಿಂದ ನಿರೂಪಿತವಾಗಿದೆ. ಜೈನ ಪುರಾಣಗಳ ಚೌಕಟ್ಟಿಗೆ ಒಳಗಾಗದೆ ಜೈನ ಧರ್ಮ ಪ್ರಸಾರವನ್ನು ವಸ್ತುವನ್ನಾಗಿ ಮಾಡಿಕೊಂಡ ಕಾವ್ಯಗಳೂ ಕನ್ನಡದಲ್ಲಿ ಬಂದಿವೆ. ಶಿವಕೋಟ್ಯಾಚಾರ್ಯರ ವಡ್ಡಾರಾಧನೆ, ನಯಸೇನನ ಧರ್ಮಾಮೃತ, ಜನ್ನನ ಯಶೋಧರ ಚರಿತೆ ಈ ನೆಲೆಯಲ್ಲಿ ಮೂಡಿಬಂದವುಗಳಾಗಿವೆ. ಒಟ್ಟಿನಲ್ಲಿ ತಮ್ಮ ಧರ್ಮದಲ್ಲಿದ್ದ ಶ್ರದ್ಧೆಯನ್ನು ಪ್ರಕಟಪಡಿಸುವುದಕ್ಕಾಗಿ ಮತ್ತು ಧರ್ಮ ಪ್ರಸಾರ ಮಾಡುವುದಕ್ಕಾಗಿ ಜಿನಧರ್ಮವನ್ನು ನಂಬಿ ಸದ್ಗತಿ ಹೊಂದಿದ ಮಹಾಪುರುಷರ ಚರಿತೆ ಚಿತ್ರಿತವಾಗಿದೆ ಎಂಬುದು ಗಮನಾರ್ಹ ಅಂಶ.

ಸಂಸಾರ ಸಾಗರದಲ್ಲಿ ಬಿದ್ದು ಒದ್ದಾಡುತ್ತಿರುವ ಜೀವನು ರತ್ನತ್ರಯವನ್ನು ನಂಬಿ ಸಂಸಾರವನ್ನು ದಾಟಿ ಮುಕ್ತಿಯನ್ನು ಪಡೆಯಬೇಕು. ಮುಕ್ತಿಯನ್ನು ಪಡೆಯುವ ಜೀವನು ಅದಕ್ಕೆ ಹಲವು ಹಂತಗಳನ್ನು ದಾಟಿ ಸಾಗಬೇಕಾಗುತ್ತದೆ ಮತ್ತು ಹಲವು ಜನ್ಮಗಳನ್ನು ಹೊರೆಯಬೇಕಾಗುತ್ತದೆ. ಇಂತಹ ಹಲವು ಜನ್ಮಗಳ ನೀಳ್ಗತೆಯನ್ನು ಜೀವನ ಕ್ರಮ

ವಿಕಾಸವನ್ನು ವಿವರಿಸುವುದೇ ಜೈನ ಪುರಾಣಗಳ ತೀರ್ಥಂಕರ ಚರಿತೆಗಳ ಮುಖ್ಯ ಗುರಿ. ಜೀವ ವಿಕಾಸದ ಕೊನೆಯ ಹಂತವೇ ತೀರ್ಥಂಕರತ್ವ.

1.5. ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಹದಿನಾರನೇ ಶತಮಾನದ ವರೆಗೆ ಇಪ್ಪತ್ತೈದು ಜೈನ ಕವಿಗಳ ಇಪ್ಪತ್ತೈದು ಧಾರ್ಮಿಕ ಗ್ರಂಥಗಳನ್ನು ಗುರುತಿಸಬಹುದು. ಪ್ರಾರಂಭದ ಹಂತದ ಕೃತಿಗಳು ಶ್ರೇಷ್ಠ ಕೃತಿಗಳಾಗಿವೆ. ಅನಂತರದ ಹಂತದ ಕೃತಿಗಳಲ್ಲಿ ಜೈನ ಕವಿಗಳ ಪ್ರತಿಭೆ ಪಾಂಡಿತ್ಯಗಳ ಕೊರತೆ ಕಂಡುಬರುತ್ತದೆ. ಅನಂತರದ ಕವಿಗಳಲ್ಲಿ ರತ್ನಾಕರ ವರ್ಣಿಯನ್ನು ಬಿಟ್ಟರೆ ಉಳಿದವರಲ್ಲಿ ಮೊದಲಿನ ಕವಿಗಳ ಸತ್ವ ಕಂಡು ಬರುವುದಿಲ್ಲ.

ಇಲ್ಲಿ ಅಧ್ಯಯನಕ್ಕೆ ಹಳಗನ್ನಡ ಜೈನ ಸಾಹಿತ್ಯದಲ್ಲಿ ಮುಖ್ಯರಾದ ಹನ್ನೆರಡು ಕವಿಗಳ ಒಟ್ಟು ಹದಿಮೂರು ಕೃತಿಗಳನ್ನು – ಶಿವಕೋಟ್ಯಾಚಾರ್ಯರ ವಡ್ಡಾರಾಧನೆಯೂ ಸೇರಿದಂತೆ – ಆರಿಸಿಕೊಳ್ಳಲಾಗಿದೆ. ಈ ಎಲ್ಲಾ ಕೃತಿಗಳನ್ನು ಒಟ್ಟಾಗಿಯೇ ಅಧ್ಯಯನ ನಡೆಸಿ ಆ ಕಾಲದ ಸಾಮಾಜಿಕ ಜನ ಜೀವನ ಚಿತ್ರಣವು ಈ ಕೃತಿಗಳಲ್ಲಿ ಹೇಗೆ ಪ್ರತಿಬಿಂಬಿತವಾಗಿದೆ ಎಂದು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಸಾಹಿತ್ಯದಲ್ಲಿ ಜೀವನ ಮೌಲ್ಯವೆಂದರೆ ಧರ್ಮ,ಅರ್ಥ, ಕಾಮವೆಂಬ ಪುರುಷಾರ್ಥಗಳು. ಈ ಮೂರು ಪುರುಷಾರ್ಥಗಳನ್ನು ಕಾವ್ಯದಲ್ಲಿ ಹೇಗೆ ನಿರೂಪಿಸಲಾಗಿದೆ ಎಂದು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಸಾಹಿತ್ಯವು ಸಾಮಾನ್ಯವಾಗಿ ಅದು ಬೆಳೆದು ಬಂದ ಕಾಲದ ರಾಜಕೀಯ,ಸಾಮಾಜಿಕ, ಧಾರ್ಮಿಕ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ.

ಪಂಪ ರಚಿಸಿದ ಆದಿಪುರಾಣವು ಕನ್ನಡದಲ್ಲಿ ಲಭಿಸಿರುವ ಪ್ರಥಮ ಜೈನ ಪುರಾಣ ಕಾವ್ಯ. ಕವಿರಾಜಮಾರ್ಗಕಾರನು ನೀಡಿರುವ ಉದಾಹರಣೆಯ ಪದ್ಯಗಳನ್ನು ಗಮನಿಸಿದಾಗ ಆ ಹಿಂದೆಯೂ ಜೈನ ಪುರಾಣದ ರಚನೆಯಾಗಿದೆ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹತ್ತನೆ ಶತಮಾನದಲ್ಲಿ ಪಂಪ, ಪೊನ್ನ, ರನ್ನರು ರತ್ನತ್ರಯರೆಂದು ಪ್ರಸಿದ್ಧರಾಗಿದ್ದರು. ಅವರ ಆದಿಪುರಾಣ, ಶಾಂತಿಪುರಾಣ, ಅಜಿತಪುರಾಣಗಳು ಆಗಮಿಕ ಕಾವ್ಯ ಪರಂಪರೆಯಲ್ಲಿ ರಚಿಸಿದ ಕೃತಿಗಳು. ಪಂಪ-ರನ್ನರು ಲೌಕಿಕ-ಆಗಮಿಕ ಕಾವ್ಯ ಪದ್ಧತಿಯನ್ನು ಅನುಸರಿಸಿದರೆ ಪೊನ್ನನು ಆಗಮಿಕ ಕಾವ್ಯವನ್ನು ಮಾತ್ರ ರಚಿಸಿದ್ದಾನೆ.

ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯು ಪಂಪನ ಪೂರ್ವದಲ್ಲಿ ರಚಿತವಾದ ಗದ್ಯ ಕೃತಿ. ಇದರಲ್ಲಿ ಬರುವ ಎಲ್ಲಾ ಹತ್ತೊಂಬತ್ತು ಕತೆಗಳೂ ಧಾರ್ಮಿಕ ಉದ್ದೇಶದಿಂದ ಬರೆದ ಸಾಂಪ್ರದಾಯಿಕ ಕಥೆಗಳೇ ಆಗಿವೆ. ಇಲ್ಲಿ ಕೃತಿಕಾರ ಆ ಕಾಲಕ್ಕಾಗಲೇ ಧರ್ಮವನ್ನು ಸಾಮಾನ್ಯರಿಗೆ ಮುಟ್ಟಿಸುವಲ್ಲಿ ಹೊಸ ಪ್ರಯೋಗವನ್ನು ನಡೆಸಿರುವಂತೆ ಕಂಡುಬರುತ್ತದೆ. ಚಂಪೂ ಶೈಲಿಯಲ್ಲಿ ರಚಿತವಾಗುತ್ತಿದ್ದ ಕಾವ್ಯಗಳು ಸಾಮಾನ್ಯರಿಗೆ ತಲುಪದೆ ಮೂಲ ಉದ್ದೇಶವನ್ನು ಸಾಧಿಸದೇ ಹೋದುದನ್ನು ಕಂಡ ವಡ್ಡಾರಾಧನಕಾರ ಬಹುಶಃ ಗದ್ಯದ ಮುಖಾಂತರ ಕೃತಿಯ ಉದ್ದೇಶವನ್ನು ಸಾಧಿಸಲು ಪ್ರಯತ್ನಿಸಿರಬೇಕು. ಸರಳವಾಗಿರುವ ಇದರಲ್ಲಿನ ಗದ್ಯ ನಿಶ್ಚಿತವಾಗಿ ಸಾಮಾನ್ಯರಿಗೆ ಅರ್ಥವಾಗುವಂತಿದೆ. ಈ ಕೃತಿ ಸಾಮಾನ್ಯರ ಮೇಲೆ ಪ್ರಭಾವ ಬೀರಿರಬೇಕು. ಈ ಕೃತಿಯಲ್ಲಿ ಬರುವ ಧಾರ್ಮಿಕ ಸಾಮಾಜಿಕ ಚಿತ್ರಣಗಳು ಮಹತ್ವಪೂರ್ಣವಾದವುಗಳು. ಈ ನಿಟ್ಟಿನಲ್ಲಿ ವಡ್ಡಾರಾಧನೆ ಮುಖ್ಯ ಹಾಗೂ ವಿಶಿಷ್ಟ ಕೃತಿಯಾಗಿದೆ.

1.6. ಹನ್ನೆರಡನೇ ಶತಮಾನದ ವೀರಶೈವ ಚಳುವಳಿಯ ಪ್ರಭಾವ ಜೈನರ ಮೇಲಾಗಿ ಜೈನ ಕವಿಗಳು ತಮ್ಮ ದೃಷ್ಟಿಕೋನದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿರುವುದು ಕಂಡು ಬರುತ್ತದೆ. ಆ ಮೊದಲು ಸಂಸ್ಕೃತ ಭೂಯಿಷ್ಠ ಕನ್ನಡದಲ್ಲಿ ಕೃತಿ ರಚಿಸುತ್ತಿದ್ದ ಕವಿಗಳು ಒಮ್ಮೆಲೆ ಹನ್ನೆರಡನೇ ಶತಮಾನದಲ್ಲಿ ಸರಳ ಭಾಷೆಯಲ್ಲಿ ರಚನೆಯನ್ನು ಮಾಡಿರುವುದು ಗಮನಾರ್ಹ. ಹನ್ನೊಂದನೇ ಶತಮಾನದಿಂದಲೇ ತನ್ನ ಪ್ರಾಬಲ್ಯವನ್ನು ಕಳೆದುಕೊಳ್ಳಲಾರಂಭಿಸಿದ ಜೈನ ಧರ್ಮವು, ಲೌಕಿಕ ಕಾವ್ಯ ಸಂಪ್ರದಾಯವನ್ನು ಬಿಟ್ಟು ಬರಿಯ ಆಗಮಿಕ ಕಾವ್ಯಗಳನ್ನು ಮಾತ್ರ ರಚಿಸಿದ್ದು ಗಮನಾರ್ಹ. ಬ್ರಹ್ಮಶಿವನ [redacted] 'ಸಮಯ ಪರೀಕ್ಷೆ' ಈ ಸಂಕ್ರಮಣ ಅವಸ್ಥೆಯಲ್ಲಿ ಹುಟ್ಟಿ ಬಂದ ಕೃತಿಯಾಗಿದೆ. ತಮ್ಮ ಧರ್ಮದ ಅಸ್ತಿತ್ವವನ್ನು ಯಾವುದೇ ರೀತಿಯಲ್ಲಿ ಉಳಿಸಿಕೊಳ್ಳುವ ಅವರ ಪ್ರಯತ್ನಗಳಿಗೆ ಈ ಕೃತಿ ಸಾಕ್ಷಿಯಾಧಾರಗಳನ್ನು ಒದಗಿಸುತ್ತದೆ.

ಚೋಳರ ಪ್ರಬಲ ವಿರೋಧದಿಂದಾಗಿ ದಕ್ಷಿಣ ಭಾರತದಲ್ಲಿ ಜೈನ ಧರ್ಮವು ಅಪಾರ ಹಾನಿಗೀಡಾಯಿತು. ಆದರೆ ಆ ಕಾಲಕ್ಕೆ ಕರ್ನಾಟಕದ ಹಲವು ರಾಜರುಗಳು ಆಶ್ರಯ ನೀಡಿದ್ದರಿಂದ ಪುನಃ ಚೇತರಿಸಿಕೊಂಡಿತು. ಜೈನ ಧರ್ಮಕ್ಕೆ ಪ್ರಧಾನ ಆಶ್ರಯದಾತರಾಗಿದ್ದ ಗಂಗರ

ರಾಜಾಧಿಕಾರವು ಹನ್ನೊಂದನೆಯ ಶತಮಾನದ ಹೊತ್ತಿಗೆ ನೆಲಸಮವಾಯಿತು. ರಾಷ್ಟ್ರಕೂಟರ ಪ್ರಾಬಲ್ಯ ಗತಕಾಲಕ್ಕೆ ಸೇರಿತ್ತು. ಜೈನ ಧರ್ಮದ ಆಜನ್ಮ ವೈರಿಗಳಾದ ಚೋಳ ರಾಜರು ಎಲ್ಲೆಲ್ಲಾ ರಾಜ್ಯ ವಿಜಯವನ್ನು ಸಾಧಿಸಿದರು. ಇಲ್ಲಿ ಜೈನರ ಚಟುವಟಿಕೆಗಳು ಸ್ಥಗಿತಗೊಳ್ಳಲಾರಂಭಿಸಿದವು. ವೈದಿಕರ ಮತ್ತು ವೀರಶೈವರ ಕಿರುಕುಳದ ವಿರುದ್ಧ ಧ್ವನಿಯೆತ್ತಲು ಜೈನ ಧರ್ಮಕ್ಕೆ ಸಾಕಷ್ಟು ರಾಜರ ಬೆಂಬಲವೂ ಇರಲಿಲ್ಲ. ಜನರಲ್ಲಿಯ ಪರಧರ್ಮ ಸಹಿಷ್ಣು ಭಾವವೂ ಈ ಕಾಲದಲ್ಲಿ ಕುಗ್ಗಿ ಹೋಗಿದೆ. ಹೀಗೆ ಹನ್ನೊಂದನೆಯ ಶತಮಾನದಿಂದ ಮುಂದೆ ಹಲವಾರು ಆಘಾತಗಳನ್ನು ಎದುರಿಸಿಕೊಂಡು ಬಂದ ಜೈನಧರ್ಮವು ಕಾಲಾಂತರದಲ್ಲಿ ತನ್ನ ಪ್ರಾಬಲ್ಯವನ್ನು ಕಳೆದುಕೊಳ್ಳಬೇಕಾಯಿತು.

ರಾಜಕೀಯ ಅಂಶಗಳೊಡನೆ ಜೈನ ಧರ್ಮದ ಅವನತಿಗೆ ಅದರ ಆಂತರಿಕ ದೌರ್ಬಲ್ಯಗಳೂ, ಅತಿರೇಕದ ಆಚರಣೆಗಳೂ ಕಾರಣವಾಗಿದೆ ಎಂಬುದು ಗಮನಿಸಬೇಕಾದ ಅಂಶ. ರಾಜಕೀಯ ಹಾಗೂ ಧಾರ್ಮಿಕ ರಂಗಗಳಲ್ಲಿ ನಡೆದ ಸ್ಥಿತ್ಯಂತರಗಳು ಸಾಮಾಜಿಕ ಜೀವನದ ಮೇಲೂ ಪರಿಣಾಮ ಮಾಡಿದವು. ಸಮಾಜದಲ್ಲಿ ಆದ ಬದಲಾವಣೆಗಳು ಸಾಹಿತ್ಯದಲ್ಲಿ ಪ್ರತಿಬಿಂಬಿಸದೆ ಉಳಿಯಲಿಲ್ಲ.

1.7. ಯುಗಧರ್ಮಕ್ಕೆ ಹೊಂದಿಕೊಂಡು ಜೈನರ ನಿಲುವಿನಲ್ಲಿಯೂ ಕೆಲವು ಬದಲಾವಣೆಗಳನ್ನು ಗುರುತಿಸಬಹುದು. ಈ ಅಧ್ಯಯನದಲ್ಲಿ ಜೈನ ಯುಗದ ಆಧ್ಯಾತ್ಮಿಕ, ಆರ್ಥಿಕ, ಸಾಮಾಜಿಕ ವಿಷಯಗಳಾದ ಜೀವನ ಮೌಲ್ಯಗಳನ್ನು ಧರ್ಮಾರ್ಥ ಕಾಮಗಳು ಹೇಗೆ ಪ್ರತಿಪಾದಿಸಿವೆ ಎಂಬುದನ್ನು ಗುರುತಿಸಲಾಗುವುದು. ಜೈನ ಧರ್ಮದ ಬಗ್ಗೆ ವಿಶೇಷ ಅಧ್ಯಯನವು ನಡೆದಿದೆ. ಆದರೆ ಪುರುಷಾರ್ಥಗಳ ನೆಲೆಯಲ್ಲಿ ಆ ಕಾಲಕ್ಕೆ ಜೈನ ಸಮಾಜವು ಹೇಗಿದ್ದಿತು ಎಂಬ ಅಧ್ಯಯನವು ಇದುವರೆಗೆ ನಡೆದಿಲ್ಲ. ಅಲ್ಲಲ್ಲಿ ಬಿಡಿ ಲೇಖನಗಳಲ್ಲಿ ಈ ಬಗ್ಗೆ ವಿಶ್ಲೇಷಿಸಿದ್ದರೂ ಒಂದು ಯುಗದ ಮುಖ್ಯ ಕೃತಿಗಳನ್ನೆಲ್ಲಾ ಒಂದೆಡೆಯಲ್ಲಿರಿಸಿಕೊಂಡು ಅಧ್ಯಯನವನ್ನು ನಡೆಸಿಲ್ಲ. ಜೈನ ಸಾಹಿತ್ಯದಲ್ಲಿ ಜೀವನನನ್ನು ಪ್ರತಿಪಾದಿಸುವ ಪುರುಷಾರ್ಥಕ್ಕೆ ಸಂಬಂಧಿಸಿದಂತೆ ಸಾಕಷ್ಟು ವಿಷಯಗಳ ವಿವರಗಳಿವೆ. ಸಮಗ್ರವಾಗಿ ಇದುವರೆಗೆ ಈ ವಿಷಯದಲ್ಲಿ ಅಧ್ಯಯನವು ನಡೆಯದೇ ಇರುವುದರಿಂದ ಇಲ್ಲಿ ಒಂದು ಪೂರ್ವಭಾವಿ ಪ್ರಯತ್ನವನ್ನು ಮಾಡಲಾಗಿದೆ. ಅಧ್ಯಯನದ ಸಮಯದ ಮಿತಿಯನ್ನು ಗಮನದಲ್ಲಿಟ್ಟುಕೊಂಡು ಈ ಅಧ್ಯಯನವನ್ನು ಮಾಡಲಾಗಿದೆ.

ಆದುದರಿಂದ ಹಳಗನ್ನಡ ಜೈನ ಪುರಾಣಗಳು ಪ್ರತಿಬಿಂಬಿಸುವ ಮುಖ್ಯ ಅಂಶಗಳನ್ನೆಲ್ಲಾ ಗಮನದಲ್ಲಿರಿಸಿಕೊಂಡು ಅಧ್ಯಯನವು ಮುಂದುವರಿದಿದೆ.

ಮೂರು ಮುಖ್ಯ ಅಧ್ಯಾಯಗಳಲ್ಲಿ ಧರ್ಮ, ಅರ್ಥ ಕಾಮಗಳು ಅಂದಿನ ಜೈನ ಸಮಾಜದಲ್ಲಿ ಹೇಗೆ ಬಿಂಬಿಸಿವೆ ಎನ್ನುವುದನ್ನು ನೋಡಲಾಗಿದೆ. ಜೈನ ನೀತಿಶಾಸ್ತ್ರದ ಪ್ರಕಾರ ಧರ್ಮಾಚರಣೆಯಲ್ಲಿ ಎರಡು ವಿಧ. ಒಂದು ಗೃಹಸ್ಥ ಧರ್ಮ. ಇನ್ನೊಂದು ಸನ್ಯಾಸ ಧರ್ಮ. ಎರಡನೆಯ ಅಧ್ಯಾಯವು ಜೈನ ಧರ್ಮ ವಿಚಾರವನ್ನು ಒಳಗೊಂಡಿದೆ. ಮೂರನೆಯ ಅಧ್ಯಾಯವು ಅಂದಿನ ಅರ್ಥ ವಿಷಯವನ್ನು ಒಳಗೊಂಡಿದೆ. ಇದರಲ್ಲಿ ಅರಸ - ಪ್ರಜೆ, ರಾಜನೀತಿ, ವಿದ್ಯಾಭ್ಯಾಸ, ವರ್ಣಾಶ್ರಮ, ವೇಶ್ಯಾವಾಟಿಕೆ, ಬಡತನ ಮುಂತಾದವುಗಳಿಗೆ ಸಂಬಂಧಿಸಿದಂತೆ ಅನೇಕ ಅಂಶಗಳ ವಿಶ್ಲೇಷಣೆಯಿದೆ. ನಾಲ್ಕನೆಯ ಅಧ್ಯಾಯವು ಕಾಮಕ್ಕೆ ಸಂಬಂಧಿಸಿದುದು. ಇಲ್ಲಿ ವಿವಾಹ, ಪ್ರೇಮ, ಕಾಮ, ವಿರಹಗಳಿಗೆ ಸಂಬಂಧಿಸಿದ ಅಂಶಗಳಿವೆ.

ಅಧ್ಯಾಯ ಎರಡು : ಧರ್ಮ

ಅಧ್ಯಾಯ ಎರಡು

: ಧರ್ಮ :

ಹಸಿವು, ಬಾಯಾರಿಕೆ, ಹೆದರಿಕೆ, ಹಗೆತನ, ಬೆವರು, ಖೇದ, ಮದ, ರತಿ, ಆಶ್ಚರ್ಯ, ಪ್ರೀತಿ, ಮೋಹ, ಚಿಂತೆ, ಮುಪ್ಪು, ರೋಗ, ಮರಣ, ಜನನ, ನಿದ್ರೆ, ವಿಷಾದ – ಎಂಬೀ ಹದಿನೆಂಟು ದೋಷಗಳನ್ನು ಗೆದ್ದವನು ಜಿನೇಶ್ವರ. (ಪದ್ಮ – 30, ಧರ್ಮ 1–41)

ಜೈನ ದರ್ಶನದ ಪ್ರಕಾರ ಜಿನೇಶ್ವರ ಪದವಿಯನ್ನು ಪ್ರತಿಯೊಬ್ಬನೂ ತನ್ನ ಸಾಧನೆಯಿಂದ ಸಂಪಾದಿಸಬಹುದು. ಈ ಜಗತ್ತಿನ ಎಲ್ಲಾ ಜೀವಿಗಳು ಸನ್ಮಾರ್ಗದಿಂದ ನಡೆದು ದೈವತ್ವವನ್ನು ಪಡೆಯಬಹುದು. 'ಅಮರ್ದಷ್ಟಾದಶ ದೋಷ ವರ್ಜಿತನವಂ ಸರ್ವಜ್ಞ' (ಧರ್ಮ 1–15) ಎನ್ನುವ ಜೈನ ದರ್ಶನವು ಪರಮಾತ್ಮ ಎಂದು ಒಂದನ್ನು ಒಪ್ಪುವುದಿಲ್ಲ.

ಪರಮಾತ್ಮ ಈ ಲೋಕದ ಸೃಷ್ಟಿಕರ್ತ ಎನ್ನುವುದನ್ನು ಜೈನದರ್ಶನ ಒಪ್ಪುವುದಿಲ್ಲ. ಕರ್ಮಗಳನ್ನೆಲ್ಲ ಸಂಪೂರ್ಣವಾಗಿ ಜಯಿಸಿ ಸಾಂಸಾರಿಕ ಪರಿಣಾಮಗಳ ಬಂಧನಗಳನ್ನು ಕಿತ್ತು ಹಾಕಿ, ಆತ್ಮವು ಅನಂತ ದರ್ಶನ, ಅನಂತ ಜ್ಞಾನ, ಅನಂತ ಸುಖ ಮತ್ತು ಅನಂತ ಶಕ್ತಿಗಳಿಂದ ಸಮನ್ವಿತವಾಗಿ ಸಿದ್ಧ ಪರಮೇಷ್ಠಿಯಾಗಿ ತನ್ನ ಪರಮ ಶುದ್ಧ ರೂಪದಲ್ಲಿರುತ್ತದೆ. ಅನಂತ ಗುಣಗಳಿಂದ ಕೂಡಿದ ಈ ಪರಮೇಷ್ಠಿಯೇ ಸಂಸಾರವನ್ನು ಗೆದ್ದವನು. ಅವನೇ 'ಜಿನ'. ಅವನು ಜನನ ಮರಣಗಳಿಂದ ವಿಮುಕ್ತ. ಇಂಥವನು ಸೃಷ್ಟಿಯ ರಚನೆಯಲ್ಲಿ ಕೈ ಹಾಕಿದರೆ ಅವನ ವ್ಯಕ್ತಿಯು ರಾಗ – ದ್ವೇಷಗಳಿಂದ ಕೂಡಿದುದಾಗುತ್ತದೆ. ಇದರಿಂದಾಗಿ ಪರಮಾತ್ಮನು ಒಬ್ಬ ಸಾಮಾನ್ಯ ವ್ಯಕ್ತಿಯಂತೆ ಅನ್ನಿಸಿಬಿಡುತ್ತಾನೆ.

ಜೈನ ಧರ್ಮದ ಪ್ರಪ್ರಥಮ ತೀರ್ಥಂಕರ ಆದಿನಾಥ. ಮರುದೇವಿ ಮತ್ತು ನಾಭಿರಾಜನ ಮಗನಾದ ವೃಷಭನಾಥನೇ ಜೈನ ಧರ್ಮವನ್ನು ಪ್ರಕಾಶಪಡಿಸಿದವನು (ಸಮ.ಪ –27, ಆದಿ.ಪು –70) ಆದಿನಾಥನಾದ ಇವನಿಂದ ಸನಾತನ ಜೈನ ಧರ್ಮವು ಪ್ರವರ್ತಿಸಲ್ಪಟ್ಟಿತು. ವೃಷಭನಾಥನ ತರುವಾಯ ಇಪ್ಪತ್ತಮೂರು ಜನ ತೀರ್ಥಂಕರರಾದರು. ವರ್ಧಮಾನ ಮಹಾವೀರನು ಜೈನಧರ್ಮದ ಕೊನೆಯ ತೀರ್ಥಂಕರ. ಇವರೆಲ್ಲರೂ ಜೈನ ಧರ್ಮದ ಪ್ರವರ್ತಕರು. ಜೈನ ಕವಿಗಳು ತಮ್ಮ ಧಾರ್ಮಿಕ ಪುರಾಣ ಕೃತಿಗಳಿಗೆ ಈ ತೀರ್ಥಂಕರರ ಚರಿತ್ರೆಯನ್ನೇ ವಸ್ತುವಾಗಿ ಆಧರಿಸಿದ್ದಾರೆ.

ಜೈನ ದರ್ಶನದ ಪ್ರಕಾರ ಅಷ್ಟಾದಶ ದೋಷವನ್ನು ಗೆದ್ದವನು ಪರಮೇಶ್ವರ. ಅಂತಹ ಪರಮೇಶ್ವರನೆಂದುದೇ ಆಗಮ. ಆ ಪರಮ ಆಗಮದ ಅರ್ಥವೇ ತತ್ವ (ಧರ್ಮಾ 1 –42). ಆಗಮಗಳು ಮನುಷ್ಯರನ್ನು ಉದಾತ್ತ ಗುರಿಗಳತ್ತ, ಮೋಕ್ಷದತ್ತ ಕೊಂಡೊಯ್ಯಲು ಸಮರ್ಥವಾಗಿರಬೇಕು. ಕೇಳುವವನ ಅಭ್ಯುದಯ ಮತ್ತು ಶ್ರೇಯಸ್ಸುಗಳನ್ನು ಅವು ಸಾಧಿಸಬೇಕು. ಆದುದರಿಂದ ಆಗಮಗಳ ಶಬ್ದಕ್ಕಿಂತ, ಶಬ್ದಗಳ ಅರ್ಥವನ್ನು ಗ್ರಹಿಸುವವನಿಗೆ ಹೆಚ್ಚು ಮಹತ್ವ ಇದೆ.

ಕೇಳುಗ ಜೀವಿಯೂ, ವಿಚಾರವಂತನೂ ಆಗಿರುತ್ತಾನೆ. ಶಬ್ದಗಳು ನಿರ್ಜೀವವೂ ಸಾಂಕೇತಿಕವೂ ಆಗಿರುತ್ತದೆ. ಶಬ್ದಗಳ ಹಿಂದೆ ಇರುವ ಭಾವವು ಕೇಳುಗನಿಗೆ ಮುಟ್ಟಿದರೆ ಆಗಮಗಳ ಉದ್ದೇಶ ಸಾರ್ಥಕವಾಗುತ್ತದೆ.

ಒಟ್ಟಿನಲ್ಲಿ ಜೈನ ದರ್ಶನದ ಪ್ರಕಾರ ಆಗಮಗಳನ್ನು ಪರಮೇಶ್ವರ ಅಥವಾ ತೀರ್ಥಂಕರರು ಕಾಲಕಾಲಕ್ಕೆ ಮಾನವನ ಹಿತಕ್ಕಾಗಿ ಪ್ರಕಾಶ ಪಡಿಸುತ್ತಾರೆ. ಸಂಸಾರದ ಜಟಿಲತೆಯಲ್ಲಿ ಇನ್ನೂ ಸಿಕ್ಕಿಕೊಂಡಿರುವ ಜೀವಿಗಳ ಹಿತಕ್ಕಾಗಿ ಧರ್ಮವನ್ನು ಭೋದಿಸುವ ಉದ್ದೇಶದಿಂದ ತೀರ್ಥಂಕರನು ಪ್ರಪಂಚದಲ್ಲಿ ಕೆಲವು ಕಾಲ ಇರುತ್ತಾನೆ. ತನ್ನ ಸಾಧನೆಯ ಮೂಲಕ ಕೇವಲ ಜ್ಞಾನ ಪಡೆದ ತೀರ್ಥಂಕರನು ಇತರರೂ ಸಂಸಾರದಿಂದ ಮುಕ್ತರಾಗಲೆಂದು ಧರ್ಮ ಬೋಧನೆ ಮಾಡುತ್ತಾ, ಮುಕ್ತಿ ಮಾರ್ಗವನ್ನು ಉಪದೇಶಿಸುತ್ತಾ ದೇಶದಲ್ಲೆಲ್ಲಾ ಸಂಚರಿಸುತ್ತಾನೆ.

ಇಂದ್ರನ ಆದೇಶದಂತೆ ಕುಭೇರನು ತೀರ್ಥಂಕರನ ಅನುಕೂಲಕ್ಕಾಗಿ ಸಮವಸರಣ ಮಂಟಪ ಎಂಬ ಒಂದು ಚಲಿಸುವ ಸಭಾಂಗಣವನ್ನು ರಚಿಸುವನೆಂಬ ಪರಂಪರಾಗತವಾದ ನಂಬಿಕೆ ಇದೆ. ಈ ಮಂಟಪವು ತೀರ್ಥಂಕರನನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯುವ ವಾಹನವೂ ಹೌದು (ಆದಿ·ಪು –445 – 465) ಅವನ ಧರ್ಮೋಪದೇಶವನ್ನು ಕುತೂಹಲದಿಂದ ಕೇಳುವ ಭಕ್ತರ ಸಭೆಯೂ ಹೌದು. ತೀರ್ಥಂಕರನನ್ನು ಹೊತ್ತ ಈ ಮಂಟಪವು ಯಾವುದಾದರೂ ಸ್ಥಳದಲ್ಲಿ ಕಾಣಿಸಿಕೊಂಡಾಗ ಅಲ್ಲಿ ಶಾಂತಿಯೂ ಸಾಮರಸ್ಯವೂ ಗೋಚರವಾಗುತ್ತದೆ. ಸಹಜವಾಗಿಯೇ ಪರಸ್ಪರ ದ್ವೇಷ ಭಾವನೆಯುಳ್ಳ ಪ್ರಾಣಿಗಳೂ ಕೂಡ ಶಾಂತಿ ಸೌಹಾರ್ದಗಳನ್ನು ವ್ಯಕ್ತಪಡಿಸುತ್ತವೆ.

ಸಮವಸರಣವು ಎಲ್ಲರಿಗೂ ಸಮನಾದ ಆಶ್ರಯವನ್ನು ಕೊಡುತ್ತದೆ. ಜಿನನಾದ ತೀರ್ಥಂಕರನ ಉಪದೇಶವನ್ನು ದೇವರುಗಳೂ ದೇವಿಯರೂ ನಾಲ್ಕು ವರ್ಣಗಳ ಸಂಘವೂ ಮೃಗಗಳೂ ಸುತ್ತಲೂ ಕವಿದು ಕೇಳುತ್ತಾರೆ. (ವಡ್ಡಾ – 302) ಕೊನೆಯಲ್ಲಿ ಸರ್ವಜ್ಞನೂ ಅನಂತವಾದ ಪರಮಾನಂದದಲ್ಲಿ ಮುಳುಗಿ ಹೋಗಿರುವವನೂ ಆದ ತೀರ್ಥಂಕರನು ಸರ್ವೇಶ್ವರ, ಸರ್ವಹಿತ, ಮಹಾದೇವ, ಮಹಾವಿಷ್ಣು, ಅರ್ಹದೇವ ಮುಂತಾದ ಸಾವಿರದ ಎಂಟು ಹೆಸರುಗಳಿಂದ ಪೂಜಿಸಲ್ಪಡುತ್ತಾನೆ.

ತೀರ್ಥಂಕರನಿಗೆ ಸಂಬಂಧಿಸಿದಂತೆ ಪಂಚ ಕಲ್ಯಾಣವೆಂಬ ಐದು ಉತ್ಸವಗಳಿವೆ. ಇವುಗಳಲ್ಲಿ ದೇವತೆಗಳೂ ಭಾಗವಹಿಸುತ್ತಾರೆ.

1) ಗರ್ಭಾವತರಣ – ತೀರ್ಥಂಕರನಾಗಲಿರುವ ಚೇತನ ಸ್ವರ್ಗದಿಂದ ತಾಯಿಯ ಗರ್ಭಕ್ಕೆ ಇಳಿದು ಬರುವಾಗ ದೇವತೆಗಳು ಮಾಡುವ ಸೇವೆ.

2) ಜನ್ಮಾಭಿಷೇಕ – ಮಂದಗಿರಿಯ ಶಿಖರದಲ್ಲಿ ಅಭಿಷೇಕ ಮಾಡಿ ತೀರ್ಥಂಕರನು ಜನಿಸಿದ್ದಕ್ಕಾಗಿ ಸಂತೋಷ ಪಡುವುದು.

3) ದೀಕ್ಷಾಗ್ರಹಣ – ತೀರ್ಥಂಕರನು ಯೋಗಿಯಾಗಲು ಐಹಿಕ ಸುಖಗಳನ್ನು ರಾಜ್ಯವನ್ನು ತ್ಯಜಿಸಿದಾಗ.

4) ಕೇವಲೋತ್ಪತ್ತಿ – ತಪಸ್ಸು ಮತ್ತು ಕರ್ಮಚ್ಛೇದಗಳ ಫಲವಾಗಿ ಕೇವಲ ಜ್ಞಾನವು ಮೂಡಿದುದನ್ನು ಇದು ತೋರಿಸುತ್ತದೆ. ಮತ್ತು

5) ಪರಿನಿರ್ವಾಣ – ಎಲ್ಲ ಕರ್ಮಗಳನ್ನೂ ಸಂಪೂರ್ಣವಾಗಿ ನಾಶ ಮಾಡುವುದನ್ನು, ಮುಕ್ತಿ ಅಥವಾ ಪರಮಾತ್ಮ ಸ್ವರೂಪಾನುಭವವನ್ನು ಪಡೆಯುವುದನ್ನು ತೋರಿಸುತ್ತದೆ.

ಸಮನಿತ ಧರ್ಮಕ್ಕವಿರು
ದ್ಧಮರ್ಥಮರ್ಥಕ್ಕೆ ಕಾಮಮವಿರುದ್ಧಮನು
ಕ್ರಮದೊಳ್ ಕಾಮಕ್ಕಂ ಕಡೆ
ಯ ಮೋಕ್ಷಮವಿರುದ್ಧಮೆನೆ ಚತುರ್ವರ್ಗ ಫಲಂ

(ಅಜಿ.ಪು – 80)

ಪುರುಷಾರ್ಥಗಳಾದ ಧರ್ಮ ಅರ್ಥ ಕಾಮ ಮೋಕ್ಷಗಳಲ್ಲಿ ಜೈನ ದರ್ಶನವು ಮೋಕ್ಷಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದೆ. ಧರ್ಮದ ಆಚರಣೆಯಿಂದ ಮೋಕ್ಷ ಪ್ರಾಪ್ತಿಯಾಗುತ್ತದೆ. ಅರ್ಥ ಕಾಮ ಇವು ಧರ್ಮದ ವೃದ್ಧಿಗಾಗಿಯೇ ಸಹಕಾರಿಯಾಗಬೇಕು.

ಧರ್ಮ ಅರ್ಥ ಕಾಮಗಳೆಂಬುವು ಧರ್ಮಾರ್ಥಿ ಜನರ ವಿಶ್ವಾಸಕ್ಕೆ ಪಾತ್ರವಾದುವು. ಅವುಗಳಲ್ಲಿ ಧರ್ಮವು ಪ್ರಧಾನ, ಧರ್ಮ ವೃಕ್ಷದ ಹಣ್ಣು ಅರ್ಥ, ಆ ಹಣ್ಣಿನ ರಸವೇ ಕಾಮ (ಆದಿ.ಪು –457) ಜೈನ ದರ್ಶನದ ಪ್ರಕಾರ ಕಾಮವು ಕೀಳಲ್ಲ. ಆದರೆ ಧರ್ಮಕ್ಕೆ ಪ್ರಧಾನತೆ, ಮೋಕ್ಷ ಉದಾತ್ತ ಗುರಿ.

ಮೋಕ್ಷ ಮಾರ್ಗವೇ ಜೈನಧರ್ಮದ ಅತ್ಯಂತ ಪ್ರಮುಖವಾದ ಬೋಧನೆ. ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನ, ಸಮ್ಯಗ್ ಚಾರಿತ್ರ – ರತ್ನತ್ರಯಗಳಾದ ಇವು ಒಟ್ಟು ಸೇರಿ ಮೋಕ್ಷ ಮಾರ್ಗವಾಗಿದೆ. (ವರ್ಧ. ಪು –113)

ಜೈನ ದರ್ಶನದ ಪ್ರಕಾರ ಭವ ಬಂಧನವೇ ಬಗೆಬಗೆಯ ದು:ಖಗಳಿಗೆ ಕಾರಣ. (ಯಶೋ.ಚ –38). ಇದರಿಂದ ಬಿಡುಗಡೆ ಹೊಂದುವುದೇ ಪರಮ ಸುಖ. ಈ ಸುಖವನ್ನು ಸಂಪಾದಿಸಿದ ನಂತರ ದು:ಖವು ಬರಲಾರದು. ಆದುದರಿಂದ ಇದು ಸ್ಥಿರವಾದ ಸುಖವಾಗಿದೆ. ಇದು ಸಂಸಾರದಿಂದ – ಹುಟ್ಟು ಸಾವುಗಳ ಚಕ್ರದಿಂದ ಜೀವನದಿಂದ ಮುಕ್ತವಾದಾಗಲೇ ದೊರೆಯುವುದು. ಈ ಮುಕ್ತಿಯ ದಾರಿಯೇ ಧರ್ಮ.

ಜೈನ ನೀತಿ ಶಾಸ್ತ್ರದ ಪ್ರಕಾರ ಧರ್ಮಾಚರಣೆಯಲ್ಲಿ ಎರಡು ವಿಧ. ಒಂದು ಗೃಹಸ್ಥನಿಗೆ ವಿಧಿಸಿದ್ದು. ಇನ್ನೊಂದು ಸನ್ಯಾಸಿಗೆ (ಶಾಂತಿ.ಪು –195). ಜೈನ ಸಂಘದಲ್ಲಿ ಮುನಿ, ಶ್ರಾವಕ, ಆರ್ಯಿಕಾ ಮತ್ತು ಶ್ರಾವಿಕಾ ಎಂದು ನಾಲ್ಕು ವಿಭಾಗಗಳು. ಮುನಿ – ಸರ್ವಸಂಗ ಪರಿತ್ಯಾಗ ಮಾಡಿ ತಪೋನಿರತನಾಗಿ ಮೋಕ್ಷಪಥದಲ್ಲಿರುವವ; ಋಷಿ. ಶ್ರಾವಕ – ಮನೆ ಮಾಡಿಕೊಂಡಿರುವ ಪುರುಷ; ಜೈನ ಗೃಹಸ್ಥ. ಆರ್ಯಿಕಾ – ಸನ್ಯಾಸದೀಕ್ಷೆ ವಹಿಸಿದ ಸಾಧ್ವಿ; ಅಜ್ಜಿಕೆ. ಶ್ರಾವಿಕಾ – ಮನೆ ಮಾಡಿಕೊಂಡಿರುವ ಸ್ತ್ರೀ; ಜೈನ ಗೃಹಸ್ಥೆ.

2.1. ಗೃಹಸ್ಥ ಧರ್ಮ

ಗೃಹಸ್ಥರು ಅತಿ ಮುಖ್ಯವಾಗಿ ಐದು ವ್ರತಗಳನ್ನು ಅನುಸರಿಸಬೇಕು. ಅವುಗಳೆಂದರೆ – ಇತರ ಪ್ರಾಣಿಗಳಿಗೆ ಹಿಂಸೆ ಮಾಡದಿರುವುದು, ಸತ್ಯವನ್ನೇ ನುಡಿಯುವುದು, ಕಳ್ಳತನ ಮಾಡದಿರುವುದು, ವ್ಯಭಿಚಾರ ಮಾಡದಿರುವುದು. ಐಹಿಕ ಸಂಪತ್ತುಗಳ ಆಸೆಯ ವಿಷಯದಲ್ಲಿ ಒಂದು ಮಿತಿಯನ್ನು ಹಾಕಿಕೊಳ್ಳುವುದು. ಹೀಗೆ ಕ್ರಮವಾಗಿ ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂಬ ವ್ರತಗಳು.

ಆದಿ ಪುರಾಣ, ವಡ್ಡಾರಾಧನೆಗಳಲ್ಲಿ ಇದನ್ನೇ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಐದು ಬಗೆಯ ಮಹಾವ್ರತಗಳು (ವಡ್ಡಾ –18), ಆದಿ.ಪು –265) ಎಂದೂ ಶಾಂತಿ ಪುರಾಣದಲ್ಲಿ ಹಿಂಸೆಯಲ್ಲಿ ಆಸಕ್ತಿಯಿಲ್ಲದ, ಪರಸ್ತ್ರೀಗೆ ಎಳಸದ, ಕಳ್ಳತನವಿಲ್ಲದ, ಸುಳ್ಳಾಡದ, ಕಾತುರತೆಯಿಂದ ಪಂಚೇಂದ್ರಿಯಗಳ ವಿಷಯಾಭಿಲಾಷೆಯಲ್ಲಿ ಹಂಬಲಿಸದ ಐದು ಗುಣಗಳು ಜಿನ ಮತದ ಅಣು ವ್ರತಗಳು (ಶಾಂತಿ. ಪು –23) ಎಂದೂ ಹೇಳಲಾಗಿದೆ.

ಗೃಹಸ್ಥರ ಆಚರಣೆಗಾಗಿ ಪರಿಮಿತವಾದುದು ಅಣು ವ್ರತ. ವಿರಕ್ತರು ಆಚರಿಸುವ ಕಠೋರ ವಾದ ಸಂಪೂರ್ಣ ತ್ಯಾಗವು ಮಹಾವ್ರತ.

ಸಾಧಕನ ಆಧ್ಯಾತ್ಮಿಕ ದೃಷ್ಟಿಯಿಂದ ಹೇಳುವುದಾದರೆ ಅಣುವ್ರತಗಳ ಉದ್ದೇಶ ಅವನಿಗೆ ಸ್ವನಿರಾಕರಣೆ, ಸಂಯಮ ಮತ್ತು ತ್ಯಾಗಗಳನ್ನು ಕಲಿಸುವುದು. ಮೋಕ್ಷ ಮಾರ್ಗದಲ್ಲಿ ಹೋಗಲು ಸಾಧಕನಿಗೆ ಸಮ್ಯಗ್ ಶ್ರದ್ಧೆ ಇರಬೇಕು. ಧಾರ್ಮಿಕ ತತ್ವಗಳನ್ನು ನೀತಿಯ ನಿಯಮಗಳನ್ನು ತಿಳಿದಿರಬೇಕು. ರಾಗ ದ್ವೇಷಗಳಿಂದ ಉಂಟಾದ ಮನ ಕಷಾಯಗಳನ್ನು ದೃಢಮನಸ್ಸಿನಿಂದ ನಿಯಂತ್ರಿಸದಿದ್ದರೆ ಮನಸ್ಸಿನ ಶಾಂತಿಯು ಕದಡಿ ಹೋಗುತ್ತದೆ. ಬಾಹ್ಯ ಪದಾರ್ಥಗಳ ಬಗ್ಗೆ ಅನಾಸಕ್ತಿ ತೋರಿದರೆ ಸಾಲದು, ಜೀವನಕ್ಕೆ ಆಂತರಿಕ ಸ್ಫೂರ್ತಿಯು ಅವಶ್ಯಕ, ಜಿನಮತದ ಅಣು ವ್ರತಗಳ ಪಾಲನೆಯು ಅಂತಹ ಚೈತನ್ಯವನ್ನು ನೀಡುತ್ತದೆ.

ಕೊಲೆಯನ್ನು ಬಿಟ್ಟರೆ ಆಯುಷ್ಯ ಅಧಿಕವಾಗುತ್ತದೆ. ಸತ್ಯವಂತಿಕೆಯಿಂದ ಧನವಾದ ಯಶಸ್ಸು ಲಭಿಸುತ್ತದೆ. ಕಳವನ್ನು ತೊರೆದರೆ ಸಂಪತ್ತು ಪ್ರಾಪ್ತವಾಗುತ್ತದೆ. ಜಾರತನದಿಂದ ದೂರವಿದ್ದರೆ ಸೊಬಗು ಬರುತ್ತದೆ. ಅಪರಿಗ್ರಹದಿಂದ ಶ್ರೇಷ್ಠವಾದ ರಾಜ್ಯಪ್ರಾಪ್ತಿ. ಹೀಗೆ ಸದ್ಧರ್ಮವೆಂಬುದು ಬುದ್ಧಿವಂತರಿಗೆ ಆಶ್ರಯವಾಗಿದೆ. (ನೇಮಿ.ಪು.1 –32) ಗೃಹಸ್ಥರು

ಈ ಐದು ವ್ರತಗಳನ್ನು ಪಾಲಿಸಿದರೆ ಅವರ ಭಾವ ಶುದ್ಧಿಯಾಗುತ್ತದೆ. ವ್ರತಗಳ ಪಾಲನೆಯು ಸಾತ್ವಿಕ ಜೀವನಕ್ಕೆ ಸಹಾಯವಾಗುತ್ತದೆ.

2.1.1. ಅಹಿಂಸೆ:

ಜೈನ ದರ್ಶನವು ಅಹಿಂಸೆಗೆ ಬಹಳ ಮಹತ್ವ ನೀಡಿದೆ. ಆದುದರಿಂದಲೇ 'ಅಹಿಂಸಾ ಪರಮೋ ಧರ್ಮ:' ಎಂದು ಹೇಳಿದೆ. ಸಂಪೂರ್ಣವಾಗಿ ಹಿಂಸೆಯಿಂದ ನಿವೃತ್ತರಾಗುವುದೇ ಅಹಿಂಸೆಯೆನಿಸುವುದು. ಇದರ ಪೂರ್ಣ ತಿಳುವಳಿಕೆ ಉಂಟಾಗಬೇಕಾದರೆ ಹಿಂಸೆಯು ಎಲ್ಲಿ, ಹೇಗೆ ಆಗುವುದು ಎಂಬುದರ ಜ್ಞಾನ ಅಗತ್ಯ. ಅಲ್ಲದೆ ಹಿಂಸೆಯ ಪರಿಣಾಮದ ಕಲ್ಪನೆಯೂ ಇರಬೇಕು. ಯಶೋಧರ ಚರಿತೆಯಲ್ಲಿ ಪರರನ್ನು ತನ್ನಂತೆಯೇ ಕಾಣಬೇಕು, ಪ್ರಾಣಿ ಹಿಂಸೆ ಮಾಡಬಾರದು, ಧರ್ಮವು ದಯಾಮೂಲವಾದುದು. ಇದು ಇಹ ಪರ ಲೋಕಗಳ ಭವಕ್ಕೂ ಹಿತವನ್ನುಂಟು ಮಾಡುತ್ತದೆ. ಎನ್ನಲಾಗಿದೆ. (ಯಶೋ. ಚ –103)

ಜೀವ ದಯೆಯೇ ಧರ್ಮ ಎನ್ನುವ ಭಾವನೆಯನ್ನು ಚೆನ್ನಾಗಿ ನಂಬುವುದು ಸಮ್ಯಕ್ತ್ವ (ಯಶೋ. ಚ –101) ಕೊಲ್ಲದಿರುವುದೇ ಧರ್ಮವೆಂದು ನಂಬಿಕೊಂಡು ವ್ರತಗಳನ್ನು ಸ್ವೀಕರಿಸಿ ಆಚರಿಸುವುದು ಧರ್ಮವು (ವಡ್ಡಾ. 29 –30) ಹೀಗೆ ಜೈನ ಪುರಾಣಗಳು ಅಹಿಂಸಾ ತತ್ವಾಚಾರಕ್ಕೆ ಒತ್ತುಕೊಟ್ಟು ಕ್ರಮಬದ್ಧವಾದ ಒಂದು ದಾರಿಯನ್ನು ಹಾಕಿ ಕೊಟ್ಟಿವೆ.

ಜೈನ ದರ್ಶನದ ಅಹಿಂಸೆಯ ವ್ಯಾಪ್ತಿಯು ಬಹಳ ವಿಸ್ತಾರವಾಗಿದೆ. ಅದು ಜೀವ ವಧೆಗಷ್ಟೇ ಹಿಂಸೆಯೆಂದು ಅರ್ಥೈಸಿಲ್ಲ. ಅಹಿಂಸೆಯೆಂದರೆ ಶರೀರ, ಮಾತು ಮತ್ತು ಮನಸ್ಸಿನಿಂದ ಯಾವ ಜೀವಿಗೂ ಹಾನಿಯನ್ನುಂಟು ಮಾಡದಿರುವುದು ಎಂದಾಗಿದೆ. ನಡೆಯುವಾಗಲೂ, ಕುಡಿಯುವಾಗಲೂ, ಉಣ್ಣುವಾಗಲೂ, ತೆಗೆದು ಕೊಳ್ಳುವ ಮತ್ತು ಇಡುವೆಡೆಗಳಲ್ಲಿಯೂ ಕೊಳೆ ಕಶ್ಮಲಗಳನ್ನು ಪರಿತ್ಯಜಿಸುವೆಡೆಗಳಲ್ಲಿಯೂ ಜೀವ ಹಿಂಸೆಯಾಗದಂತೆ ತನ್ನನ್ನು ನೋಡಿಕೊಳ್ಳಬೇಕು (ಆದಿ. ಪು –265 –266).

ಒಟ್ಟಿನಲ್ಲಿ ಅಹಿಂಸೆಯ ಉದ್ದೇಶವು ಬುದ್ಧಿಯನ್ನು ಶುದ್ಧಗೊಳಿಸಿ ಆತ್ಮ ತತ್ವದಲ್ಲಿ ನಿಷ್ಠೆಯನ್ನು ಉಂಟುಮಾಡುವುದೇ ಆಗಿದೆ.

2.1.2. ಸತ್ಯ :

ಅಸಹನೆ, ಲೋಭ, ಹಾಸ್ಯ ಮತ್ತು ಭಯ ಎಂಬ ನಾಲ್ಕು ವಿಕಾರಗಳನ್ನು ತ್ಯಜಿಸಿ, ಧರ್ಮ ಸೂತ್ರಗಳಿಗೆ ಅನುಸಾರವಾಗಿ ಮಾತಾಡುವುದು ಸತ್ಯವ್ರತದ ಮುಖ್ಯ ಭಾವನೆ. (ಶಾಂತಿ. ಪು –196).

ವ್ರತ ಆಚರಣೆಯಲ್ಲಿರುವ ಗೃಹಸ್ಥನು ಎಂದೂ ಸುಳ್ಳು ಹೇಳಬಾರದು ಅಥವಾ ಹಾಗೆ ಮಾಡಲು ಇತರರಿಗೆ ಪ್ರೋತ್ಸಾಹ ನೀಡಬಾರದು. ಅಥವಾ ಇತರರು ಹಾಗೆ ಮಾಡಿದರೆ ಅದನ್ನು ಒಪ್ಪಬಾರದು, ಸುಳ್ಳು ಅಭಿಪ್ರಾಯಗಳನ್ನು ಹರಡುವುದು, ಇತರರ ರಹಸ್ಯಗಳನ್ನು ಹೊರಗೆಡುಹುವುದು, ಬೆನ್ನಹಿಂದೆ ದೂರುವುದು, ಕೃತಕ ಪತ್ರಗಳ ಸೃಷ್ಟನೆ ಮತ್ತು ವಿಶ್ವಾಸ ಘಾತಕತ್ವ ಇವೆಲ್ಲಾ ಅಸತ್ಯದ ಪ್ರಬೇಧಗಳು. ಆದುದರಿಂದ ಅವುಗಳ ವಿರುದ್ಧ ಯಾವಾಗಲೂ ಎಚ್ಚರದಿಂದಿರಬೇಕು.

ಕಳ್ಳರ ನಂಟರ್ತನಮುಂ
ಕಳ್ಳರ ದೆಸೆಯಿಂದ ಧನಮನರ್ಜಿಸುವುದುಮಾ
ಕಳ್ಳರ್ಗೆಡೆಗುಡುವುದುಮದು
ಕಳ್ಳತನಂ ಬ್ರತದ ಹಾನಿಯೆಂಬಂ ಜೈನ

(ಸಮ.ಪ-95)

ತುಪ್ಪದೊಳಗೆಣ್ಣೆಯುಂ ಲೇ
ಸಪ್ಪ ಹೊನ್ನೊಳಗೆ ಬೆಳ್ಳಿಯುಂ ಧನದಳುಪಿಂ
ದುಪ್ಪಿನೊಳು ಮಣ್ಣನೆಂತು
ತಪ್ಪಿಲ್ಲದೆ ನಡೆವನೆಂಬನಾಗಲ ಬೆರಸಲ

(ಸಮ.ಪ-95)

ಪಿರಿದಪ್ಪ ಕೊಳಲ್ಗಳಿಂದಂ
ಪಿರಿದೆನಿಸಿದ ಕೊಳಗದಿಂದ ಮಯಾಂ ಕೊಂಡಂ
ತಿರೆ ಪೇೞ್ದರ್ಗೆ ಕುಡುಗೆ ಕೂದಿಸಿ
ಪರದುಗೆಯಲ್ಸಲ್ಲದೆಂದು ನೆಗಳ್ವಂ ಜೈನಂ

(ಸಮ.ಪ –95)

ಪೆಱರೊಡವೆಯುಮನಳಿಪಿಂದಂ
ಕಿಱಿಕಿಱಿದಂ ಮಱಸಿ ಕೊಳ್ವನಾಣಿಲ್ಲದಮಾ
ಯಮ್ಮೞ ಗುರಿಯು ಮೆಯ್ಯೊಳಂ ನಿಲ
ಲೞಿಗುಮೆ ಕಳಲಾಗದೆಂಬ ಸುಬ್ರತಮನಿಸುಂ

(ಸಮ.ಪ-96)

2.1.3. ಅಸ್ತೇಯ :

ಮತ್ತೊಬ್ಬರ ವಸ್ತುವನ್ನು ರಹಸ್ಯವಾಗಿ ಅಥವಾ ಬಲವಂತದಿಂದ ತೆಗೆದುಕೊಳ್ಳುವುದು ಕಳವು. ಕದ್ದ ವಸ್ತುಗಳನ್ನು ತಿಳಿದಿದ್ದರೂ ಕೊಳ್ಳುವುದು. ಕಳ್ಳತನದ ಮಾರ್ಗವನ್ನು ಇತರರಿಗೆ ಹೇಳಿ ಕೊಡುವುದು, ಕೀಳು ಪದಾರ್ಥಗಳನ್ನು ಬೆರಕೆ ಮಾಡುವುದು, ಸುಳ್ಳು ತೂಕ ಮತ್ತು ಅಳತೆಗಳನ್ನು ಬಳಸುವುದು ಇವೆಲ್ಲಾ ಕಳ್ಳತನದ ಪ್ರಭೇದಗಳೇ, ಆದುದರಿಂದ ವ್ರತ ಆಚರಣೆಯಲ್ಲಿರುವ ಗೃಹಸ್ಥನು ಇವುಗಳಿಂದ ದೂರವಿರಬೇಕು.

2.1.4. ಬ್ರಹ್ಮಚರ್ಯ :

ಗೃಹಸ್ಥ ತನ್ನ ಪತ್ನಿಯನ್ನು ಪಡೆದು ಅಷ್ಟರಿಂದಲೇ ತೃಪ್ತನಾಗಬೇಕು. ಇತರ ಸ್ತ್ರೀಯರನ್ನು ಕಂಡಾಗ ಆಕೆ ನನಗೆ ತಾಯಿ, ಮಗಳು, ಸೋದರಿ ಎಂದಾಗಲಿ, ವಯಸ್ಸಿನಲ್ಲಿ ನನಗಿಂತ ಹಿರಿಯಳು, ಬಲು ಚಿಕ್ಕವಳು ಎಂದಾಗಲಿ, ನನ್ನಂತೆಯೇ ವ್ರತನಿಷ್ಠೆಯೆಂದಾಗಲಿ ಅವಳನ್ನು ಭಾವಿಸಬೇಕು. (ಶಾಂತಿ. ಪು –196)

ಸ್ತ್ರೀಯರ ಕಥಾಶ್ರವಣ, ದರ್ಶನ, ಅವರೊಡನೆ ಈ ಮೊದಲು ಭೋಗಿಸಿದ ಸುಖದ ಸ್ಮರಣೆ, ಅವರನ್ನು ಆಕರ್ಷಿಸುವಂತೆ ದೇಹಾಲಂಕರಣ, ಕಾಮ ವಿಕಾರವನ್ನು ವೃದ್ಧಿಪಡಿಸುವಂತಹ ಆಹಾರ – ಈ ಐದು ವಿಷಯಗಳನ್ನು ತ್ಯಜಿಸಬೇಕು. ಇದು ಪಂಚ ವಿಧ ಬ್ರಹ್ಮಚರ್ಯವೆನಿಸುವುದು (ಶಾಂತಿ. ಪು –196) ಬ್ರಹ್ಮಚರ್ಯ ವ್ರತ ಪಾಲನೆಯಲ್ಲಿರುವ ಗೃಹಸ್ಥರು ಅಶ್ಲೀಲವಾಗಿ ಮಾತನಾಡಿದರೂ ತಮ್ಮ ವ್ರತವನ್ನು ಭಂಗಗೊಳಿಸಿದಂತಾಗುತ್ತದೆ. ಆದುದರಿಂದ ಕಾಯಾ ವಾಚಾ ಮನಸಾ ಪರಿಶುದ್ಧಿಯನ್ನು ಹೊಂದಿರಬೇಕು.

2.1.5. ಅಪರಿಗ್ರಹ :

ಗೃಹಸ್ಥನು ಮೊದಲೇ ತನಗೆ ಹೆಚ್ಚೆಂದರೆ ಎಷ್ಟು ಐಹಿಕ ಸಂಪತ್ತಿನ ಅವಶ್ಯಕತೆ ಇದೆ ಎನ್ನುವುದರಲ್ಲಿ ಒಂದು ಮಿತಿಯನ್ನು ಹಾಕಿಕೊಳ್ಳಬೇಕು. ವಸ್ತು ವಿಷಯಗಳಲ್ಲಿನ ಮೋಹವನ್ನು ತ್ಯಜಿಸಬೇಕು.

ಇದು ನಾನು ಇಷ್ಟಪಡುವ ವಿಷಯ, ಇದು ನನಗೆ ಬೇಡಾದುದು ಎಂದು ಇಂದ್ರಿಯ ವಿಷಯಗಳನ್ನು ವಿಂಗಡಿಸಿ ಅವುಗಳಲ್ಲಿ ಅತಿ ಪ್ರೇಮವನ್ನಾಗಲಿ ದ್ವೇಷವನ್ನಾಗಲಿ ಇಟ್ಟುಕೊಳ್ಳಬಾರದು (ಶಾಂತಿ. ಪು –197). ಮೋಹ ಲೋಭಗಳನ್ನು ನಾಶಮಾಡಿ ಸಮತಾಭಾವದಿಂದ

ಇದ್ದ ಸಂಪತ್ತನ್ನು ಭೋಗಿಸುತ್ತಾ, ಆಗಮ ತತ್ವಗಳನ್ನು ಪಾಲಿಸುತ್ತಾ ಆತ್ಮೋದ್ಧಾರ ಮಾಡಿಕೊಳ್ಳಬೇಕು.

ಜಿನಮತದ ಅಣು ವ್ರತಗಳನ್ನು ಪಾಲಿಸುವವನು ಆತ್ಮೋನ್ನತಿ ಹೊಂದಿ ನಿರ್ಮಲ ಮನಸ್ಸು ಮತ್ತು ಚಾರಿತ್ರ ಪಡೆಯುತ್ತಾನೆ. ಈ ವ್ರತಗಳ ಪಾಲನೆಯಿಂದ ತ್ಯಾಗಭಾವ ಉಂಟಾಗಿ ಸನ್ಯಾಸ ವಿಧಿಗಳನ್ನು ಶುದ್ಧ ಮನಸ್ಸಿನಿಂದ ಪಾಲಿಸುವ ಯೋಗ್ಯತೆ ಗಳಿಸುತ್ತಾನೆ. ಅವನಲ್ಲಿ ಧರ್ಮದಲ್ಲಿನ ನಂಬಿಕೆ ಶ್ರದ್ಧೆಗಳು ಹೆಚ್ಚುತ್ತವೆ. ಒಟ್ಟಿನಲ್ಲಿ ಅಣು ವ್ರತಗಳ ಉದ್ದೇಶ ಅವನಿಗೆ ಸ್ವ–ನಿರಾಕರಣೆ, ಸಂಯಮ ಮತ್ತು ತ್ಯಾಗಗಳನ್ನು ಕಲಿಸುವುದು. ಈ ಉದ್ದೇಶವು ಗುಣ ವ್ರತಗಳೆಂಬ ಮೂರು ವ್ರತಗಳಲ್ಲಿ ಇನ್ನೂ ಸ್ಪಷ್ಟವಾಗುತ್ತದೆ.

ದಿಕ್ಕುಗಳ ಎಲ್ಲೆಯನ್ನು ಗೊತ್ತುಪಡಿಸಿ ಸಂಚರಿಸುವುದು – ದಿಗ್ವ್ರತ, ದಿಗ್ ವ್ರತದಿಂದ ಸಂಚರಿಸುವ ಪ್ರದೇಶವನ್ನು ಸೀಮಿತಗೊಳಿಸಿಕೊಂಡಂತೆ ಇಂತಹ ಕಾಲದಲ್ಲಿ ಇಂತಹ ಪ್ರದೇಶದಲ್ಲಿ ಮಾತ್ರ ಸಂಚರಿಸುವೆ ಎನ್ನುವ ಕಾಲ ಮರ್ಯಾದೆಯನ್ನು ಇಟ್ಟುಕೊಳ್ಳುವುದು – ದೇಶ ವ್ರತ. ಅಸ್ತ್ರ, ದಂಡ ಮತ್ತು ಆಯುಧಗಳನ್ನು ಬಳಸದಿರುವುದು ಅಥವಾ ಕೊಡದಿರುವುದು – ಅನರ್ಥ ದಂಡ ವ್ರತ. (ವರ್ಧ.ಪು –113)

ಜೈನ ದರ್ಶನದ ಪ್ರಕಾರ ಗುಣ ವ್ರತಗಳು – ದಿಗ್ ವ್ರತ, ದೇಶವ್ರತ ಮತ್ತು ಅನರ್ಥ ದಂಡ ವ್ರತ ಎಂದು. ಜೈನ ಪುರಾಣಗಳಲ್ಲಿ ಕೆಲವೆಡೆ ದಿಗ್ ಮತ್ತು ದೇಶ ವ್ರತಗಳು ಒಂದು ಎಂದು ಹೇಳಿ ಭೋಗೋಪಭೋಗ ಪರಿಮಾಣ ವ್ರತ ಇನ್ನೊಂದು ಎಂಬುದಾಗಿ ಹೇಳಲಾಗಿದೆ. ಹೆಚ್ಚು ಭೋಗೋಪಭೋಗಗಳಲ್ಲಿ ಮಿತಿಯಿರುವುದು (ಶಾಂತಿ. ಪು –113) ಆಭರಣ, ಬಟ್ಟೆಬರೆ, ಹೂವು, ಲೇಪನಾದಿಗಳಲ್ಲಿ ಕೆಲವನ್ನು ಮಾತ್ರ ಬಳಸುವುದು (ಆದಿ. ಪು –256) ಭೋಗೋಪಭೋಗ ಪರಿಮಾಣ ವ್ರತದ ನಿಯಮ. ಕೊನೆಯದು ಅನರ್ಥ ವ್ರತ.

ಒಟ್ಟಿನಲ್ಲಿ ಎಲ್ಲ ದಿಕ್ಕುಗಳಲ್ಲೂ ದೂರದ ಮಿತಿಯನ್ನು ಹಾಕಿಕೊಂಡು ಅವುಗಳನ್ನು ಮೀರಿ ಎಂದೂ ಸಂಚರಿಸಕೂಡದು. ತನ್ನ ಅವಶ್ಯಕತೆಗಳಿಗನುಗುಣವಾಗಿ ಒಂದು ನಿರ್ದಿಷ್ಟ ಕಾಲದ ವರೆಗೆ ತನ್ನ ಸಂಚಾರಗಳಿಗೆ ಇನ್ನೂ ಹೆಚ್ಚಿನ ಮಿತಿಗಳನ್ನು ಕಲ್ಪಿಸಿಕೊಳ್ಳಬೇಕು. ಕೊನೆಯದಾಗಿ ಒಂದು ನಿರ್ದಿಷ್ಟ ಕಾಲದವರೆಗೆ ತನ್ನ ಆಸ್ತಿಗಳಿಗೆ ಮತ್ತು ಉದ್ಯೋಗಗಳಿಗೆ ಮಿತಿಯನ್ನು ಹಾಕಿಕೊಂಡು, ಕೆಟ್ಟ ಯೋಜನೆಗಳು, ಆಯುಧಗಳ ಸಂಗ್ರಹ ಮತ್ತು ಬಳಕೆಯ ವಿಷಯದಲ್ಲಿ ಎಚ್ಚರಿಕೆ ಇಲ್ಲದಿರುವುದು, ಇನ್ನೊಬ್ಬರಿಗೆ ಕೆಟ್ಟದನ್ನು ಮಾಡಿ ಅಥವಾ

ಹಾಗೆ ಮಾಡಲು ಪ್ರಚೋದಿಸಿ ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವುದು – ಇವುಗಳೆಲ್ಲವನ್ನೂ ವರ್ಜಿಸಬೇಕು. (ವರ್ಧ. ಪು –113)

ಮುಂದಿನ ನಾಲ್ಕು ವ್ರತಗಳು ಅವನನ್ನು ಇನ್ನೂ ಒಂದು ಹೆಜ್ಜೆ ಮುಂದೆ ಕೊಂಡೊಯ್ಯುತ್ತವೆ. ಅವುಗಳನ್ನು ಶಿಕ್ಷಾವ್ರತಗಳೆನ್ನುತ್ತಾರೆ. ಈ ವ್ರತಗಳು ಗೃಹಸ್ಥನನ್ನು ನೇರವಾಗಿ ತಪ:ಕ್ರಿಯೆಗಳಲ್ಲಿ ತೊಡಗಿಸುತ್ತವೆ. ತೀವ್ರವಾದ ಉಪವಾಸ, ಆಹಾರ, ಅಭಯ, ಬೈಷಜ ಶಾಸ್ತ್ರ ಎಂಬ ದಾನಗಳಲ್ಲಿ ಆಸಕ್ತಿ; ಸಮತಾಭಾವ, ಅಥವಾ ಸಾಮಾಯಿಕ, ಅತಿಥಿ ಸತ್ಕಾರ ಎಂಬ ಈ ನಾಲ್ಕು ಶಿಕ್ಷಾವ್ರತಗಳು (ಶಾಂತಿ. ಪು –23)

ತಿಂಗಳಲ್ಲಿ ನಾಲ್ಕು ದಿವಸ ಎಂದರೆ ಅಷ್ಟಮಿಯ ಎರಡು ದಿವಸಗಳು ಮತ್ತು ಚತುರ್ದಶಿಯ ಎರಡು ದಿವಸಗಳು ಅವನು ಯಾವುದೇ ರೀತಿಯ ಆಹಾರ ಪಾನಿಯಗಳನ್ನು ತೆಗೆದುಕೊಳ್ಳದೆ ಸಂಪೂರ್ಣ ಉಪವಾಸವನ್ನು ಆಚರಿಸಬೇಕು ಮತ್ತು ಏಕಾಂತದಲ್ಲಿ ಕುಳಿತು ಧರ್ಮಗ್ರಂಥಗಳ ಅಧ್ಯಯನದಲ್ಲಿ ತೊಡಗಿಯೋ ಆತ್ಮನನ್ನು ಕುರಿತು ಚಿಂತಿಸುತ್ತಲೋ ಇಡೀ ದಿನವನ್ನು ಕಳೆಯಬೇಕು. ಆಹಾರ, ಅಭಯ ಮತ್ತು ಔಷದ ದಾನಗಳಲ್ಲಿ ಆಸಕ್ತಿ ಹೊಂದಿರಬೇಕು. ದಾನವನ್ನು ನಿರಪೇಕ್ಷ ಬುದ್ಧಿಯಿಂದ ಕೊಡಬೇಕು. ಪ್ರಸಿದ್ಧಿಯ ಅಥವಾ ಗೌರವದ ಆಸೆ ಹೊಂದಿರಕೂಡದು. ಶಾಂತಿಭಂಗವಾಗದ ನಿರ್ಜನ ಪ್ರದೇಶದಲ್ಲಿ ಕುಳಿತು ಆತ್ಮ ಧ್ಯಾನ ಮಾಡುವುದು ಸಾಮಾಯಿಕ ಎನಿಸುವುದು. ಆಗ ಅವನು ತಾತ್ಕಾಲಿಕವಾಗಿ ಮನಸ್ಸಿನಿಂದ ಐಹಿಕವಾದ ಎಲ್ಲಾ ಐಶ್ವರ್ಯವನ್ನು ಮಮತೆಯನ್ನು ಮತ್ತು ದ್ವೇಷವನ್ನೂ ತ್ಯಾಗ ಮಾಡಿ ಆತ್ಮನ ಸ್ವರೂಪ ಮತ್ತು ಮೋಕ್ಷ ಮಾರ್ಗಗಳನ್ನು ಕುರಿತು ಧ್ಯಾನ ಮಾಡಬೇಕು. ಇದರಿಂದ ಮಾನಸಿಕ ಶಾಂತಿಯೂ ಶಕ್ತಿಯೂ ಲಭಿಸುತ್ತದೆ. ಪ್ರತಿದಿನ ತನಗಾಗಿ ಸಿದ್ಧಪಡಿಸಿದ ಆಹಾರದಲ್ಲಿ ಆ ದಿನ ಆ ಹೊತ್ತಿಗೆ ತನ್ನ ಮನೆಗೆ ಬಂದ ಧರ್ಮಿಷ್ಠ ಹಾಗೂ ಪೂಜ್ಯ ವ್ಯಕ್ತಿಗಳಿಗೆ ಊಟಹಾಕಿ ನಂತರ ತಾನು ಊಟ ಮಾಡಬೇಕು.

2.1.6. ದಾನ :

ಜೈನ ದರ್ಶನದಲ್ಲಿ ದಾನಕ್ಕೆ ಮಹತ್ವವನ್ನು ನೀಡಲಾಗಿದೆ. ದಾನಗಳಲ್ಲಿ ಆಹಾರಾದಿ ದಾನಗಳು ಶ್ರೇಷ್ಠವಾದುದು. 'ಕೊಡತಕ್ಕವನು, ಕೊಡತಕ್ಕ ವಸ್ತು, ದಾನವನ್ನು ಪಡೆಯುವವನು, ಪಡೆಯುರುವ ಅತಿ ವಿಪುಲ ಫಲ – ಎಂದು ದಾನವು ನಾಲ್ಕು ವಿಧ. ಮೊದಲು ಕೊಡುವವನು ಶ್ರದ್ಧಾದಿ ಗುಣ ಸಮನ್ವಿತನಾಗಿರಬೇಕು. ಕೊಡುವುದೆಂಬುದು ಆಹಾರ. ಅಭಯ

ಔಷಧ ಮತ್ತು ಶಾಸ್ತ್ರಗಳ ದಾನ ಎಂದು ನಾಲ್ಕು ವಿಧ. ಅಭಯಾಔಷಧ ಮತ್ತು ಶಾಸ್ತ್ರಗಳ ದಾನದ ಫಲವಾಗಿ ಅಭಯರೂ ರೋಗ ವಿಹೀನರೂ ವಿದ್ಯೈಶ್ವರ್ಯ ಸಂಪನ್ನರೂ ಆಗುವುದು ಹಿರಿದಲ್ಲ. ಅವರು ಸಂಸಾರ ಸಮುದ್ರವನ್ನು ಈಸಿ ದಾಟುವರು. ಸತ್ಪಾತ್ರ ದಾನಫಲವೇ ಫಲ. ಅದು ಉತ್ಕೃಷ್ಟವಾದ ಭೋಗ ಭೂಮಿಯಲ್ಲಿಯೂ, ನಿಶ್ಚಿಂತೆಯಿಂದ ಕಲ್ಪಾಮರ ಲೋಕಗಳಲ್ಲಿಯೂ ಜನ್ಮವೆತ್ತಲು ಸಹಾಯಕವಾಗುವುದು.
(ಆದಿ.ಪು.436 -437).

ಅರ್ಥಿಜನರಿಗೆ ನೀಡಿದ ದಾನವೇ ನಿಜವಾದ ದಾನ. ನೀಡದೆ ಇರುವುದು ಕೆಟ್ಟದು ಎಂದು ತಿಳಿಯಬೇಕು. ದಾನವನ್ನು ಬೇಸರದಿಂದಲೋ, ಚಿಂತಿಸುತ್ತಲೋ ಮುಖಮುರಿಯುತ್ತಲೋ ಸಿಟ್ಟಿನಿಂದಲೋ, ಮೂದಲಿಸುತ್ತಲೋ, ಮರುಗುತ್ತಲೋ, ಲೋಭದಿಂದಲೋ ನೀಡಬಾರದು. (ಅಜಿ.ಪು.64 - 267).

ಐದು ಅಣು ವ್ರತಗಳು, ಮೂರು ಗುಣ ವ್ರತಗಳು ಮತ್ತು ನಾಲ್ಕು ಶಿಕ್ಷಾ ವ್ರತಗಳು ಹೀಗೆ ಒಟ್ಟು ಹನ್ನೆರಡು ಮುಖ ವ್ರತಗಳನ್ನು ಒಬ್ಬ ಗೃಹಸ್ಥನು ಆಚರಿಸಬೇಕು. ಈ ವ್ರತಗಳ ಆಚರಣೆಯಿಂದ ಸಮ್ಯಗ್ ಚಾರಿತ್ರ ಒದಗುತ್ತದೆ. ಆದರೆ ಸಮ್ಯಗ್ ಚಾರಿತ್ರಕ್ಕಿಂತ ಮುಂಚೆ ಸಮ್ಯಗ್ ದರ್ಶನ ಮತ್ತು ಸಮ್ಯಗ್ ಜ್ಞಾನಗಳು ಇರಬೇಕು.

2.1.7. ರತ್ನತ್ರಯ:

ಜಿನ ಮತದಲ್ಲಿ ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನ, ಸಮ್ಯಗ್ ಚಾರಿತ್ರಗಳು ಮೋಕ್ಷಕ್ಕೆ ಸಾಧನಗಳು (ವರ್ಧ. ಪು -113) ಇಲ್ಲಿ ದರ್ಶನ ಶಬ್ದಕ್ಕೆ ಶ್ರದ್ಧಾ ಎಂದು ಅರ್ಥ. ಆದುದರಿಂದ ಮೋಕ್ಷಮಾರ್ಗದಲ್ಲಿ ಹೋಗಲು ಸಾಧಕನಿಗೆ ಪ್ರಥಮ ಸಾಧನವಾದ ಸಮ್ಯಗ್ ಶ್ರದ್ಧೆಯು ಇರಬೇಕು.

ಜಿನ ಮತದೊಳ್ ಸಮ್ಯಗ್ದರ್ಶನ ಮುಳ್ಕೊಡೆ ಸಾಲ್ವದದುವೇ ಬೀಜಂಗಡ ನೆಟ್ಟನೆ ಮೋಕ್ಷ ಸುಖಕ್ಕೆ ತಾಳ್ವುದು (ಅಜಿ.ಪು -260) ಸಿದ್ಧಿಯನ್ನು ಪಡೆದಿರುವವರ ಅಥವಾ ಸಿದ್ಧಿಯ ಹಾದಿಯಲ್ಲಿರುವವರ ವಿಷಯದಲ್ಲಿ ಮತ್ತು ಅವರ ಬೋಧನೆಗಳ ವಿಷಯದಲ್ಲಿ ಅಪಾರ ಶ್ರದ್ಧೆಯಿಡುವುದೇ ಸಮ್ಯಗ್ ದರ್ಶನ.

ಜೀವ - ಅಜೀವ - ಆಸ್ರವ -ಬಂಧ-ಸಂವರ, ನಿರ್ಜರೆ - ಮೋಕ್ಷ - ಪುಣ್ಯ - ಪಾಪ - ಈ ಒಂಭತ್ತು ಪದಾರ್ಥಗಳಲ್ಲಿ ವಿಶ್ವಾಸವನ್ನಿಡುವುದು, ಜಿನೋಕ್ತವಾದ ಪದಾರ್ಥದಲ್ಲಿ ಸಂದೇಹವನ್ನು

ಹೊಂದದಿರುವುದು, ಭೋಗಾಕಾಂಕ್ಷೆಯಿಲ್ಲದಿರುವುದು, ಮುನಿ ಜನರ ದೇಹದಲ್ಲಿ ದೋಷವನ್ನು ವಿಚಾರಿಸದಿರುವುದು, ದೇವತಾಮೂಢ – ಲೋಕ ಮೂಢ – ಮಿಥ್ಯಾಮೂಢ – ಈ ಮೂರು ವಿಧದ ಮೂಢತೆಗಳನ್ನು ತೊರೆಯುವುದು; ಅಶಕ್ತಿಯಿಂದಲೂ ಅಜ್ಞಾನದಿಂದಲೂ ಧಾರ್ಮಿಕರಲ್ಲಿ ಸಂಭವಿಸುವ ದುರ್ಗುಣಗಳನ್ನು ಪ್ರಕಾಶಪಡಿಸದಿರುವುದು, ಸದ್ಧರ್ಮ ಮಾರ್ಗದಿಂದ ಜಾರಿದ ಸಂಸಾರಿಗಳ ಸಮೂಹವನ್ನು ಪುನಃ ಧರ್ಮ ಮಾರ್ಗದಲ್ಲಿ ನೆಲೆಗೊಳಿಸುವುದು, ದೋಷರಹಿತವಾಗಿ ಜೈನ ಧರ್ಮವನ್ನು ಪ್ರಕಾಶಗೊಳಿಸುವುದು – ಈ ಎಂಟೂ ಗುಣಗಳು ಸಮ್ಯಗ್ ದರ್ಶನದ ಅಂಗಗಳು, ಇವುಗಳಿಂದ ಸಮ್ಯಗ್ ದರ್ಶನವೆಂಬ ರತ್ನವು ಬೆಳಗುವುದು. ಅದೇ ಸಮ್ಯಗ್ ಜ್ಞಾನಕ್ಕೆ ಅವಕಾಶವನ್ನೀಯುವುದು. ಅದು ಕವಲೊಡೆದು ಸಮ್ಯಗ್ ಚಾರಿತ್ರವನ್ನು ಪ್ರಕಟಗೊಳಿಸುವುದು. (ಆದಿ.ಪು.237 –238).

ಸರಿಯಾದ ಶ್ರದ್ಧೆಯು ಯಾವಾಗಲೂ ಹೃದಯದಲ್ಲಿ ಜ್ವಲಿಸುತ್ತಿರಬೇಕಾದರೆ ಗೃಹಸ್ಥನು ಇಪ್ಪತ್ತೈದು ದೋಷಗಳಿಂದ ಶುದ್ಧನಾಗಿರಬೇಕು. ಶಂಕೆ, ಆಕಾಂಕ್ಷೆ, ವಿಚಿಕಿತ್ಸೆ, ಅನ್ಯದೃಷ್ಟಿ, ಪ್ರಶಂಸೆ, ಸಂಸ್ತವ, ಸಮ್ಯಗ್ ದೃಷ್ಟಿ, ಅತಿಚಾರ – ಎಂಬ ಎಂಟು ಮಲಗಳು, ಕುಲಮದ, ರೂಪಮದ, ವಯಸ್ಸಿನ ಮದ, ತೋಳಿನ ಮದ, ತಪೋಮದ, ಕಲಾಮದ, ದೇವತಾ ಬಲಮದ, ರಾಜ್ಯಮದ – ಎಂಬ ಎಂಟು ಮದಗಳು, ದೇವತಾ ಮೂಢ, ಲೋಕ ಮೂಢ, ಮಿಥ್ಯಾಮೂಡ, – ಎಂಬ ಮೂರು ಮೂಢಗಳು. ಕುದೇವ, ಕುಗುರು, ಕುಧರ್ಮ, ಕುದೇವ ಪೂಜಕ, ಕುಗುರು ಪೂಜಕ, ಕುಧರ್ಮ ಪೂಜಕ – ಇವರ ಅನಾಯತನ ಸೇವೆ. ಹೀಗೆ ಈ ಇಪ್ಪತ್ತೈದು ದೋಷಗಳು. ಇವು ಸಮ್ಯಕ್ತ್ವದ ಉಲ್ಲಂಘನೆಯ ವರ್ತನೆಗಳು. (ವಡ್ಡಾ – 252)

ಸಮ್ಯಗ್ ಜ್ಞಾನವು ಎರಡನೆಯ ಸಾಧನ. ಶಾಸ್ತ್ರಗಳಲ್ಲಿ ಪ್ರತಿಪಾದಿತವಾದ ಸಮಸ್ತ ಸಿದ್ಧಾಂತಗಳ ಹಾಗೂ ತತ್ವಗಳ ಗಾಢವಾದ ಅನುಭವವನ್ನು ಹೊಂದುವುದು ಸಮ್ಯಗ್ಜ್ಞಾನ. ಸಂಶಯ, ವಿಪರ್ಯಯ, ಸಾವಧ್ಯ, ಅನಧ್ಯವಸಾಯ ಸ್ವಭಾವರಹಿತವಾಗಿ ಜೀವಾದಿ ಪದಾರ್ಥಗಳ ಯಥಾತ್ಮ್ಯವನ್ನರಿಯುವುದು (ಆದಿ.ಪು.462) ಲೋಕ ಅಲೋಕ ಮೊದಲಾದ ಪದಾರ್ಥಗಳ ಯಥಾರ್ಥ ಜ್ಞಾನವನ್ನು ಹೊಂದುವುದು ಸಮ್ಯಗ್ ಜ್ಞಾನ. (ಶಾಂತಿ.ಪು –194) ಈ ಜ್ಞಾನದಿಂದ ಆತ್ಮ ಕಲ್ಯಾಣಕ್ಕಾಗಿ ಉಂಟಾಗುವ ಮಾನವನ ಪ್ರವೃತ್ತಿಗಳಿಗೆಲ್ಲ ಸಮ್ಯಗ ಚಾರಿತ್ರವೆಂದು ಜೈನದರ್ಶನವು ಪ್ರತಿಪಾದಿಸುತ್ತದೆ.

ಗಾಢವಾದ ಮಿಥ್ಯಾತ್ವವೆಂಬ ಕಾಳ್ಗಿಚ್ಚಿನಿಂದ ಆವೃತ್ತವಾದ ಜೀವಕ್ಕೆ ದೃಷ್ಟಿಮೋಹದ ನಾಶವಾಗದಿದ್ದರೆ ಸ್ವರ್ಗ ಮತ್ತು ಮೋಕ್ಷ ಸಾಧಕವಾದ ಸಮ್ಯಗ್ ಜ್ಞಾನವು ಮೂಡುವುದಿಲ್ಲ. (ಆದಿ.ಪು –236)

ನಿಂದ್ಯವೂ ಅಹಿತಕಾರಿಯೂ ಆದ ಪಾಪಾಚರಣೆಯನ್ನು ಸಂಪೂರ್ಣವಾಗಿ ತೊರೆದು ಸದಾಚರಣೆಯಲ್ಲಿರುವುದು ಸಮ್ಯಗ್ ಚಾರಿತ್ರ. (ಶಾಂತಿ.ಪು –194) ಸಂಸಾರ ಪರಿತ್ಯಾಗೋದ್ಯುಕ್ತವೂ, ಸಮ್ಯಗ್ ಜ್ಞಾನೋಪೇತವೂ ಆದ ಭವ್ಯ ಜೀವನಿಗೆ ಬಾಹ್ಯಾಭ್ಯಂತರ ಕ್ರಿಯೆಗಳಿಂದ ನಿವೃತ್ತಿಯು ಸಮ್ಯಗ್ ಚಾರಿತ್ರ. (ಆದಿ.ಪು –236)

ಆಚರಣೆಯ ಅನುಕೂಲಕ್ಕೋಸ್ಕರ ಗೃಹಸ್ಥನ ಸಮ್ಯಗ್ ಚಾರಿತ್ರದ ಮಾರ್ಗವನ್ನು ಹನ್ನೊಂದು ಘಟ್ಟಗಳಾಗಿ ವಿಂಗಡಿಸಲಾಗಿದೆ. ಅವುಗಳನ್ನು ಗೃಹಸ್ಥರ ನಿಲಯಗಳು ಎನ್ನಲಾಗುತ್ತದೆ. ಸಮ್ಯಗ್ ದರ್ಶನ, ಅಣು ವ್ರತ, ಸಮತೀಭಾವನೆಯೆಂಬ ಸಾಮಾಯಿಕ, ಪ್ರೋಷಧೋತವಾದ, ಹಸಿಯದಾದ ಹಣ್ಣು ಹೂ ಮೊದಲಾದ್ದನ್ನು ಸ್ವೀಕರಿಸುವುದಿಲ್ಲವೆಂಬ ಪ್ರತಿಜ್ಞೆ, ಹಗಲು ಸ್ತ್ರೀ ಸಂಗವರ್ಜನೆ, ಬ್ರಹ್ಮಚರ್ಯ, ಆರಂಭತ್ಯಾಗ, ಪರಿಗ್ರಹ ತ್ಯಾಗ, ಅನುಮತಿ ತ್ಯಾಗ, ಉದಯತ್ಯಾಗ – ಇವು ಹನ್ನೊಂದು ಗೃಹಸ್ಥರ ನಿಲಯಗಳು (ಆದಿ.ಪು.257)

ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನಗಳಿಂದ ಶೋಭಿಸುವವನ ಆಚಾರವು ಸಮ್ಯಗ್ ಚಾರಿತ್ರವಾಗಿದೆ. ಇದು ಸಹಭಾವ ವಿಚಾರಗಳ ಪರಿಣಾಮವಾಗಿದೆ. ಚಾರಿತ್ರದ ಸಿದ್ಧಿಗಾಗಿ ಗೃಹಸ್ಥನು ಪ್ರಮುಖವಾದ ಐದು ಅಣು ವ್ರತಗಳನ್ನು ಪಾಲನೆ ಮಾಡುವುದು ಅತ್ಯಾವಶ್ಯಕವಾಗಿದೆ.

ಹೀಗೆ; ಶ್ರೇಷ್ಠವಾದ ಸಮ್ಯಗ್ ಜ್ಞಾನ – ಸಮ್ಯಗ್‌ದರ್ಶನ – ಸಮ್ಯಗ್ ಚಾರಿತ್ರದಿಂದ ಮುಕ್ತಿಯನ್ನು ಪಡೆಯಬಹುದು. (ಅಜಿ.ಪು –52)

ಸಮ್ಯಕ್ತ್ವವನ್ನು ನಂಬಿದವರು ಸ್ತ್ರೀ ಜನ್ಮದಲ್ಲಿ ಹುಟ್ಟುವುದಿಲ್ಲ. ಹಾಗೆಯೇ ನರಕ ಭೂಮಿಯಲ್ಲಿಯೂ ಜನಿಸುವುದಿಲ್ಲ. ಸಮ್ಯಕ್ತ್ವದ ಫಲ ಅತಿಶಯವಾದುದು. ಇದನ್ನು ನಂಬಿ ಆಚರಿಸಿದವರಿಗೆ ಪ್ರಖ್ಯಾತವಾದ – ಸಜ್ಜಾತಿ, ಸದ್ಗೃಹಸ್ಥತ್ವ, ಮುನಿವ್ರತಧಾರಣ, ಇಂದ್ರಪದವಿ, ಸಾಮ್ರಾಜ್ಯ ಪದವಿ, ತೀರ್ಥಂಕರ ಪದವಿ, ಸಿದ್ಧ ಪದವಿ – ಏಳು ಪರಮ ಸ್ಥಾನಗಳು ಪ್ರಾಪ್ತವಾಗುತ್ತದೆ. (ಆದಿ.ಪು –239)

ಉತ್ಕೃಷ್ಟವಾದ ಉಪಶಮ, ಧರ್ಮದ ಮೇಲೆ ಪ್ರೀತಿ, ದಯೆ, ಜಿನೋಕ್ತವಾದ ಗುಣ ಪರಿಕರಗಳಲ್ಲಿ ಸಿದ್ಧವಾದ ನಂಬುಗೆ ಇವು ನಿರುಪಮವಾದ ಸಮ್ಯಕ್ತ್ವಂ. (ಆದಿ.ಪು.237)

ಜಗಖ್ಯಾತನಾದ ಜಿನೇಂದ್ರನೇ ದೇವರು. ಅಹಿಂಸೆಯೇ ಧರ್ಮ, ವೈರಾಗ್ಯವೇ ತಪಸ್ಸು; ಈ ರೀತಿಯಾಗಿ ನಂಬಿ ನಡೆಯುವುದೇ ಸಮ್ಯಕ್ತ್ವಂ. (ನೇಮಿ.ಪು.1 -32)

2.2. ಸನ್ಯಾಸ ಧರ್ಮ :

ಐದು ಅಣು ವ್ರತಗಳು ಐದು ಮಹಾವ್ರತಗಳಿಗಾಗಿ ಪೂರ್ವಭಾವಿ ಪರೀಕ್ಷೆಯಿದ್ದಂತೆ. ಗೃಹಸ್ಥನಿಗೆ ವಿಧಿಸಿದ ನೀತಿ ನಿಯಮದ ಉದ್ದೇಶ ಅವನನ್ನು ಹೆಂಡತಿ, ಮಕ್ಕಳು, ಆಸ್ತಿ ಮತ್ತು ಸಂಪತ್ತು ಮುಂತಾದವುಗಳಿಂದ ಮುಕ್ತನನ್ನಾಗಿಸುವುದಕ್ಕೆ. ಈ ವ್ರತಗಳನ್ನು ಮುಗಿಸಿದ ನಂತರ ಗೃಹಸ್ಥನು ಸನ್ಯಾಸವನ್ನು ಪ್ರವೇಶಿಸುತ್ತಾನೆ ಎಂದು ನಿರೀಕ್ಷಿಸಲಾಗುತ್ತದೆ. ಸಾಂಸಾರಿಕ ಆವರಣದಿಂದ ಮುಕ್ತವಾದ ಅವನ ಪ್ರೇಮ ಮತ್ತು ಕರುಣೆಗಳು ಅಲ್ಲಿಂದ ಮುಂದೆ ಸಮಸ್ತ ಜೀವಂತ ಸೃಷ್ಟಿಗೆ ಲಭಿಸುತ್ತದೆ. ಈ ಹಂತದಲ್ಲಿ ಗೃಹಸ್ಥನು ತನ್ನ ಮನೆಯನ್ನು ತ್ಯಜಿಸಿ ಪ್ರಕೃತಿಯೇ ತನ್ನ ಮನೆಯೆಂದು ಭಾವಿಸಿ ಅಲ್ಲಿ ವಾಸಿಸತೊಡಗುತ್ತಾನೆ. ಅಲ್ಲಿ ಅವನು ತನ್ನ ಹೊಸ ಆವರಣಗಳಿಗೆ ಉಚಿತವಾದ ಕೆಲವು ನಿಯಮ ಮತ್ತು ಜೀವನ ವಿಧಾನವನ್ನು ಅನುಸರಿಸುತ್ತಾನೆ. ಅವನ ಜೀವನ, ವಿಹಾರ, ನಿವಾಸ ಇವೆಲ್ಲ ಅನೇಕ ಶಾರೀರಿಕ ಕಷ್ಟ ತೊಂದರೆಗಳನ್ನು ಸಹಿಸಬೇಕಾಗುತ್ತದೆ. ಅವನ ನಗ್ನವಾದ ಶರೀರಕ್ಕೆ ಅನೇಕ ಬಾಧೆಗಳು ಉಂಟಾಗುತ್ತವೆ.

ಸನ್ಯಾಸಿಯು ಇಪ್ಪತ್ತೆರಡು ರೀತಿಯ ಪರೀಷಹಗಳನ್ನು ಸಹಿಸಿಕೊಂಡು ತನ್ನ ದೇಹ ಮತ್ತು ಮನಸ್ಸುಗಳನ್ನು ಸಂಯಮಿಸುತ್ತಾನೆ. (ವಡ್ಡಾ - 194)
ಹಸಿವು, ಬಾಯಾರಿಕೆ, ಚಳಿ, ಬಿಸಿ, ಕ್ರಿಮಿ ಕೀಟಗಳ ಕಡಿತ, ಬತ್ತಲೆಯಿಂದಾಗ ತೊಂದರೆ, ಅರತಿಯ ಬಾಧೆ, ಸ್ತ್ರೀಯರಿಂದ ತೊಂದರೆ, ಓಡಾಡುವಾಗ ಆಗುವ ತೊಂದರೆ, ಮಲಗುವಾಗ ಆಗುವ ಬಾಧೆ, ಕುಳಿತಿರುವಾಗ ಆಗುವ ಬಾಧೆ, ಬೈಗುಳು, ಪೆಟ್ಟು, ಭಿಕ್ಷೆಬೇಡುವಾಗ ಬರುವ ಕಷ್ಟನಿಷ್ಠುರ, ಭಿಕ್ಷೆ ದೊರೆಯದ ದುಃಖ, ತಪೋಮಹಿಮೆಗಳು ಕಾಣದಿರುವುದರಿಂದ ಆಗುವ ವ್ಯಥೆ, ರೋಗ, ಕಲ್ಲುಮುಳ್ಳಿನ ಬಾಧೆ, ತನ್ನ ಪ್ರಜ್ಞೆಗಾಗಿ ಅಹಂಕಾರ ಪಡುವಿಕೆ, ಉತ್ತಮ ಜ್ಞಾನವನ್ನಪೇಕ್ಷಿಸಿ ಅಜ್ಞಾನಕ್ಕಾಗಿ ಕೊರಗುವುದು, ಸ್ನಾನ ಮಾಡದಿರುವುದರಿಂದ ಆಗುವ ಬಾಧೆ, ಜನರು ಗೌರವಿಸಲಿಲ್ಲ ಎಂಬ ಕೊರಗು - ಹೀಗೆ ಈ ಇಪ್ಪತ್ತೆರಡು ಬಗೆಯ ತೊಂದರೆಗಳನ್ನು ಸಹಿಸಿಕೊಳ್ಳುವುದು.

ಜೀವಿಗಳ ವಿಷಯದಲ್ಲಿ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಗಳೆಂಬ ಐದು ವ್ರತಗಳನ್ನು ಮಹಾವ್ರತಗಳೆಂದು ಭಾವಿಸಿ ಕಟ್ಟುನಿಟ್ಟಾಗಿ ಪಾಲಿಸಬೇಕು. (ಆದಿ.ಪು-265) ಗೃಹಸ್ಥರಂತೆ ಅವುಗಳನ್ನು ಅಣುವ್ರತಗಳೆಂದು ಭಾವಿಸಬಾರದು.

ಕೊಲ್ಲದಿರುವುದೇ ಧರ್ಮ ; ಹೀಗೆ ನಂಬಿ ಕೊಂಡು ವ್ರತಗಳನ್ನು ಸ್ವೀಕರಿಸಿ ಆಚರಿಸುವುದು. (ವಡ್ಡಾ -30) ಯಾವ ಸಂದರ್ಭದಲ್ಲಿಯೂ, ತನ್ನ ಪ್ರಾಣ ಸಂರಕ್ಷಣೆಯ ಸಮಯದಲ್ಲಿಯೂ ಕೂಡ, ಯಾವ ಜೀವಿಗಳಿಗೂ ಕಾಯಾ ವಾಚಾ ಮನಸಾ ಹಿಂಸೆಯನ್ನು ಮಾಡಕೂಡದು. ಉಳಿದ ನಾಲ್ಕು ವ್ರತಗಳನ್ನು ಅಷ್ಟೇ ಕಟ್ಟುನಿಟ್ಟಾಗಿ ಆಚರಿಸಬೇಕು.

ತನ್ನ ಶರೀರದಿಂದ ಬೇರೆ ಜೀವಿಗಳಿಗೆ ಹಿಂಸೆಯಾಗಬಾರದೆಂಬ ಉದ್ದೇಶದಿಂದ ಸನ್ಯಾಸಿಯು ಕೆಲವು ಎಚ್ಚರಿಕೆಗಳನ್ನು ವಹಿಸುತ್ತಾನೆ. ನಡೆಯುವಾಗ ಜೀವ ಹಿಂಸೆಯಾಗದಂತೆ ಒಂದು ಮಾರು ದಾರಿಯನ್ನು ನೋಡುತ್ತಾ ನಡೆಯುವುದು — ಈರ್ಯಾ ಸಮಿತಿ, ತನಗೂ ಪರರಿಗೂ ಹಿತಮಿತವಾದ ನಿರ್ದೋಷಯುಕ್ತವಾದ ಪ್ರಿಯ ವಚನಗಳನ್ನಾಡುವುದು — ಭಾಷಾ ಸಮಿತಿ, ದಾನಿಗಳು ಕೊಡುವ ಆಹಾರವನ್ನು ಹರ್ಷ—ವಿಷಾದಗಳಿಲ್ಲದೆ ಸ್ವೀಕರಿಸುವುದು — ಏಷಣಾ ಸಮಿತಿ, ತನ್ನ ವಸ್ತುಗಳನ್ನು ತೆಗೆದುಕೊಳ್ಳುವಾಗಲೂ ಇಡುವಾಗಲೂ ಜೀವ ಹಿಂಸೆಯಾಗದಂತೆ ನೋಡಿಕೊಳ್ಳುವುದು — ಆದಾನ ನಿಕ್ಷೇಪಣ ಸಮಿತಿ, ಕೊಳೆ ಕಶ್ಮಲಗಳನ್ನು ಪರಿತ್ಯಜಿಸುವೆಡೆಗಳಲ್ಲಿ ಜೀವ ಹಿಂಸೆಯಾಗದಂತೆ ನೋಡಿಕೊಳ್ಳುವುದು — ಉತ್ಸರ್ಗ ಸಮಿತಿ, ಹೀಗೆ ಐದು ಸಮಿತಿಯಿಂದ ಸನ್ಯಾಸಿಯು ತನ್ನಿಂದ ಆಗಬಹುದಾದ ಪ್ರಾಣನಾಶದ ಅಥವಾ ಹಿಂಸೆಯ ಸಾಧ್ಯತೆಯನ್ನು ತಡೆಗಟ್ಟುತ್ತಾನೆ. (ವಡ್ಡಾ -265)

ಮುಂದಿನ ಹಂತದಲ್ಲಿ ಸನ್ಯಾಸಿಯು ಪಾಲಿಸಬೇಕಾದ ಹತ್ತು ಧರ್ಮಗಳೆಂದರೆ — ಉತ್ತಮ ಕ್ಷಮ, ಮಾರ್ದವ, ಆರ್ಜವ, ಸತ್ಯ, ಶೌಚ, ಸಂಯಮ, ತಪ, ತ್ಯಾಗ, ಆಕಿಂಚನ್ಯ ಮತ್ತು ಬ್ರಹ್ಮಚರ್ಯ. (ಶಾಂತಿ.ಪು -195)

ನಡೆವಲ್ಲಿ, ನುಡಿವಲ್ಲಿ, ಆಹಾರ ಸೇವನೆಯಲ್ಲಿ, ಏನನ್ನಾದರೂ ಕೈಯಿಂದ ಎತ್ತಿಕೊಳ್ಳುವಲ್ಲಿ ಇಡುವಲ್ಲಿ ಜೀವ ಹಿಂಸೆಯಾಗದಂತೆ ಎಚ್ಚರದಿಂದ ನಡೆಯುವುದು; ಪಂಚ ಸಮಿತಿ, ಮನಸ್ಸು, ಮಾತು, ಮತ್ತು ದೇಹ — ಇವು ಮೂರನ್ನು ಸಂಯಮಿಸುವುದು ತ್ರಿಗುಪ್ತಿ. ಮೋಕ್ಷವನ್ನು ಬಯಸುವವನು ಇವುಗಳನ್ನು ಜೀವನ ಪರ್ಯಂತ ಪಾಲಿಸಬೇಕು.

ಅಸಹನೆ, ಲೋಭ, ಹಾಸ್ಯ ಮತ್ತು ಭಯ ಎಂಬ ನಾಲ್ಕು ವಿಕಾರಗಳನ್ನು ತ್ಯಜಿಸಿ ಧರ್ಮ ಸೂತ್ರಗಳಿಗೆ ಅನುಸಾರವಾಗಿ ಮಾತಾಡುವುದು ಸತ್ಯ ವ್ರತದ ಮುಖ್ಯ ಭಾವನೆ.

ಸ್ತ್ರೀಯರ ಕಥಾಶ್ರವಣ, ದರ್ಶನ, ಸ್ಮರಣೆ, ಅವರನ್ನು ಆಕರ್ಷಿಸುವಂತಹ ಅಲಂಕಾರ, ಕಾಮ ವಿಕಾರಗಳನ್ನು ವೃದ್ಧಿಪಡಿಸುವಂತಹ ಆಹಾರ ಸೇವನೆ — ಈ ಐದು ವಿಷಯಗಳನ್ನು ತ್ಯಜಿಸುವುದು ಪಂಚವಿಧ ಬ್ರಹ್ಮಚರ್ಯವೆನಿಸುವುದು.

ಸ್ತ್ರೀಯನ್ನು ಕಂಡಾಗ ಈಕೆ ತನ್ನ ತಾಯಿ, ಮಗಳು, ಸೋದರಿ ಎಂದಾಗಲಿ, ವಯಸ್ಸಿನಲ್ಲಿ ನನಗಿಂತ ಹಿರಿಯಳು, ಬಲು ಚಿಕ್ಕವಳು ಎಂದಾಗಲಿ, ನನ್ನಂತೆಯೇ ವ್ರತನಿಷ್ಠೆ ಎಂದಾಗಲಿ ಅವಳನ್ನು ಭಾವಿಸಬೇಕು. (ಶಾಂತಿ.ಪು.196)

ಇದು ನಾನು ಇಷ್ಟಪಡುವ ವಿಷಯ, ಇದು ನನಗೆ ಬೇಡಾದುದು ಎಂದು ಇಂದ್ರಿಯ ವಿಷಯಗಳನ್ನು ವಿಂಗಡಿಸಿ ಅವುಗಳಲ್ಲಿ ಅತಿ ಪ್ರೇಮವನ್ನಾಗಲಿ, ದ್ವೇಷವನ್ನಾಗಲಿ ಇಟ್ಟುಕೊಳ್ಳದೆ ತಪೋನಿಯಮವನ್ನು ಆಚರಿಸುವುದೇ ನಿಷ್ಕಿಂಚನತ್ವ. (ಶಾಂತಿ.ಪು.197) [1]

ಸಾಧಕನು ಈ ಎಲ್ಲಾ ವ್ರತಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ಇಂದ್ರಿಯ ಭೋಗ ವಸ್ತುಗಳಿಂದ ವಿಚಲಿತವಾಗದಂತೆ ತನ್ನನ್ನು ತಾನು ಶಿಕ್ಷಿಸಿಕೊಳ್ಳಬೇಕು. 'ಪಂಚ ಮಹಾವ್ರತಗಳು, ಪಂಚಸಮಿತಿಗಳು, ಪಂಚೇಂದ್ರಿಯ ನಿಗ್ರಹ, ಷಡಾವಶ್ಯಕಗಳು, ಸ್ನಾನಾಭಾವ, ಭೂಮಿಶಯನ, ನಗ್ನತ್ವ, ಕೇಶೋತ್ಪಾಟನ, ಏಕಾಶನ, ದಂತಧಾವನಾಭಾವ, ಸ್ಥಿತಾಶನ – ಮೊದಲಾದ ಸನ್ಯಾಸಿಯ ಇಪ್ಪತ್ತೆಂಟು ಮೂಲ ಗುಣಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. (ವರ್ಧ. ಪು.126). ಎಲ್ಲ ವಿಷಯಗಳಿಂದಲೂ ತನ್ನ ಇಂದ್ರಿಯಗಳನ್ನು ವಿಮುಖಗೊಳಿಸಿ, ಆತ್ಮದ ಮೇಲೆ ತನ್ನ ಮನಸ್ಸನ್ನು ಕೇಂದ್ರೀಕರಿಸಿ ಧ್ಯಾನವನ್ನು ಮಾಡಬೇಕು.

ಸನ್ಯಾಸಿಯು ಜೈನ ಧರ್ಮದ ಸಪ್ತ ತತ್ವಗಳಾದ; ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷ – ಸತ್ಯದ ಸ್ವಭಾವ (ಅನಂ.ಪು – 240) ಅರ್ಹಂತರ ಮತ್ತು ಸಿದ್ಧರ ಗುಣಗಳು ಮತ್ತು ಮುಕ್ತಿ ಮಾರ್ಗ ಇವುಗಳನ್ನು ಕುರಿತು ಆಳವಾದ ಧ್ಯಾನವನ್ನು ಮಾಡಬೇಕು. ಆಗ ಅವನಿಗೆ ಹಸಿವು ಬಾಯಾರಿಕೆಗಳಾಗಲಿ, ಶೀತೋಷ್ಣಗಳಾಗಲಿ, ಪ್ರಶಂಸೆ ನಿಂದೆಗಳಾಗಲಿ, ಪೂಜೆತಾಡನಗಳಾಗಲಿ ಯಾವುದೇ ರೀತಿಯ ಪರಿಣಾಮವನ್ನು ಉಂಟು ಮಾಡಕೂಡದು. ಈಗ ಅವನ ಮುಂದಿರುವ ಗುರಿ ಸಂಯಮ ಮತ್ತು ಜ್ಞಾನಗಳ ವಿಷಯದಲ್ಲಿ ಪೂರ್ಣತೆಯನ್ನು ಸಾಧಿಸುವುದು.

ಅಡಿಟಿಪ್ಪಣಿ:

1 ಗೃಹಸ್ಥ ಮತ್ತು ಸನ್ಯಾಸ ಧರ್ಮದ ಆಚರಣೆಯಲ್ಲಿ ಪಾಲಿಸಬೇಕಾದ ಅಣುವ್ರತ ಮಹಾವ್ರತಗಳು ಒಂದೇ ಲಕ್ಷಣಗಳನ್ನು ಹೊಂದಿದ್ದರೂ ಸನ್ಯಾಸದಲ್ಲಿ ಅದರ ಆಚರಣೆ ಕಠಿಣ ಮತ್ತು ಕಟ್ಟುನಿಟ್ಟಾಗಿ ಪಾಲಿಸಬೇಕು. ಗೃಹಸ್ಥಧರ್ಮದ ಆಚರಣೆಯಲ್ಲಿ ಈ ವ್ರತದ ವಿವರಣೆ ನೀಡಿದ್ದರೂ ಇದು ಮುಖ್ಯ ವ್ರತವಾದ್ದರಿಂದ ಇಲ್ಲಿ ಸಂಕ್ಷಿಪ್ತವಾಗಿ ಪುನಃ ಕೊಡಲಾಗಿದೆ.

ಆಧ್ಯಾತ್ಮಿಕ ಪ್ರಗತಿಯಲ್ಲಿ ಹಂತಗಳಿವೆ. ಅವು ಆತ್ಮನ ಅನುಕ್ರಮ ಏಳಿಗೆಯ ಹದಿನಾಲ್ಕು ಸಾಧನಗಳು – ಮಿಥ್ಯಾದೃಷ್ಟಿ, ಸಾಸಾದನ, ಮಿಶ್ರ, ಅವಿರತ ಸಮ್ಯಗ ದೃಷ್ಟಿ, ಸಂಯತಾ ಸಂಯತ, ಪ್ರಮತ್ತ ಸಂಯತ, ಅಪ್ರಮತ್ತ ಸಂಯತ, ಅಪೂರ್ವ ಕರಣ, ಅನಿವೃತ್ತಿ ಕರಣ, ಸೂಕ್ಷ್ಮಲೋಭ, ಉಪಶಾಂತ, ಕ್ಷೀಣಕಷಾಯ, ಸಂಯೋಗ ಕೇವಲಿ, ಅಯೋಗ ಕೇವಲಿ (ವರ್ಧ.ಪು –133 –134). (ಮಲ್ಲಿ. ಪು –233, ಅನಂ.ಪು –283).

ಮೊದಲನೆ ಹಂತದಲ್ಲಿ ಸಾಧಕನು ಮಿಥ್ಯೆಯಲ್ಲಿ ಮುಳುಗಿ ಹೋಗಿರುತ್ತಾನೆ. ಯಥಾರ್ಥ ಗುಣಗಳಲ್ಲಿ ಶ್ರದ್ಧೆ ಇಲ್ಲದೆ, ತನ್ನ ತಿಳುವಳಿಕೆಯೇ ಶ್ರೇಷ್ಠವೆಂದು ಮಿಥ್ಯಾತ್ವದಲ್ಲಿಯೇ ಸಂತೋಷಪಡುತ್ತ, ಸತ್ಯ ತತ್ವ ಶೋಧನೆಗಾಗಿ ಯತ್ನಿಸುವುದಿಲ್ಲ. (ಮಿಥ್ಯಾ ದೃಷ್ಟಿ) ಅವನು ಸಮ್ಯಗ್ ದರ್ಶನವುಳ್ಳವನಾಗಿರದೆ ಸಮ್ಯಕ್ತ್ವದ ರಸಸ್ವಾದನೆ ಮಾಡಲು ತೊಡಗಿದರೆ ಎರಡನೆಯ ಹಂತದಲ್ಲಿರುವವೆಂದು ಭಾವಿಸಬೇಕು (ಸಾಸಾದನ). ಅವನ ಮನೋಭಾವದಲ್ಲಿ ಸಮ್ಯಕ್ತ್ವ ಮತ್ತು ಮಿಥ್ಯಾತ್ವಗಳೆರಡು ಕಲುಸಿಕೊಂಡಿರಬಹುದು (ಮಿಶ್ರ). ನಾಲ್ಕನೆ ಹಂತದಲ್ಲಿ ಸಮ್ಯಗ್ ದರ್ಶನದ ಜ್ಞಾನವಿದ್ದರೂ ಚಾರಿತ್ರದಲ್ಲಿ ಮಿಥ್ಯಾತ್ವದ ಮೋಹನೀಯ ಕರ್ಮವು ಬಲವಾಗಿರುವುದರಿಂದ ಆಚಾರದಲ್ಲಿ ಸಮ್ಯಗ್ ಜ್ಞಾನ ಪೂರ್ಣ ಮಾಡಲು ಸಾಧ್ಯವಾಗುವುದಿಲ್ಲ (ಅವಿರತ ಸಮ್ಯಗ್ ದೃಷ್ಟಿ). ಐದನೇ ಹಂತದಲ್ಲಿ ಪಂಚ ಅಣು ವ್ರತಗಳನ್ನು ಸ್ವೀಕರಿಸಿ ಶ್ರಾವಕನಾಗುತ್ತಾನೆ. (ಸಂಯತಾ ಸಂಯತ) ಆರನೇ ಹಂತದಲ್ಲಿ ತನ್ನಲ್ಲಿರುವ ಅವಗುಣಗಳನ್ನು ನಾಶಪಡಿಸಿ ಮಹಾವ್ರತಿಯಾಗುತ್ತಾನೆ (ಪ್ರಮತ್ತ ಸಂಯತ) ತನ್ನಲ್ಲಿರುವ ದೋಷಗಳನ್ನು ನಾಶಮಾಡಿ, ಶುದ್ಧ ವಿಚಾರಗಳಾದ ಸಮ್ಯಕ್ತ್ವ ಪಾಲನೆಯಲ್ಲಿ ನಿರತನಾಗುವುದು ಏಳನೇ ಹಂತ (ಅಪ್ರಮತ್ತ ಸಂಯತ) ಎಂಟನೇ ಹಂತದಲ್ಲಿ ಅಸಾಮಾನ್ಯವಾದ ಆಧ್ಯಾತ್ಮಿಕ ಶಕ್ತಿಗಳು ಉದಯವಾಗುತ್ತವೆ (ಅಪೂರ್ವಕರಣ) ಒಂಭತ್ತನೇ ಹಂತದಲ್ಲಿ ವಿವಿಧ ಚಾರಿತ್ರ ಮೋಹನೀಯ ಕರ್ಮವನ್ನು ನಾಶಮಾಡಿ, ವಿಚಾರ ನಿರ್ಮಲತೆಯನ್ನು ಪಡೆದು ಸಮತಾ ಭಾವವನ್ನು ಹೊಂದುತ್ತಾನೆ (ಅನಿವೃತ್ತಿಕರಣ) ಹತ್ತನೆಯ ಹಂತದಲ್ಲಿ ಅತ್ಯಲ್ಪವಾದ ಲೋಭದ ಅಂಶವು ಉಳಿದಿರುತ್ತದೆ (ಸೂಕ್ಷ್ಮ ಲೋಭ) ಹನ್ನೊಂದನೆಯ ಹಂತದಲ್ಲಿ ಜ್ಞಾನದ ಬಲದಿಂದ ಎಲ್ಲ ಮೋಹವೂ ಇಳಿಯುತ್ತದೆ (ಉಪಶಾಂತ) ಮತ್ತು ಹನ್ನೆರಡನೆಯ ಹಂತದಲ್ಲಿ ಅದು ಸಂಪೂರ್ಣವಾಗಿ ನಿಂತು ಹೋಗುತ್ತದೆ (ಕ್ಷೀಣ ಕಷಾಯ) ಹದಿಮೂರನೆಯ ಹಂತದಲ್ಲಿ ಸಾಧಕನು ಪೂರ್ಣ ಜ್ಞಾನವುಳ್ಳವನಾಗಿ ಜಗತ್ತಿನ ಎಲ್ಲಾ ಚರಾಚರ ವಸ್ತುಗಳ ಜ್ಞಾನವು ಉಂಟಾಗುವುದು. ಕೇವಲ ಜ್ಞಾನವನ್ನು ಪಡೆದ ಅವನು ಈಗ ಒಬ್ಬ ಸಂಯೋಗ ಕೇವಲಿ, ಅರ್ಹಂತ

(ಸಂಯೋಗ ಕೇವಲಿ). ಹದಿನಾಲ್ಕನೆಯ ಮತ್ತು ಕೊನೆಯ ಹಂತದಲ್ಲಿ ಮರ್ತ್ಯ ಜೀವನದ ಜಂಜಾಟಗಳು ಅವನ ಮೇಲಿನ ಹಿಡಿತಗಳನ್ನು ಕಳೆದುಕೊಳ್ಳುವೆ. ಅವನು ಈಗ ಒಬ್ಬ ಅಯೋಗ ಕೇವಲಿ (ಅಯೋಗ ಕೇವಲಿ).

ಅರ್ಹಂತ, ಸಿದ್ಧ ಆಚಾರ್ಯ, ಉಪಾಧ್ಯಾಯ ಹಾಗೂ ಸಾಧುಗಳು ಇವರಿಗೆ ಪಂಚ ಪರಮೇಷ್ಠಿಗಳೆಂದು ಹೆಸರು. ಇವರಿಗೆ ಮಾಡುವ ನಮಸ್ಕಾರ ಪಂಚ ನಮಸ್ಕಾರವೆಂದು ಪ್ರಸಿದ್ಧವಾಗಿದೆ. (ನೇಮಿ. ಪು. 1 –3). ಪಂಚ ನಮಸ್ಕಾರಗಳನ್ನು ಪಂಚ ಪದವೆಂದೂ ಪಂಚ ಪರಮೇಷ್ಠಿಗಳ ಮಂತ್ರವನ್ನು ಣಮೋಕಾರಮಂತ್ರವೆಂದೂ ಕರೆಯುತ್ತಾರೆ.

ಸಾಧಕನ ಧ್ಯಾನವು ಣಮೋಕಾರ ಮಂತ್ರದ ಜಪದಿಂದ ಆರಂಭವಾಗುತ್ತದೆ. ಧ್ಯಾನದಲ್ಲಿ ಪಂಚಪರಮೇಷ್ಠಿಗಳ ಮುಖ್ಯವಾಗಿ ಅರ್ಹಂತ ಮತ್ತು ಸಿದ್ಧರ ಗುಣಗಳನ್ನು ಕುರಿತು ಚಿಂತಿಸಬೇಕು.

ಮಂಗಳಕ್ಕೆ ಕಾರಣವಾದವು ಪಂಚ ನಮಸ್ಕಾರ ಮಂತ್ರಗಳು. ಅವು ಮೋಕ್ಷೋಪಯೋಗಿಯಾದ ಮೆಟ್ಟಿಲುಗಳು. ಅವು ಅಕ್ಷಯವಾದ ಮಂತ್ರ ಶಕ್ತಿಗಳು. ಅಂತಹ ಮಂತ್ರಗಳನ್ನು ನಿಶ್ಚಲ ಮತಿಯಿಂದ ಪಠಿಸಬೇಕು. ಅವನ್ನು ಪಠಿಸುವ ಶಕ್ತಿಯೇ ಕುಂಠಿತವಾದಲ್ಲಿ ಪಂಚ ಪರಮೇಷ್ಠಿಗಳ ಸಾಮಾಕ್ಷರಗಳನ್ನಾದರೂ ಜಪಿಸಬೇಕು. ಅವೆಲ್ಲವನ್ನೂ ಜಪಿಸಲು ಶಕ್ತಿ ಇಲ್ಲದಿದ್ದರೆ ಅದರ ಮೊದಲಕ್ಷರಗಳನ್ನು ಜಪಿಸುವುದು ಅತ್ಯವಶ್ಯ. ಆ ಎಲ್ಲಾ ಅಕ್ಷರಗಳನ್ನು ಜಪಿಸಲಾಗದಿದ್ದರೆ 'ಅರ್ಹಂತ' ಎಂಬ ಒಂದು ಪದವನ್ನು ನಾಲಗೆಯಿಂದ ಉಚ್ಚರಿಸಬೇಕು. ಅದನ್ನು ಉಚ್ಚರಿಸಲಾಗದಿದ್ದಾಗ ಮೊದಲನೆಯ 'ಅ' ಕಾರವನ್ನು ಜಪಿಸಬೇಕು. ಅದೂ ಸಾಧ್ಯವಾಗದಾಗ ಏನೂ ಮಾಡದೆ ಸುಮ್ಮನಾಗಬೇಕು. ಮುನಿವೃಂದೋಕ್ತವಾದ ಪಂಚ ಪರಮೇಷ್ಠಿಗಳ ನಮಸ್ಕಾರವನ್ನು ಕಿವಿಗೊಟ್ಟು ಆಲಿಸಬೇಕು. ಅರ್ಹಂತ ಪದವನ್ನು ನೆನೆಯುತ್ತಾ ಅನಿತ್ಯ, ಅಕರಣ, ಸಂಸಾರ, ಏಕತ್ವ, ಅನ್ಯತ್ವ, ಅಶುಚಿತ್ವ, ಅಸ್ರವ, ಸಂವರ, ನಿರ್ಜರ, ಲೋಕ, ಬೋಧಿದುರ್ಲಭ, ಧರ್ಮಭಾವ – ಮೊದಲಾದ ಹನ್ನೆರಡು ಅನುಪ್ರೇಕ್ಷೆಗಳನ್ನು ಮನಸ್ಥಿತವಾಗುವಂತೆಸಗಿ ಜಿನೇಂದ್ರನ ಪಾದಕಮಲಗಳನ್ನು ಬಿಗಿದಪ್ಪಿ ಶರಣಾಗಬೇಕು. ಆಗ ಮಾತ್ರ ಚಿಟುಕಿಯಾಡಿಸುವಷ್ಟು ಕಾಲದಲ್ಲಿ ನಶ್ವರ ದೇಹವನ್ನು ಬಿಸುಟು ಚೆಲುವಾದ ದೇಹವನ್ನು ಪಡೆಯಲು ಸಾಧ್ಯ. (ಆದಿ. ಪು. 116 –117).

ಅಧ್ಯಾಯ ಮೂರು : ಅರ್ಥ

ಅಧ್ಯಾಯ ಮೂರು

: ಅರ್ಥ :

ಜೈನ ಧರ್ಮವು ಪುರುಷಾರ್ಥಗಳ ಬಗ್ಗೆ ಒಲವು ತೋರಿಸಿದರೂ ಪ್ರಾಮುಖ್ಯತೆ ನೀಡಿದ್ದು ಧರ್ಮ ಮತ್ತು ಮೋಕ್ಷಗಳಿಗೆ ಮಾತ್ರ. ಧರ್ಮದ ಆಚರಣೆಯಿಂದ ಮೋಕ್ಷ ಪ್ರಾಪ್ತಿಯಾಗುತ್ತದೆ. ಅರ್ಥ ಕಾಮ ಇವುಗಳು ಧರ್ಮದ ವೃದ್ಧಿಗಾಗಿಯೇ ಸಹಕಾರಿಯಾಗಬೇಕು. ಇದು ಜೈನ ದರ್ಶನದ ನಿಲುವು.

ಜೈನ ಪುರಾಣಗಳೂ ಕೂಡ ಧಾರ್ಮಿಕ ಅಂಶವನ್ನೇ ಪ್ರತಿಪಾದಿಸಿವೆ. ಕವಿಯ ದೃಷ್ಟಿಯೂ ಉದ್ದೇಶವೂ ಅದೇ ಆಗಿದೆ. ಕವಿಯೂ ಎಲ್ಲರಂತೆ ಒಬ್ಬ ಸಮಾಜ ಜೀವಿ. ಅವನು ಸಾಮಾಜಿಕ ವ್ಯವಸ್ಥೆಯ ಒಂದು ಭಾಗ. ಹೀಗಾಗಿ ಅವನ ಮೇಲೆ ಆತನ ಸಮಕಾಲೀನ ಸಮಾಜದ ಒಟ್ಟು ಪರಿಣಾಮ ಆಗಿಯೇ ಇರುತ್ತದೆ. ಆದ್ದರಿಂದ ಅವನ ಕೃತಿಯು ಅಂದಿನ ಸಾಮಾಜಿಕ ರಾಜಕೀಯ ಮತ್ತು ಸಾಂಸ್ಕೃತಿಕ ಆಶಯವನ್ನು ಹೊಂದಿರುತ್ತದೆ. ಪುರಾಣಗಳ ರಚನೆಯಲ್ಲಿ ಕವಿಗೆ ಕೆಲವೊಂದು ಮಿತಿಗಳಿರುವುದರಿಂದ ಆಗಮಿಕ ಕಾವ್ಯಗಳಿಗೆ ಸಂಬಂಧಿಸಿದಂತೆ ಈ ಅಭಿಪ್ರಾಯ ಎಷ್ಟರಮಟ್ಟಿಗೆ ಸಾಧ್ಯ ಎನ್ನುವುದು ಕಷ್ಟ. ಆದರೂ ಯುಗಧರ್ಮ ಒಂದಲ್ಲ ಒಂದು ರೀತಿಯಲ್ಲಿ ಕವಿಯ ಮತ್ತು ಅವನ ಕಾವ್ಯದ ಮೇಲೆ ಪ್ರಭಾವ ಬೀರಿಯೇ ಇರುತ್ತದೆ.

ಹಳಗನ್ನಡ ಜೈನ ಪುರಾಣಗಳಲ್ಲಿ ಅರಸ – ಪ್ರಜೆ, ರಾಜನೀತಿ, ವಿದ್ಯಾಭ್ಯಾಸ, ವರ್ಣಾಶ್ರಮ ಯುದ್ಧ, ವೇಶ್ಯಾವಾಟಿಕೆ, ಬಡತನ ಮುಂತಾದವುಗಳಿಗೆ ಸಂಬಂಧಿಸಿದಂತೆ ಅನೇಕ ಅಂಶಗಳ ಪ್ರಸ್ತಾವನೆಯಿದೆ.

3.1. ಅರಸ – ಪ್ರಜೆ :

ರಾಜನಲ್ಲಿ ಅಗತ್ಯವಾಗಿ ಇರಬೇಕಾದ ಅಂಶ ಕ್ಷಾತ್ರ ಗುಣ.' ಪೂರ್ವದಿಂದಲೇ ಪರಂಪರೆ ವಿಡಿದು ಬಂದ ಅಧಿಕಾರವನ್ನು ಕೆಡಿಸದೆ ಸಲ್ಲಿಸುವುದೇ ಕ್ಷತ್ರಿಯರ ಧರ್ಮ' (ವಡ್ಡಾ –352) ಎನ್ನುವ ಮಾತಿನಲ್ಲಿನ ಧ್ವನಿ ರಾಜರ ಕರ್ತವ್ಯವನ್ನು ಪ್ರತಿನಿಧಿಸುತ್ತದೆ.

ವ್ಯವಸ್ಥೆಗಳು ಶುದ್ಧವಾಗಿರಬೇಕಾದರೆ ಆಳುವ ಆಳಿಸಿಕೊಳ್ಳುವ ಜನರ ಸ್ವಭಾವ ಗುಣಗಳೂ ಶುದ್ಧವಾಗಿರಬೇಕಾದುದು ಅನಿವಾರ್ಯ. ಯಥಾರಾಜ ತಥಾ ಪ್ರಜೆ ಎನ್ನುವಂತೆ

ಉತ್ತಮ ಪ್ರಭುತ್ವವಿಲ್ಲದಲ್ಲಿ ಉತ್ತಮ ವ್ಯವಸ್ಥೆಯನ್ನು ಪಡೆಯುವುದು ಅಸಾಧ್ಯ. ' ರಾಜನು ಧರ್ಮವಂತನಾದರೆ ಪ್ರಜೆಗಳೂ ಧರ್ಮದಲ್ಲಿ ಇರುವವರಾಗುತ್ತಾರೆ. ರಾಜನು ಪಾಪಿಯಾಗಿದ್ದರೆ ಪ್ರಜೆಗಳೂ ಪಾಪವನ್ನು ಆಶ್ರಯಿಸುವವರಾಗುತ್ತಾರೆ. ಪ್ರಜೆಗಳು ರಾಜನನ್ನು ಅನುಸರಿಸುತ್ತಾರೆ. ರಾಜನು ಹೇಗೋ ಪ್ರಜೆಗಳೂ ಹಾಗೆಯೇ (ವಡ್ಡಾ –237).

ಅರಸನಿಗೆ ಉತ್ತಮ ಆದರ್ಶ ಮಾನವೀಯ ಗುಣಗಳೇ ಮುಖ್ಯ. ಈ ಅಂಶವನ್ನು ಹೊಂದಿದ ಅರಸನು ಪರಿಪೂರ್ಣವಾದ ಪ್ರಭುತ್ವವನ್ನು ಸಾಧಿಸಬಹುದು. ಪ್ರಭುತ್ವದ ಪ್ರತಿಯೊಂದು ನಡವಳಿಕೆಯೂ ನೈತಿಕ ಬಲದಿಂದ ಕೂಡಿರಬೇಕು ಎಲ್ಲರ ಹಿತವನ್ನು ಕಾಪಾಡಿಕೊಂಡು ಬರುವಂತಿರಬೇಕು.

ವಜ್ರದಾಡ ಮಹಾರಾಜನು ತನ್ನ ಮಗನಾದ ಸುಬಾಹುವಿಗೆ ಸಾಮ್ರಾಜ್ಯದ ಪಟ್ಟಾಭಿಷೇಕವನ್ನು ಮಾಡಿ ಅವನಿಗೆ ಸಂಕ್ಷಿಪ್ತವಾಗಿ ರಾಜನೀತಿಯ ಬೋಧನೆ ಮಾಡುತ್ತಾನೆ. ಆಸೆಯನ್ನು ಕತ್ತರಿಸು, ಕ್ಷಮಾಗುಣವನ್ನು ಭಜಿಸು. ಮದವನ್ನು ಬಿಡು, ಪಾಪದಲ್ಲಿ ಪ್ರೀತಿಯನ್ನು ಮಾಡಬೇಡ, ಸತ್ಯವನ್ನು ಹೇಳು, ಸಾಧುಗಳ ಪದವಿಯನ್ನು ಅನುಸರಿಸಿ ಹೋಗು, ವಿದ್ವಾಂಸರ ಸೇವೆ ಮಾಡು, ಮಾನ್ಯರಾದವರನ್ನು ಗೌರವಿಸು, ಶತ್ರುಗಳನ್ನು ಕೂಡ ಆದರಿಸು, ಸ್ವಕೀಯವಾದ ಸದ್ಗುಣಗಳನ್ನು ಮುಚ್ಚಿಡು. ಆತ್ಮಶ್ಲಾಘನೆ ಮಾಡದಿರು, ಕೀರ್ತಿಯನ್ನು ಪಾಲಿಸು, ದುಃಖಿತನಾದವನಲ್ಲಿ ದಯೆಯನ್ನು ತೋರು. (ವಡ್ಡಾ – 284) ಇಲ್ಲಿ ರಾಜನಾದವನು ಆದರ್ಶ ಹಾಗೂ ದಕ್ಷ ಆಡಳಿತ ನೀಡಲು ಹೇಗೆ ವರ್ತಿಸಬೇಕು ಎನ್ನುವ ಅವನ ಮಾತುಗಳು ಗಮನಾರ್ಹ. ತಾನು ಹಲವಾರು ವರ್ಷಗಳ ಕಾಲ ರಾಜನಾಗಿ ಆಡಳಿತ ನಡೆಸಿ ಹೊಂದಿದ ಅನುಭವವನ್ನು ಇಲ್ಲಿ ಧರ್ಮದ ನೆಲೆಯಲ್ಲಿ ತೂಗಿ ವ್ಯಕ್ತಪಡಿಸುವ ಅವನ ಪ್ರಜ್ಞೆ ಗಮನಾರ್ಹ.

ಈ ಹಿನ್ನೆಲೆಯಲ್ಲಿ ಪ್ರಭಾಕರಿ ಪಟ್ಟಣವನ್ನು ಆಳುತ್ತಿದ್ದ ಸ್ಥಿಮಿತಸಾಗರನೆಂಬ ಮಂಡಲಿಕನ ಆಡಳಿತ ವೈಖರಿಯ ಒಂದು ಚಿತ್ರಣ ಮುಖ್ಯವಾಗುತ್ತದೆ. ' ಪರಿಜನರ ಶಕ್ತಿಯನ್ನು ತಿಳಿದು ಇವನು ಸೇವಕ, ಇವನು ದೂರ ಎಂಬುದನ್ನು ತಿಳಿಯಲಾಗದಂತೆ ರಕ್ಷಿಸಿದ ಆ ರಾಜನ ಗುಣಾನುಗುಣದ ಅಂತರವನ್ನು ತಿಳಿಯುವುದಕ್ಕೆ ಬೇರೆ ಆಧಾರ ಬೇಡ, ಸೇವಕರ ಸಂಪತ್ತಿನ ವೈಭವವೇ ತೋರುತ್ತದೆ. (ಶಾಂತಿ. ಪು –17) ಪ್ರಜೆಗಳ ಹಿತಚಿಂತನೆಯುಳ್ಳ ಈ ರಾಜ ' ಸೌಜನ್ಯದಿಂದ ಕೂಡಿದ ಉದ್ಯೋಗದ ಏಳ್ಗೆಗೂ ' ಕಾರಣನಾಗಿದ್ದನಂತೆ. (ಶಾಂತಿ.ಪು –17). ಇಲ್ಲಿ ಆಳುವ

ಆಳಿಸಿಕೊಳ್ಳುವ ಜನರ ನೈತಿಕ ಬಲದ ಮೇಲೆ ನಿಂತ ಆದರ್ಶ ಪ್ರಭುತ್ವದ ಚಿತ್ರಣವನ್ನು ಕಾಣಬಹುದು.

3.2. ರಾಜನೀತಿ :

ರಾಜನೀತಿಯನ್ನು ಕುರಿತ ಹಲವಾರು ಸೂತ್ರಗಳು ಹಳಗನ್ನಡ ಜೈನ ಪುರಾಣಗಳಲ್ಲಿ ಬಂದಿವೆ. ಇವು ಅರಸನು ವಿವಿಧ ಸಂಧರ್ಭಗಳಲ್ಲಿ ಹೇಗೆ ಉಚಿತವಾಗಿ ವರ್ತಿಸಬೇಕು ಎನ್ನುವುದನ್ನು ಸೂಚಿಸುತ್ತವೆ.

ರಾಜನೀತಿ ಶಾಸ್ತ್ರ ಪಾರಂಗತರಾದವರಿಂದ ಸಾವಿರಾರು ಶಕ್ತಿಗಳಿಂದ ಉದ್ಯಮವನ್ನು ಎರಡನೆಯದಾಗಿ ಉಳ್ಳವರಿಂದ ಪೂರ್ಣವಾಗಿ ಭೂಮಿಯನ್ನು ಗೆಲ್ಲಲು ಸಾಧ್ಯ (ವಡ್ಡಾ. –349).

ಶತ್ರುವನ್ನು ಯಾವ ರೀತಿಯಲ್ಲಾದರೂ ನಾಶ ಮಾಡುವುದು ರಾಜನೀತಿ (ನೇಮಿ.ಪು.2 – 304).

ಒಬ್ಬ ರಾಜ ಮತ್ತೊಬ್ಬ ರಾಜನಿಗೆ ಸುಮ್ಮನೆ ಕಾಣಿಕೆಯಾಗಿ ಏನನ್ನಾದರೂ ಕಳಿಸಿದರೆ ಆ ಕಾರ್ಯದ ಹಿಂದೆ ಯಾವುದಾದರೂ ಮರ್ಮವಡಗಿರುತ್ತದೆ. (ಶಾಂತಿ. ಪು –35)

ಅತಿ ಗುಪ್ತವಾದ ಇಂಗಿತವನ್ನು ಒಳಗೊಂಡು ಗಂಭೀರನಾಗಿರುವ ಹಾಗೂ ಬಹು ಪ್ರೌಢವಾದ ಗುಪ್ತ ಮಂತ್ರೋಪಾಯವುಳ್ಳವನಾಗಿರುವ ಅರಸರ ನಡತೆಯನ್ನಾಗಲಿ, ವಿಧಿ ನಿಯುಕ್ತವಾದ ಕರ್ತವ್ಯವನ್ನಾಗಲಿ ತಿಳಿಯುವುದು ಯಾರಿಗಾದರೂ ಕಷ್ಟ ಸಾಧ್ಯವೇ. (ಶಾಂತಿ.ಪು –35)

ಸುಮ್ಮನೆ ಬೇಡಿದರೆ ಕೊಡಲಿಕ್ಕಿಲ್ಲವೆಂದು ಕಾಣಿಕೆಯನ್ನು ಒಪ್ಪಿಸಿ ತನ್ನ ಇಷ್ಟಾರ್ಥವನ್ನು ಬೇಡುವುದು ಚತುರೋಪಾಯಗಳಲ್ಲಿ ಒಂದು. (ಶಾಂತಿ.ಪು –35)

ದಾನವನ್ನು ವರ್ಜಿಸಿದರೆ ಅವಮಾನಕ್ಕೆ ಆಸ್ಪದವಾಗುತ್ತದೆ. ಚತುರೋಪಾಯಗಳಲ್ಲಿ ಉತ್ತಮ ದಾನವೆಂಬುದು ಮೇಲೆನಿಸಿದೆ. (ಶಾಂತಿ. ಪು –35)

ಅನಿರೀಕ್ಷಿತವಾಗಿ ಅರಸನು ಪರಮಾನುಗ್ರಹ ತೋರಿದರೆ, ಅಕಾಲದಲ್ಲಿ ಮರ ಹಣ್ಣು ಬಿಟ್ಟರೆ ಅದನ್ನು ಕಂಡು ಬಲ್ಲವರು ಬೆಚ್ಚುತ್ತಾರೆ. ದಡ್ಡರಿಗೆ ಹಾಗಲ್ಲ. ಕತ್ತಲೆಯಿಂದ ಗೂಗೆಗೆ ಉತ್ಸಾಹವಾಗುವುದಿಲ್ಲವೇ. (ಶಾಂತಿ. ಪು –36).

ರಾಜನೀತಿ ಶಾಸ್ತ್ರದ ವಿಧಾನದಲ್ಲಿಯೂ ಹನ್ನೆರಡು ಬಗೆಯ ರಾಜರಲ್ಲಿಯೂ ಸಮರ್ಥನಾಗಿ ಪೂಜ್ಯವೆನಿಸಿ ಕೊಂಡಿರುವ ವಿಜಯಾಪೇಕ್ಷೆಯು ನಯೋಪಾಯ ಬಯಸುವುದಿಲ್ಲ. ಹಾಗೆಯೇ ವೈದ್ಯ ಶಾಸ್ತ್ರ ಸಂಪನ್ನನಾಗಿದ್ದೂ, ತ್ರಿದೋಷಗಳು ಸಮಪ್ರಮಾಣ

ದಲ್ಲಿರುವ ಹಾಗೂ ಸಪ್ತಧಾತುಗಳನ್ನು ಸಮನಾಗಿಟ್ಟುಕೊಂಡಿರುವ ಆರೋಗ್ಯಶಾಲಿಯು ಯಾರನ್ನಾದರೂ ಹಿತವಂತರನ್ನು ತನ್ನ ಆರೈಕೆಗಾಗಿ ಬಳಿಯಲ್ಲಿಟ್ಟುಕೊಳ್ಳಲು ಬಯಸುವುದಿಲ್ಲ. (ಶಾಂತಿ. ಪು —36).

ಆ ರಾಜನು ಎಂಥವನು, ಆ ದೇಶ ಕಾಲಗಳು ಎಂಥಹವು ಎಂಬುದಕ್ಕೆ ಅನುಗುಣವಾಗಿ ಆತನ ಕ್ಷಯ ವೃದ್ಧಿಗಳು ಉಂಟಾಗುವುವು. ಮತಿವಂತನಾದವನು ಇವುಗಳನ್ನು ಚೆನ್ನಾಗಿ ಒರೆಯಿಟ್ಟು ಪರೀಕ್ಷಿಸಬೇಕು. (ಶಾಂತಿ. ಪು —37).

ತನಗೆ ಬರಬೇಕಾದ ಜಯ ಸ್ವಲ್ಪ ಅಸ್ತವ್ಯಸ್ತವಾದಾಗ ದಿಗಿಲುಗೊಂಡು ಹಿಂದೆಗೆಯುವ ಅರಸನು ಅರಸನೇ? ಅವನು ಅಯೋಗ್ಯನೇ ಸರಿ. ಬೇರೆಯ ಉಪಾಯಗಳು ಇರುವಾಗ ಶತ್ರುವಿನ ಮೇಲೆ ದಂಡೋಪಾಯವನ್ನು ಕೈಗೊಂಡರೆ ಅದು ಮರವನ್ನು ಕಡಿದು ಮೈ ಮೇಲೆ ಹಾಕಿಕೊಂಡಂತೆಯೆ. (ಶಾಂತಿ. ಪು —37).

ಅರಸನು ರಾಜನೀತಿ ಶಾಸ್ತ್ರದಲ್ಲಿ ಪ್ರಾವೀಣ್ಯವನ್ನು ಹಾಗೂ ವಾಗಸಂಪತ್ತಿಯನ್ನು ಉಳ್ಳವನಾಗಿದ್ದರೂ ತನ್ನ ಮಂತ್ರಿಗಳಿಂದ ಸಲಹೆಯನ್ನು ಪಡೆಯಬೇಕು. (ಶಾಂತಿ.ಪು —38).

ಕ್ಷಯ, ವೃದ್ಧಿ ಮತ್ತು ಸ್ಥಿತಿ ಎಂಬ ಮೂರು ವಿಧಿಗಳಲ್ಲಿ; ಕ್ಷಯವನ್ನು ತನ್ನ ವೈರಿಗಳಿಗೆ ಅಳವಡಿಸಿ ಉಳಿದೆರಡನ್ನು ತನ್ನಲ್ಲಿ ನೆಲೆಗೊಳಿಸಿ ಕೊಳ್ಳುವುದರಿಂದ ಅವನಿಗೆ ಶುಭವೂ ಗೆಲುವೂ ಯಥಾಪ್ರಕಾರವಾಗಿ ಒದಗಿ ಬರುತ್ತದೆ. (ಶಾಂತಿ.ಪು — 39)

ಚತುರನಾದವನು ನಯವೊಂದನ್ನು ಕೈಗೊಳ್ಳಬೇಕು. (ಶಾಂತಿ.ಪು —42)

ನಾನು ಕೇಳಿದುದನ್ನು ನೀವು ಕಳಿಸಲೇಬೇಕೆಂದು ಸಾಮೋಪಾಯದ ಮಾತಿನಲ್ಲಿ ಹೇಳಿದ್ದರೂ ಅದರಲ್ಲಿ ದಂಡೋಪಾಯದ ಧ್ವನಿಯುಂಟು. (ಶಾಂತಿ.ಪು —42).

ಬಲಾಢ್ಯನಲ್ಲಿ ಬಲವನ್ನು ಪ್ರದರ್ಶಿಸುವುದು ಸೋಲಿಗೆ ನಾಂದಿಯೆನಿಸುವುದು. (ಆದಿ.ಪು — 553)

ಈ ಪ್ರಪಂಚದಲ್ಲಿ ಶೌರ್ಯವೂ, ತ್ಯಾಗದ ಹೊಗಳಿಕೆಯೂ, ವಿದ್ಯಾಗರ್ವವೂ ಒಬ್ಬನಲ್ಲೇ ಎಂದೂ ನಿಯತವಾಗಿ ಉಂಟಾಗವು. ದೊಡ್ಡವರಿಗಿಂತ ದೊಡ್ಡವರು ಲೋಕದಲ್ಲಿ ಇದ್ದೇ ಇರುತ್ತಾರೆ. (ಆದಿ.ಪು—553)

ಪೂರ್ವಾಲೋಚನೆ ಇಲ್ಲದೆ ಯಾವ ಕೆಲಸವನ್ನೂ ಮಾಡಕೂಡದು. ಇದೇ ಯುಕ್ತವಾದ ಮಾರ್ಗ. (ಆದಿ.ಪು —555).

ಶಿರಸಾಕ್ರದ ಹೊರೆಯನ್ನು ಹೊತ್ತು ಶತ್ರುಗಳಿಗೆ ಹೆದರಿ ತನ್ನ ಕುಲದ ಗೌರವವೂ ಛಲವೂ ದೊರೆತನವೂ ಹಾಳಾಗುವಂತೆ ಬಾಳುವವನು ಗಂಡಸಲ್ಲ. ಅವನು ಗಂಡುರೂಪಿನ ಹೆಂಗಸೇ ಸರಿ. (ಆದಿ.ಪು –551).

ಶೂರರನ್ನು ಕೊಂಡಾಡದ ಬೇಡಿದವರಿಗೆ ಕೈಯೆತ್ತಿ ಕೊಡದ, ಶರಣಾಗತರನ್ನು ರಕ್ಷಿಸದ, ಪ್ರಾಪ್ತವಾದ ಯಶಸ್ಸನ್ನೊಲ್ಲದ ಅಧಮನ ಬಾಳು ನಿರರ್ಥಕ. ಅವನು ಇದ್ದರೂ ಸತ್ತಂತೆಯೇ. (ಆದಿ.ಪು.–552)

ಮೆಚ್ಚುಗೆಯಾದ ಕುಲಧನವನ್ನೂ ಮದಾನೆಯನ್ನೂ ಜಾತ್ಯಶ್ವವನ್ನೂ ಶತ್ರುವಿಗೆ ಸಮರ್ಪಿಸಿ ಕುಳಿತವನು ಅರಸನೇ? ಅವನೊಬ್ಬ ನಾಟಕದಲ್ಲಿ ಪಾತ್ರಧಾರಿಯಾದ ಅರಸ. (ಆದಿ.ಪು –552).

ಒಳ್ಳೆಯದಾದ ಆನೆಯೂ ಕುದುರೆಯೂ ಮುತ್ತು ಮಾಣಿಕ್ಯವೂ ಸ್ತ್ರೀ ರತ್ನ ಮುಂತಾದ ಒಳ್ಳೆಯದಾದ ಶ್ರೇಷ್ಠ ವಸ್ತುಗಳೆಲ್ಲವೂ ಭೂಮಿಯನ್ನು ಆಳತಕ್ಕವನಿಗೆ ಸೇರಬೇಕಾದುವು. (ವಡ್ಡಾ –231).

ಶೌರ್ಯವಿಲ್ಲದವನಿಗೆ ಉತ್ತಮ ಕುಲವಿದ್ದೂ ಏನು ಉಪಯೋಗ (ನೇಮಿ.ಪು.2–322).

ತನ್ನಲ್ಲಿ ಕಲೆತಿರುವ ಜ್ಞಾನ ಮತ್ತು ಸಾಧನ ಸಂಪತ್ತುಗಳನ್ನು ಬಳಸಿಕೊಂಡು ಶೋಧಿಸಬೇಕಲ್ಲದೆ, ಗುರಿತಪ್ಪಿ ಅವೆರಡೂ ಸೇರದಾಗ ಮಮ್ಮಲ ಮರುಗುವುದು ವ್ಯರ್ಥ. ಅವೆಂದಿಗೂ ಮತ್ತೊಮ್ಮೆ ಕಲೆಯುವು. (ಆದಿ.ಪು –157).

ಚಕ್ರವರ್ತಿಯೊಡನೆ ವೈರವನ್ನು ಕಟ್ಟಿಕೊಂಡ ಬಳಿಕ ಅಲ್ಲಿರುವುದು ವಿಹಿತವಲ್ಲ. ಬೇರೆ ದೇಶಕ್ಕೆ ಹೋಗಿ ಕೆಲಸಮಯ ಕಳೆಯುವುದು ಯೋಗ್ಯ ಕ್ರಮ. (ನೇಮಿ.ಪು1 –346).

ವೀರೋಚಿತವಾದ ಕಾರ್ಯಗಳಲ್ಲಿಯೇ ನಿಮಗ್ನನೂ ಯುದ್ಧ ದುರ್ಮದನೂ ಆದ ಕ್ಷತ್ರಿಯನಿಗೆ ಶತ್ರುವಾದ ವೀರ ಕ್ಷತ್ರಿಯನ ಪರಾಕ್ರಮವನ್ನು ಕೇಳಿದ ಮಾತ್ರದಿಂದಲೇ ಹುಟ್ಟಿಕೊಳ್ಳುವ ಕೋಪೋದ್ರೇಕದಲ್ಲಿ ವ್ಯರ್ಥವಾದ ಹುಬ್ಬುಗಳ ಗಂಟಿಕ್ಕುವಿಕೆಯೂ ವ್ಯರ್ಥವಾದ ಹಣೆಯಲ್ಲಿದ್ದ ಮೂರು ಗೆರೆಗಳೂ, ಅರ್ಥವಿಲ್ಲದೆ ಕೆಂಪಾದ ಕಣ್ಣಿನ ಕಾಂತಿಯೂ, ನಿರರ್ಥಕವಾದ ಹಲ್ಲುಗಳ ಕಚ್ಚಾಟವೂ, ನಿಷ್ಪ್ರಯೋಜನವಾದ ಬೆವರಾಟವೂ, ವ್ಯರ್ಥವಾದ ಮೂಗಿನ ಸೊಳ್ಳೆಯಲುಗಾಟವೂ, ಅಕಾರಣವಾದ ಕಾಯ ಕಂಪನವೂ, ನಿರರ್ಥಕವಾದ ವಾಗಾಡಂಬರವೂ ಸಲ್ಲದು. (ಆದಿ.ಪು.625).

ದೇವರ್ಗಂ ಕ್ಷತ್ರಿಯರ್ಗಂ ಪುನರ್ವಚನಮುಂ ನುಡಿಯಲಾಗದೆಂಬುದು ನೀತಿ. (ಧರ್ಮಾ.1 -449).

ಇದುವರೆಗೆ ಕೊಟ್ಟಿರುವ ರಾಜ ನೀತಿಯ ಸೂತ್ರಗಳನ್ನು ಗಮನಿಸಿದಾಗ ಕವಿಗಳಿಗೆ ಇದ್ದ ರಾಜಾಡಳಿತದ ಅಂತರಂಗದ ಪರಿಚಯ, ಮಾಹಿತಿ, ಪ್ರಜ್ಞೆ ಎಷ್ಟಿತ್ತು ಎಂಬುದು ಕಂಡುಬರುತ್ತದೆ. ಜೊತೆಗೆ ರಾಜರ ಹೊಣೆಗಾರಿಕೆ ತಂತ್ರಗಾರಿಕೆಯ ಕುರಿತ ವಿವರಣೆ ಸಾಕಷ್ಟು ಇದೆ. ಒಬ್ಬ ಅರಸನಿಗೆ ಆದರ್ಶ ಪ್ರಭುತ್ವವನ್ನು ಸಾಧಿಸುವಲ್ಲಿ ಸಾಕಷ್ಟು ಸವಾಲುಗಳಿರುತ್ತವೆ. ಪ್ರತಿ ಹೆಜ್ಜೆಗೂ ಎಡರು ತೊಡರುಗಳಿರುತ್ತವೆ. ಅದನ್ನು ನಿವಾರಿಸಿಕೊಳ್ಳುವಲ್ಲಿ ರಾಜನು ಅನುಸರಿಸಬೇಕಾದ ಮಾರ್ಗವನ್ನು ಉಪಾಯಗಳನ್ನೂ ಇವು ಬಿಂಬಿಸುತ್ತವೆ.

ಆಡಳಿತದಲ್ಲಿ ರಾಜನ ಅರ್ಧ ಯಶಸ್ಸು ಅವನ ಮಂತ್ರಿಯನ್ನು ಅವಲಂಬಿಸಿರುತ್ತದೆ. ರಾಜನೀತಿ ಶಾಸ್ತ್ರದಲ್ಲಿ ನಿಪುಣತೆ ಹೊಂದಿದ ರಾಜ ಮತ್ತು ಮಂತ್ರಿ ಇನ್ನಿತರ ವಿದ್ಯೆ ಶಾಸ್ತ್ರಗಳ ಪರಿಚಯ ಹೊಂದಿರಬೇಕು. ಆಗ ಮಾತ್ರ ಯಶಸ್ವಿಯಾಗಿ ಧೈರ್ಯದಿಂದ ಎಲ್ಲವನ್ನೂ ಎದುರಿಸುವ ಶಕ್ತಿ ಅವರಲ್ಲಿ ಉಂಟಾಗುತ್ತದೆ.

3.3. ವಿದ್ಯಾಭ್ಯಾಸ :

ಹಳಗನ್ನಡ ಜೈನ ಪುರಾಣಗಳಲ್ಲಿ ಆ ಕಾಲದ ವಿದ್ಯಾಭ್ಯಾಸದ ಪದ್ಧತಿಯನ್ನು ತಿಳಿಸುವ ಕೆಲವು ಅಂಶಗಳಿವೆ. ರಾಜರುಗಳ ವಿದ್ಯಾಭ್ಯಾಸ ಕುರಿತಂತೆಯೂ ಅನೇಕ ವಿವರಗಳಿವೆ. ರಾಜರುಗಳು ಕಲಿಯಲೇಬೇಕಾದ ವಿದ್ಯೆಗಳು ಬೇರೆ ಪ್ರತ್ಯೇಕವಾಗಿಯೇ ಇರುತ್ತಿದ್ದವು ಎನ್ನುವುದು ಗಮನಾರ್ಹ.

ಆದಿಪುರಾಣದಲ್ಲಿ ಅಕ್ಷರಾಭ್ಯಾಸದ ಆರಂಭದ ಕ್ರಮದ ಚಿತ್ರಣವಿದೆ. ವೃಷಭದೇವನು ತನ್ನ ಮೂರು ಮಂದಿ ಕುಮಾರರಿಗೆ ಮತ್ತು ಇಬ್ಬರು ಕುಮಾರಿಯರಿಗೆ ವಿದ್ಯಾರಂಭ ಮಾಡಿಸಿದ್ದನ್ನು ಮತ್ತು ಪ್ರತಿಯೊಬ್ಬರಿಗೂ ಬೇರೆ ಬೇರೆ ವಿದ್ಯೆಗಳನ್ನು ಉಪದೇಶಿಸುವುದನ್ನು ನೋಡಬಹುದು.

ವಿಶಾಲವಾದ ಚಿನ್ನದ ಗದ್ದುಗೆಯ ಮೇಲೆ ತನ್ನ ಹೃತ್ಕಮಲವಾಸಿನಿಯಾದ ಸರಸ್ವತಿಯನ್ನು ಸ್ಥಾಪಿಸಿ ಪೂಜಿಸಿ, ತನ್ನಿಬ್ಬರು ಹೆಣ್ಣು ಮಕ್ಕಳನ್ನು ಎರಡೂ ಪಕ್ಕದಲ್ಲಿ ಕುಳ್ಳಿರಿಸಿಕೊಂಡು 'ಸಿದ್ಧಂ ನಮಃ' ಎಂದು ಮೊದಲು ಹಿರಿಯಾಕೆಗೆ ಭೋದಿಸಿ, ಬಳಿಕ ಅದನ್ನು ಲಿಪಿಗಳಿಂದ ಬರೆದು ತೋರಿಸಿದನು. ಹೀಗೆ ಅಕಾರಾದಿ ಹಕಾರಾಂತವಾದ ಸ್ವರ ವ್ಯಂಜನ

ಭೇದಗಳುಳ್ಳ ಶುದ್ಧಾಕ್ಷರಗಳನ್ನು ನಾಲ್ಕು ಅಯೋಗವಾಹಕಗಳನ್ನೂ ಸಂಯುಕ್ತಾಕ್ಷರಗಳನ್ನೂ ಬಲಗೈಯಿಂದ ಬ್ರಾಹ್ಮಿಗೆ ಉಪದೇಶಿಸಿದನು. ಕನ್ನೈದಿಲೆಯಂತೆ ಕಣ್ಣುಳ್ಳ ಸುಂದರಿಗೆ ಎಡಗೈಯಿಂದ ಒಂದು ಎರಡು ಮುಂತಾದ ಸಾಧನಕ್ರಮ ಪೂರ್ವಕವಾಗಿ ಗಣಿತವನ್ನು ಭವ್ಯಾನಂದಕರನಾದ ಆದಿದೇವನು ತಿಳಿಸಿದನು. ಮತ್ತು ಸ್ವಾಯಂಭುವನೆಂಬ ವ್ಯಾಕರಣ ಶಾಸ್ತ್ರ, ಛಂದೋವಿಚಿತಿ ಮತ್ತು ಅಲಂಕಾರಗಳೆಂಬ ಮೂರರಿಂದ ಹೆಸರಾದ ಮೂರು ಬಗೆಯ ವಾಙ್ಮಯವನ್ನೂ, ಸಮಸ್ತ ಕಲಾ ಸಮೂಹವನ್ನೂ ಆದಿಬ್ರಹ್ಮನು ಉಪದೇಶಿಸಿದನು. ಸ್ವಪುತ್ರಿಯರಿಬ್ಬರನ್ನೂ ವಿದ್ಯಾಪೂರ್ಣರನ್ನಾಗಿ ಮಾಡಿ ಭರತನಿಗೆ ನಾಟ್ಯಶಾಸ್ತ್ರ ಅರ್ಥಶಾಸ್ತ್ರಗಳನ್ನೂ ವೃಷಭಸೇನನಿಗೆ ಗೀತ ವಾದ್ಯಗಳ ಅರ್ಥ ಸಂಗ್ರಾಹಕವಾದ ಗಾಂಧರ್ವ ವಿದ್ಯೆಯನ್ನೂ, ಅನಂತ ವಿಜಯನಿಗೆ ವಾಸ್ತು ವಿದ್ಯೆಯನ್ನೂ, ವಿಚಿತ್ರವಾದ ಚಿತ್ರ ವಿದ್ಯೆಯನ್ನೂ ಕಲಿಸಿಕೊಟ್ಟನು. ಬಾಹುಬಲಿಗೆ ಕಾಮತಂತ್ರ, ಸಾಮುದ್ರಿಕ, ಆಯುರ್ವೇದ, ಧನುರ್ವೇದ, ಗಜಾಶ್ವ ವಿದ್ಯೆಗಳನ್ನೂ ರತ್ನ ಪರೀಕ್ಷಾ ಕ್ರಮವನ್ನೂ ಮತ್ತಿತರ ಮಕ್ಕಳಿಗೆ ಲೋಕೋಪಕಾರಿಗಳೆನಿಸಿದ ಉಳಿದ ವಿದ್ಯೆಗಳನ್ನೂ ಉಪದೇಶಿಸಿದನು. (ಆದಿ.ಪು -378 -379).

ಇಲ್ಲಿ ವೃಷಭದೇವನು ಭರತ ಬಾಹುಬಲಿಯರೊಂದಿಗೆ ತನ್ನ ಹೆಣ್ಣು ಮಕ್ಕಳಿಗೂ ವಿದ್ಯಾಭ್ಯಾಸ ಮಾಡಿಸುವುದು ಗಮನಾರ್ಹ. ಇಲ್ಲಿ ಸ್ತ್ರೀ ಶಿಕ್ಷಣದ ಬಗೆ ಉಲ್ಲೇಖ ದೊರೆತರೂ ಅದು ರಾಜ ಪುತ್ರಿಯರಿಗೆ ಸಿಗುತ್ತಿದ್ದ ಶಿಕ್ಷಣದ ಬಗೆಗಿನ ವಿವರ. ಸಾಮಾನ್ಯ ಸ್ತ್ರೀಯರಿಗೂ ಅಂದಿನ ದಿನ ಶಿಕ್ಷಣ ಸೌಲಭ್ಯ ಇತ್ತೇ ಎಂಬುದರ ಬಗ್ಗೆ ಎಲ್ಲಾ ವಿವರಗಳು ದೊರೆಯುವುದಿಲ್ಲ. ಆದ್ದರಿಂದ ಕೆಳವರ್ಗದ ಜನರಿಗೆ ಶಿಕ್ಷಣದ ಅವಕಾಶ ಬಹುಶಃ ಇರಲಿಲ್ಲವೆಂದೇ ತಿಳಿಯುತ್ತದೆ.

ಜೈನ ಧರ್ಮ ಸ್ವೀಕರಿಸಿದ ಎಲ್ಲಾ ವರ್ಗದ ಜನರಿಗೂ ಶ್ರಾವಕ ಧರ್ಮದ ಉಪದೇಶ ದೊರೆಯುತ್ತಿದ್ದುದರ ಬಗ್ಗೆ ವಿವರಗಳು ಸಿಗುತ್ತವೆಯಾದರೂ ಅವರಿಗೆ ಇನ್ನಿತರ ಶಿಕ್ಷಣದ ಸೌಲಭ್ಯ ಇದ್ದಂತೆ ಎಲ್ಲೂ ಉಲ್ಲೇಖವಿಲ್ಲ. ಒಟ್ಟಿನಲ್ಲಿ ಇದು ಆ ಕಾಲಕ್ಕಾಗಲೇ ರೂಢಿಯಲ್ಲಿದ್ದ ವಿದ್ಯೆಯ ನಾನಾ ಕ್ಷೇತ್ರಗಳನ್ನು ಪರಿಚಯ ಮಾಡಿಕೊಡುತ್ತದೆ.

ಧರ್ಮಾಮೃತದಲ್ಲಿ ವಜ್ರಕುಮಾರನನ್ನು ಐದನೇ ವರುಷದಂದು ಜೈನ ಉಪಾಧ್ಯಾಯರ ಹತ್ತಿರ ವಿದ್ಯಾಭ್ಯಾಸಕ್ಕಿರಿಸಿ ಅಕ್ಷರ ಗಾಂಧರ್ವ ಗಣಿತ ಚಿತ್ರಕರ್ಮ ಪತ್ರಚ್ಛೇದಾದಿ ಸಪ್ತತಿ

ಕಳೆಗಳಲ್ಲಿ ಮತ್ತು ಚತುಷ್ಷಷ್ಟಿ ಕಳಾಗುಣಂಗಳಲ್ಲಿ ಪರಿಣಿತನಾದ. ಜವನನಾಗಿ ಕುಲವಿದ್ಯೆ ಜಾತಿವಿದ್ಯೆ ಸಾಧಿತ ವಿದ್ಯೆಗಳೆಂಬ ಮೂರು ವಿದ್ಯೆಗಳಲ್ಲಿಯೂ ಸಂಪೂರ್ಣವಾಗಿ ಸುಖದಿಂದಿದ್ದನು. (ಧರ್ಮಾ.1 –379–380) ಎಂಬ ವಿವರಣೆ ಇದೆ. ಇಲ್ಲಿ ಅಂದಿನ ವಿದ್ಯಾಭ್ಯಾಸವು ಐದನೇ ವರ್ಷದಲ್ಲಿಯೇ ಪ್ರಾರಂಭವಾಗುತ್ತಿದ್ದುದು ಕಂಡುಬರುತ್ತದೆ. ವಿದ್ಯಾರ್ಥಿಯು ಕುಲವಿದ್ಯೆ, ಜಾತಿ ವಿದ್ಯೆಗಳೊಂದಿಗೆ ಕೆಲವು ವಿದ್ಯೆಗಳನ್ನು ಸಾಧಿಸಬೇಕಾಗುತ್ತಿತ್ತು.

ಸೂರ್ಯ ಮಿತ್ರನು ಅಗ್ನಿಭೂತಿ ಮತ್ತು ವಾಯುಭೂತಿಗೆ ಏಳೆಂಟು ವರ್ಷಗಳೊಳಗೆ ನಾಲ್ಕು ವೇದಗಳನ್ನೂ, ವೇದದ ಆರು ಅಂಗಗಳಾದ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ್ಯಗಳನ್ನೂ, ಹದಿನೆಂಟು ಧರ್ಮಶಾಸ್ತ್ರಗಳನ್ನೂ ಕಲಿಸಿದನು. ಮೀಮಾಂಸೆ, ತರ್ಕಶಾಸ್ತ್ರ, ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರಶಾಸ್ತ್ರ, ಶಬ್ದಕೋಶ, ಕಾವ್ಯ ನಾಟಕಗಳು, ಕೌಟಿಲ್ಯನ ಅರ್ಥಶಾಸ್ತ್ರ, ಸಾಮುದ್ರಿಕ ಶಾಸ್ತ್ರ, ಶಾಲಿಹೋತ್ರ ಎಂಬ ಋಷಿಯ ಅಶ್ವಶಾಸ್ತ್ರ, ಪಾಲಕಾಪ್ಯ ಎಂಬ ಋಷಿ ಪ್ರಣೀತವಾದ ಗಜಶಾಸ್ತ್ರ, ಹಾನಿತ ಎಂಬ ವೈದ್ಯಶಾಸ್ತ್ರ, ಚರತ ಅಶ್ವಿನೀ ಮತ ಎಂಬ ವೈದ್ಯ ಗ್ರಂಥಗಳು, ವಾಗ್ಭಟನ ಅಷ್ಟಾಂಗ ಹೃದಯ, ಸುಶ್ರುತಗ್ರಂಥ, ಬಿಡುಲವಣ ಅಥವಾ ಕೃಷ್ಣ ಲವಣದ ಪಾನಕ್ಕೆ ಸಂಬಂಧಿಸಿದ ವೈದ್ಯ ಮುಂತಾದ ಮನುಷ್ಯ ವೈದ್ಯಗಳನ್ನೂ ಕಲಿಸಿದನು. ಜ್ಯೋತಿಷ ಮಂತ್ರವಾದ ಮುಂತಾದ ಎಲ್ಲ ಶಾಸ್ತ್ರಗಳನ್ನೂ ಪೂರ್ಣವಾಗಿ ಕಲಿಸಿ ಅವರನ್ನು ಯೋಗ್ಯರಾಗಿ ಮಾಡಿದನು. (ವಡ್ಡಾ. 13 – 14).

ತಂದೆಯ ಮಂತ್ರಿ ಸ್ಥಾನಕ್ಕೆ ಅರ್ಹರಾಗಲು ಅಗ್ನಿಭೂತಿ ವಾಯುಭೂತಿಯರು ಮಾಡಿದ ವಿದ್ಯಾಭ್ಯಾಸದ ಹರವು ನೋಡಿದರೆ, ಮಂತ್ರಿ ಸ್ಥಾನಕ್ಕೆ ಯೋಗ್ಯರಾಗಲು ಅವರಿಗೆ ಬೇಕಿದ್ದ ಅರ್ಹತೆ ಏನು ಎಂಬುದು ತಿಳಿಯುತ್ತದೆ. ಇಷ್ಟೆಲ್ಲಾ ವಿದ್ಯೆಗಳನ್ನು ಅವರು ಏಳೆಂಟು ವರ್ಷಗಳ ಕಾಲ ದೀರ್ಘ ಪರಿಶ್ರಮದಿಂದ ಸಾಧಿಸುತ್ತಾರೆ. ಮಂತ್ರಿಯಾಗುವವನು ಸಕಲ ವಿದ್ಯೆಗಳಲ್ಲಿ ಪಾರಂಗತನಾಗಿರಬೇಕು. ಆದರ್ಶ ಪ್ರಭುತ್ವದಲ್ಲಿ ಆದರ್ಶ ಮಂತ್ರಿಯ ಪಾತ್ರವೂ ಸಮನಾಗಿರುತ್ತದೆ. ಹಾಗಾಗಿಯೇ ಇಲ್ಲಿ ಅರ್ಥ ಶಾಸ್ತ್ರಾದಿಯಾಗಿ ಕಾವ್ಯ ನಾಟಕಗಳೂ ನೇರಿದಂತೆ ಎಲ್ಲಾ ಶಾಸ್ತ್ರಗಳನ್ನು ಕಲಿಯುತ್ತಿದ್ದನು.

ವಿದ್ಯುಚ್ಚೋರನೆಂಬ ಋಷಿಯ ಕಥೆಯಲ್ಲಿ ವಿದ್ಯುಚ್ಚೋರ ಯಮದಂಡರು ಸಿದ್ಧಾರ್ಥನೆಂಬ ಉಪಾಧ್ಯಾಯರ ಬಳಿಯಲ್ಲಿ ಏಳೆಂಟು ವರ್ಷದೊಳಗಾಗಿ ವ್ಯಾಕರಣ, ಪ್ರಮಾಣ

ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ, ನಾಟಕ, ಸಾಮುದ್ರಿಕ, ವಾತ್ಸಾಯನ, ಶಾಲಿಹೋತ್ರ, ಪಾಲಕಾಪ್ಯ, ಚಾಣಕ್ಯ, ವೈದ್ಯ ಮೊದಲಾದ ಶಾಸ್ತ್ರಗಳನ್ನು ಕಲಿಯುತ್ತಾರೆ. ಯಮದಂಡನು ತಳಾರನ ಮಗನಾದುದರಿಂದ ತನಗೆ ಯೋಗ್ಯವಾದ ಕಳ್ಳರನ್ನು ಕಂಡು ಹಿಡಿಯುವ ವಿದ್ಯೆಯನ್ನು ಕಲಿಯುತ್ತಾನೆ. ವಿದ್ಯುಚ್ಚೋರನು ಕಳ್ಳತನವನ್ನು ಮಾಡುವ ಉಪಾಯಗಳನ್ನು ತಿಳಿಸುವ **ಕರಪಟ** ಶಾಸ್ತ್ರವನ್ನು ಕಲಿಯುತ್ತಾನೆ. (ವಡ್ಡಾ –254).

ವಿದ್ಯುಚ್ಚೋರ ಯಮದಂಡರು ಕಲಿತ ವಿದ್ಯೆಗಳ ಲಕ್ಷಣಗಳನ್ನು ಗಮನಿಸಿದಾಗ ಅವು Forensic Science ನ ಲಕ್ಷಣಗಳನ್ನು ಹೊಂದಿರುವುದು ಕಂಡುಬರುತ್ತದೆ. ಇಂತಹ ಒಂದು ವಿಶೇಷ ವಿದ್ಯೆಯ ತಂತ್ರ ಉಪಾಯಗಳನ್ನು ಆ ಕಾಲಕ್ಕಾಗಲೇ ಕಲಿಸುವುದು ರೂಢಿಯಲ್ಲಿದ್ದಿತು ಎನ್ನುವುದು ಗಮನಾರ್ಹ ಅಂಶ. ಆದರ್ಶ ಪ್ರಭುತ್ವ ನೀಡುವಲ್ಲಿ ಅರಸನಿಗೆ ಈ ವಿದ್ಯೆ ಬಲ್ಲವರ ಅವಶ್ಯಕತೆ ಇತ್ತು. ವಿದ್ಯುಚ್ಚೋರನು ಒಬ್ಬ ರಾಜಕುಮಾರ. ಅವನು 'ಜೃಂಥನಿ, ಸ್ತಂಥನಿ, ಮೋಹಿನಿ, ಸರ್ಷಪಿ, ತಾಳೋದ್ಘಾಟನಿ ವಿದ್ಯಾ, ಮಂತ್ರಪ್ರಯೋಗ ಚೂರ್ಣ, ಯೋಗ, ಗುಳಿಗೆ, ಅಂಜನ – ಮುಂತಾದ ತಸ್ಕರ ವಿದ್ಯೆಗಳನ್ನು ಕಲಿಯುತ್ತಾನೆ. (ವಡ್ಡಾ.242). ಇಲ್ಲಿ ವಂಚನೆ ಗುಪ್ತಚಾರತ್ವಕ್ಕೆ ಸಂಬಂಧಿಸಿದ 'ಯೋಗ' ಎಂಬ ವಿದ್ಯೆ ರಾಜ್ಯದ ಮೇಲೆ ಅಥವಾ ಅರಸನ ವಿರುದ್ಧ ಪಿತೂರಿ ನಡೆಸುವವರನ್ನು ಗುರುತಿಸುವಲ್ಲಿ ಪ್ರಯೋಜನಕಾರಿಯಾಗಿದ್ದಿರಬಹುದು. ಇಲ್ಲಿ ಈ ವಿದ್ಯೆಯನ್ನು 'ತಸ್ಕರ ವಿದ್ಯೆ' ಎಂಬ ನಾಮದಿಂದ ಗುರುತಿಸಿರುವುದು ಗಮನಾರ್ಹ.

ಒಟ್ಟಿನಲ್ಲಿ ವಿದ್ಯಾಭ್ಯಾಸದ ಅವಧಿ ಏಳೆಂಟು ವರ್ಷ ಆಗಿದ್ದಿತು ಎಂಬುದು ಕಂಡುಬರುತ್ತದೆ. ಅಂತೆಯೇ ಅವರವರ ಯೋಗ್ಯತೆಗೆ ತಕ್ಕ ಭಿನ್ನ ಕ್ಷೇತ್ರಗಳ ವಿದ್ಯಾಭ್ಯಾಸ ಪರಿಣತಿ ಹೊಂದುತ್ತಿದ್ದರು. ವಿದ್ಯಾರ್ಥಿಗಳು ಗುರುವಿನ ಮನೆಯಲ್ಲಿಯೇ ಇದ್ದುಕೊಂಡು ವಿದ್ಯಾಭ್ಯಾಸದೊಂದಿಗೆ ಬೆಳಿಗ್ಗೆ ಮತ್ತು ಸಂಜೆ ಊರಿನಲ್ಲಿ ಭಿಕ್ಷಾಟನೆ ಮಾಡಿ ಊಟ ಮಾಡಬೇಕಾಗಿತ್ತು. ಆ ಕಾಲಕ್ಕೆ ಸ್ತ್ರೀಯರಿಗೂ ವಿದ್ಯಾಭ್ಯಾಸ ಮಾಡುವ ಸಮನಾದ ಅವಕಾಶವಿದ್ದಿತು ಎಂಬುದು ಗಮನಾರ್ಹ ಅಂಶ. 'ಬರಹ, ಚಿತ್ರ ವಿದ್ಯೆ, ಗಣಿತ, ಗಾನ, ನೃತ್ಯ, ಚಿತ್ರಕಲೆ ಮುಂತಾದ ಅರವತ್ತು ಕಲೆಗಳನ್ನು ಕಲಿಯಲು ಅವರಿಗೆ ಅವಕಾಶವಿದ್ದಿತು. (ವಡ್ಡಾ –258) ವಿದ್ಯಾರಂಭವು ಶುಭದಿನ ಶುಭ ನಕ್ಷತ್ರದಂದು 'ಸಿದ್ಧಂನಮಾದ್ಯಕ್ಷರ' ದಿಂದ ಆಗುತ್ತಿತ್ತು. (ಸುಕು.ಚ –32)

ಹೀಗೆ ಕಲಿಯುತಲೇ ಬೇಕಾದ ರಾಜ ವಿದ್ಯೆಗಳನ್ನು ಕಲಿತು ಅರಸರು ಪ್ರಜೆಗಳ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ರಾಜ್ಯವಾಳುತ್ತಿದ್ದರು. ಉತ್ತಮ ವಿದ್ಯೆಯನ್ನು ಗಳಿಸಿಕೊಂಡ ಅವರಲ್ಲಿ ಆ ಬಗ್ಗೆಯ ಅಹಂ ಇರುತ್ತಿರಲಿಲ್ಲ. 'ಐಶ್ವರ್ಯ ಬಲದಿಂದಲೂ, ಅರ್ಥಶಾಸ್ತ್ರ ಪರಂಪರೆಯಲ್ಲಿ ವಾದ ಮಾಡುವ ವಾಕ್ಚಾತುರ್ಯದಿಂದಲೂ ಮಾತನಾಡಿ ನಮ್ಮ ಸಭಾಸದರೆಲ್ಲ ಸೈ ಸೈ ಎನ್ನಬೇಕೆಂಬ ಅಪೇಕ್ಷೆಯಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ನನ್ನ ಮಾತುಗಳು ಮೆಚ್ಚುವುದಕ್ಕೆ ಯೋಗ್ಯವಾಗಿದ್ದರೆ ಅಂಗೀಕರಿಸಿ, ಅಲ್ಲವಾದರೆ ಕಡೆಗಣಿಸಿ ಬಿಡಿ (ಶಾಂತಿ.ಪು –43) ಎನ್ನುವ ಅರಿಕೆಯಲ್ಲಿ ಅರಸನ ಸೌಮ್ಯ ಸ್ವಭಾವ ಮತ್ತು ವಿಶಾಲ ಮನೋಭಾವಗಳು ಎದ್ದು ಕಾಣುತ್ತವೆ. ಸಾಮಾನ್ಯವಾಗಿ ರಾಜರುಗಳು ಆದೇಶಿಸುತ್ತಾರೆ. ಆದರೆ ಜೈನ ಧರ್ಮವನ್ನು ಒಪ್ಪಿ ಆಚರಿಸುವ ಅರಸರಲ್ಲಿ ಧರ್ಮದ ಪ್ರಭಾವವನ್ನು ಅವರ ಆಡಳಿತದಲ್ಲಿಯೂ ಕಾಣಬಹುದು.

ಧರ್ಮದ ಸ್ವಭಾವವು ಅಂದಿನ ಸಮಾಜದಲ್ಲಿ ಆಳರಸರ ಬೇಧವಿಲ್ಲದೆ ಆಗಿದೆ. ಅರಸರು ದೊಡ್ಡ ಮನಸ್ಸಿನವರಾಗಿದ್ದು ಪ್ರಜೆಗಳ ಉತ್ಪನ್ನದಲ್ಲಿ ಆರನೆಯ ಒಂದು ಭಾಗದಷ್ಟು ಮಾತ್ರ ಕಂದಾಯವಾಗಿ ಎತ್ತುವರು. ಅಲ್ಲಿಯ ಜನ ಸಾಮಾನ್ಯರಲ್ಲಿ ಕೂಡ ಜೈನ ಧರ್ಮ ಪ್ರಭಾವಿಯಾಗಿ ನೆಲೆಸಿದೆ. (ನೇಮಿ. ಪು.1 –18) ಎನ್ನುವಲ್ಲಿ ಧರ್ಮದ ಪ್ರಭಾವದ ಮಟ್ಟ ಎಷ್ಟೆಂಬುದು ತಿಳಿಯುತ್ತದೆ.

ಅರಸರು ಜ್ಞಾನ ವಿಸ್ತಾರದ ದೃಷ್ಟಿಯಿಂದ ವಿವಿಧ ವಿದ್ಯೆಗಳಲ್ಲಿ ಪರಿಣತಿಯನ್ನು ಹೊಂದುತ್ತಿದ್ದರು. 'ಪ್ರೀತಿಯಿಂದ ಅರ್ಥಶಾಸ್ತ್ರವನ್ನು ಓದಿದರೂ ಅಪರಾಜಿತನಿಗೆ ಮನಸ್ಸಿನಲ್ಲಿ ದಯೆಯೆಂಬುದು ಕಡಿಮೆಯಾಗಲಿಲ್ಲ. (ಶಾಂತಿ.ಪು –27). ಇಲ್ಲಿ ಪರಿಪೂರ್ಣವಾದ ಮಾನವೀಯ ಗುಣವುಳ್ಳ ಅರಸನ ಚಿತ್ರಣ ಸಿಗುತ್ತದೆ.

ಚಾಣಕ್ಯ ಋಷಿಯ ಕಥೆಯಲ್ಲಿ ಚಾಣಕ್ಯನು ಉಪಾಯದಿಂದ ಒಂದು ಹೇರು ಮಣ್ಣಿಗೆ ಒಂದು ಹೇರು ಚಿನ್ನವನ್ನು ಕೊಡಲಾಗುವುದೆಂದು ಹೇಳಿ ಮಣ್ಣನ್ನು ತರಿಸಿ ಮೊದಲ ಒಂದು ಹೇರಿಗೆ ಪ್ರತಿಯಾಗಿ ಚಿನ್ನವನ್ನು ನೀಡಿ, ಉಳಿದವರಿಗೆ ನಿಮಗೆ ಯಾರು ತರಲು ಹೇಳಿದರು, ನನಗೆ ಒಂದು ಹೇರು ಮಣ್ಣು ಮಾತ್ರ ಅಗತ್ಯವಿತ್ತು. ಉಳಿದದ್ದನ್ನು ನೀವೇ ತೆಗೆದುಕೊಂಡು ಹೋಗಿ ಎನ್ನುತ್ತಾನೆ. ಆಗ ಅವರೆಲ್ಲ ನಿರಾಶೆಯಿಂದ ಮಣ್ಣನ್ನು ಅಲ್ಲಿಯೇ ಬಿಸಾಡಿ ಹೋಗುತ್ತಾರೆ. ಆ ಮಣ್ಣಿನಿಂದ ಅರಮನೆ ಮತ್ತು ಕೋಟೆಯನ್ನು ಕಟ್ಟಿಸುತ್ತಾನೆ. (ವಡ್ಡಾ –356). ಅಂತೆಯೇ ಕೋಶಾಗಾರದಲ್ಲಿ ಹಣವಿಲ್ಲದುದರಿಂದ ಚಾಣಕ್ಯನು ಉಪಾಯ

ಮಾಡಿ ಪಾಟಲೀಪುತ್ರದ ಪ್ರಜೆಗಳನ್ನು ಬರಮಾಡಿ ಅವರಿಗೆಲ್ಲ ಸೊಕ್ಕನ್ನು ಬರಿಸುವ ಆಹಾರವನ್ನು ನೀಡಿ, ಸೊಕ್ಕೇರಿದ ಅವರಿಂದ ಅವರವರ ದ್ರವ್ಯಗಳು ಎಲ್ಲಿವೆಯೆಂಬುದನ್ನು ತಿಳಿದುಕೊಂಡು ಅದರಿಂದ ರಾಜ್ಯದ ಭಂಡಾರವನ್ನು ತುಂಬಿಸುತ್ತಾನೆ. (ವಡ್ಡಾ –359).

ಕೋಟೆ ಕೊತ್ತಲಗಳನ್ನು ಕಟ್ಟಿಸುವ ವಿಷಯವು ಹಳೆಯದಾದರೂ ಇಲ್ಲಿ ಕಂಡು ಬರುವ ವಿಶೇಷ ಚಾಣಕ್ಯ ಕೋಟೆ ಕಟ್ಟಲು ಪರಿಕ್ರಮವಿಲ್ಲದೆ ಕುಳಿತಲ್ಲೇ ಮಣ್ಣು ತರಿಸಿದ ಎನ್ನುವುದು. ಅಂತೆಯೇ ಪ್ರಜೆಗಳು ಕೂಡಿಟ್ಟ ಹಣವನ್ನು ತಂತ್ರಗಾರಿಕೆಯಿಂದ ರಾಜ ಭಂಡಾರಕ್ಕೆ ಪಡೆದನೆನ್ನುವುದು. ಇಲ್ಲಿ ಈ ರೀತಿಯ ಮಾರ್ಗೋಪಾಯವನ್ನು ಕಲ್ಪಿಸಿದ ಚಾಣಕ್ಯನ ಬುದ್ಧಿಶಕ್ತಿಯ ಪ್ರದರ್ಶನವಿದ್ದರೂ ಅವನ ಅರ್ಥಶಾಸ್ತ್ರವು ಯಾವ ರೀತಿಯಿಂದಲೂ ಜೈನಧರ್ಮಕ್ಕೆ ಹತ್ತಿರವಾಗುವುದಿಲ್ಲ. ಸತ್ಯ, ಅಸ್ತೇಯ, ಅಪರಿಗ್ರಹ ವ್ರತಗಳಿಗೆ ಒತ್ತು ಕೊಡುವ ಜೈನಧರ್ಮದ ಪ್ರಕಾರ ಚಾಣಕ್ಯನ ನೀತಿಗಳು ವ್ರತದ ಉಲ್ಲಂಘನೆಯಾಗುತ್ತದೆ.

3.4. ವರ್ಣಾಶ್ರಮ:

ಶಾಂತಿ ಪುರಾಣದಲ್ಲಿ ಕ್ಷೇಮಂಕರ, ವಜ್ರಾಯುಧ ಮತ್ತು ಸಹಸ್ರಾಯುಧವು ವರ್ಣಾಶ್ರಮಗಳನ್ನು ರಕ್ಷಿಸುತ್ತಾ ಪಾಪಕರ್ಮಕ್ಕೆ ಅವಕಾಶವೀಯದಂತೆ ಜಾಗರೂಕರಾಗಿ ರಾಜ್ಯವಾಳುತ್ತಿದ್ದನು. ಎಂಬ ಉಲ್ಲೇಖವಿದೆ. (ಶಾಂತಿ.ಪು –258).

ಜೈನ ಧರ್ಮ ಹುಟ್ಟಿಕೊಂಡ ಉದ್ದೇಶದ ಹಿನ್ನಲೆ ವೈದಿಕ ಧರ್ಮದಲ್ಲಿದ್ದ ವರ್ಣಾಶ್ರಮದ ತರತಮಗಳನ್ನು ವಿರೋಧಿಸುವುದಕ್ಕಾಗಿ. ಆ ವಿರೋಧದ ಶಕ್ತಿಯಿಂದಲೇ ಜನರನ್ನು ಆಕರ್ಷಿಸಿ ಆ ಧರ್ಮದ ಅನುಯಾಯಿಗಳನ್ನಾಗಿಸಿ ಅವರಲ್ಲಿ ಸರ್ವರೂ ಸಮರು ಎಂಬ ಭಾವವನ್ನು ಬಿತ್ತಿದರು. ಹುಟ್ಟುಗುರುಡಿಯಾದ ಹೊಲತಿಗೂ, ಸಾದೆ ಮಾರಿ ಜೀವಿಸುತ್ತಿದ್ದ ಅನಾಮದೇಯನಿಗೂ ಜೈನಧರ್ಮದಲ್ಲಿ ಅವಕಾಶವಿತ್ತು. ಅವರಿಗೂ ಶ್ರಾವಕವ್ರತಗಳನ್ನಿತ್ತು ಜೈನರನ್ನಾಗಿ ಮಾಡುತ್ತಿದ್ದರು. ಸಮಾಜದಲ್ಲಿ ನಾವು ಹೀನರು ಎಂಬ ಭಾವನೆಯನ್ನು ಹೊಂದಿದ್ದ ಜನರಲ್ಲಿ ಜೈನ ಧರ್ಮವು ಆತ್ಮ ವಿಶ್ವಾಸವನ್ನು ತುಂಬಿ ಅವರನ್ನು ಮೇಲಕ್ಕೆತ್ತಿದ್ದರಿಂದ ಬಹಳಷ್ಟು ದೀನ ದಲಿತರು ಜೈನಧರ್ಮವನ್ನು ಒಪ್ಪಿಕೊಂಡರು.

ಆದರೆ ಆದಿಪುರಾಣದ ರಚನೆಯ ಕಾಲಕ್ಕೆ ಜೈನಧರ್ಮದ ನಿಲುವಿನಲ್ಲಿ ಅನೇಕ ಬದಲಾವಣೆಯನ್ನು ಗುರುತಿಸಬಹುದಾಗಿದೆ. ಆದಿಬ್ರಹ್ಮನು ಮುಖ, ತೋಳು, ತೊಡೆ ಮತ್ತು ಪಾದಗಳನ್ನು ಕ್ರಮವಾಗಿ ಓದುವುದಕ್ಕಾಗಿಯೂ, ಆಯುಧಗಳನ್ನು ಹಿಡಿಯುವುದಕ್ಕಾಗಿಯೂ,

ವೈದಧ್ಯಂಶವನ್ನು ಪಡೆಯುವುದಕ್ಕಾಗಿಯೂ, ಶುಶ್ರೂಷೆಯನ್ನು ಮಾಡುವುದಕ್ಕಾಗಿಯೂ ಇವೆಯೆಂದು ತೋರಿಸಿಕೊಟ್ಟು ನಾಲ್ಕು ವರ್ಣಗಳನ್ನು ಸೃಜಿಸಿದನು. ಬ್ರಾಹ್ಮಣ ವರ್ಣಕ್ಕೆ – ಅಧ್ಯಯನ, ಅಧ್ಯಾಪನ ದಾನ, ಪತಿಗ್ರಹ, ಯಜನ, ಯಾಗಾದಿಗಳನ್ನೂ, ಕ್ಷತ್ರಿಯ ಜಾತಿಗೆ – ಸತ್ಯ, ದಾನ, ಪ್ರಜಾಪಾಲನೆ, ಶರಣಾಗತರನ್ನು ಕಾಪಾಡುವುದು, ಯುದ್ಧ, ಕ್ಷಮಾದಿ ಗುಣಗಳನ್ನು ಅಭ್ಯಸಿಸುವುದೇ ಮುಂತಾದುವನ್ನೂ, ವಣಿಗ್ಜಾತಿಗೆ – ಸ್ಥಲಜಲ ಯಾನಗಳನ್ನೂ, ಕೃಷಿ ವ್ಯಾಪಾರಗಳಲ್ಲಿ ತೊಡಗುವುದನ್ನೂ, ಶೂದ್ರಜಾತಿಗೆ – ಬ್ರಾಹ್ಮಣಾದಿ ಮೂರು ವರ್ಣಗಳ ಸೇವಾ ಕಾರ್ಯಗಳಲ್ಲಿಯೂ ಮತ್ತಿತರ ಕಾರ್ಯಗಳಲ್ಲಿಯೂ ತೊಡಗಿ ಜೀವನೋಪಾಯವನ್ನು ನಿರ್ವಹಿಸುವಂತೆ ಮಾಡುವುದನ್ನು ಏರ್ಪಡಿಸಿದನು. (ಆದಿ.ಪು –388). ಈ ರೀತಿಯಿಂದ ತಮ್ಮ ತಮ್ಮ ವರ್ಣೋಚಿತ ಕಾರ್ಯಗಳನ್ನು ನಿರ್ವಹಿಸದಿರುವವರನ್ನು 'ಹಾ.ಮಾ' ಎಂದು ಧಿಕ್ಕರಿಸಿ ದಂಡಿಸಬೇಕು ಎಂದು ಆಜ್ಞಾಪಿಸಿದನು. (ಆದಿ.ಪು.387).

ಸಮಾಜದಲ್ಲಿ ದಮನಕ್ಕೆ ಒಳಗಾಗಿದ್ದ ದುರ್ಬಲ ವರ್ಗಗಳಿಗೆ ಮಾಡಿದ್ದ ಭರವಸೆಗಳೆಲ್ಲಾ ಸರ್ರನೆ ಇಳಿದು ಹೋಗಿರಬೇಕು. ಇಲ್ಲಿ ವರ್ಣಗಳ ನಾಶಕ್ಕೆ ಪಣತೊಟ್ಟ ಜೈನಧರ್ಮವು ಅವುಗಳನ್ನು ರಕ್ಷಿಸುವ ಹೊಣೆಗಾರಿಕೆಯನ್ನು ವಹಿಸಿಕೊಂಡು ಆಜ್ಞೆಯನ್ನು ಹೊರಡಿಸುವ ಮಟ್ಟಕ್ಕೆ ನಿಂತಿದೆ. ವೈದಿಕರ ವರ್ಣಾಶ್ರಮ ಧರ್ಮವನ್ನು ಹೇಳಿ ಬ್ರಾಹ್ಮಣರು ಆದಿಬ್ರಹ್ಮನ ಮುಖದಿಂದ ಹುಟ್ಟಿದರು ಎಂದು; ವೈದಿಕರ ಅಭಿಪ್ರಾಯವನ್ನು ಬೇರೊಂದು ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಜೈನ ಧರ್ಮವು ಪ್ರಬಲವಾಗಿಯೇ ಇದ್ದ ಆ ಕಾಲಕ್ಕೆ ವೈದಿಕ ಧರ್ಮದ ವ್ಯವಸ್ಥೆಯ ಬಂಧನಗಳನ್ನು ಒಪ್ಪಿಕೊಳ್ಳುವ ಅವಶ್ಯಕತೆ ಎಷ್ಟರಮಟ್ಟಿಗೆ ಇತ್ತು, ಎನ್ನುವುದು ಪ್ರಶ್ನಾರ್ಹ.

ಆದಿದೇವನು ನಿರ್ಮಿಸಿದ್ದು ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ಮೂರು ವರ್ಣಗಳನ್ನು (ಆದಿ.ಪು.383) ಆದರೆ ಮುಂದೆ ಭರತನಿಂದ ನಿರ್ಮಾಣವಾಗುವ ಬ್ರಾಹ್ಮಣ ವರ್ಣಕ್ಕೆಂದು ಆಗಲೇ ವಿಶೇಷ ವೃತ್ತಿಗಳನ್ನು ನೇಮಿಸುವುದು ಕಂಡುಬರುತ್ತದೆ. ಜೈನ ಧರ್ಮವು ಇಲ್ಲಿ ಸಂಧಿಮಾಡಿಕೊಳ್ಳುವ ಹಂತದಲ್ಲಿತ್ತು ಎನಿಸುತ್ತದೆ.

ಪರಬ್ರಹ್ಮನ ದೇಹದಲ್ಲೊಗೆದ ದ್ವಿಜಶ್ರೇಷ್ಠರು ವರ್ಣೋತ್ತಮರು, ಲೋಕಪೂಜ್ಯರು, ಮತ್ತು ಭೂಮಿಯಲ್ಲಿ ಪಂಡಿತರು, ಉನ್ನತ ಗುಣರು, ಚಾರಿತ್ರ ಶುದ್ಧರು, ಇವರೇ

ಧರಾಮರರು, ಇವರೇ ಬ್ರಾಹ್ಮಣರು ಎಂದು ಷಟ್ಖಂಡ ಭೂಮಂಡಲೇಶ್ವರನಾದ ಭರತೇಶ್ವರನು ಹೊಗಳಿದನು. ತತ್ಫಲವಾಗಿ ದ್ವಿಜನ್ಮ ವಂಶವು ಎಲ್ಲೆಡೆಗಳಲ್ಲಿ ಪ್ರಖ್ಯಾತಿಗೊಂಡಿತು. (ಆದಿ.ಪು.667).

ವೈದಿಕ ಧರ್ಮದ ಮತ್ತು ಯಜ್ಞಯಾಗಾದಿಗಳಲ್ಲಿರುವ ಲೋಪ ದೋಷಗಳನ್ನು ತೋರಿಸುತ್ತಾ, ಇದಕ್ಕಿಂತ ಹೇಗೆ ಶ್ರೇಷ್ಠ ಎಂದು ಹೇಳುತ್ತಾ, ಬೆಳೆದು ಬಂದ ಜೈನ ಧರ್ಮವು ಬ್ರಾಹ್ಮಣರಿಗೆ ಅಗ್ರಸ್ಥಾನ ನೀಡಿದುದು ಆಶ್ಚರ್ಯಕರ ಸಂಗತಿ. ಬ್ರಾಹ್ಮಣರು ವರ್ಣೋತ್ತಮರು, ಲೋಕಪೂಜ್ಯರು, ಧರಾಮರರು ಎಂದು ಭರತೇಶನ ಬಾಯಿಂದ ಪಂಪ ನುಡಿಸಿದ್ದಾನೆ. ಬಹುಶಃ ಪಂಪನ ಪೂರ್ವಿಕರು ಬ್ರಾಹ್ಮಣರಾಗಿದ್ದುದರಿಂದ ಅವನ ದೃಷ್ಟಿ ಅತ್ತ ಸರಿದಿರಲೂಬಹುದು ಅಥವಾ ಜೈನರ ಉಳಿವಿಗೆ ಇದು ಅನಿವಾರ್ಯವಾಗಿದ್ದಿರಲೂಬಹುದು.

ವೈದಿಕ ಧರ್ಮದ ವಿಶೇಷ ಗುಣವೆಂದರೆ ಎಲ್ಲವನ್ನೂ ತನ್ನದನ್ನಾಗಿಸಿಕೊಳ್ಳುವುದು. ಆದ್ದರಿಂದಲೇ ಭಾರತದಲ್ಲಿ ಪ್ರಬಲವಾಗಿಯೇ ತಲೆ ಎತ್ತಿದ ಬೌದ್ಧ ಜೈನಾದಿ ಧರ್ಮಗಳು ಕಾಲಕ್ರಮೇಣದಲ್ಲಿ ದುರ್ಬಲವಾದುವು. ವೈದಿಕ ಧರ್ಮದ ಜೊತೆಯಲ್ಲಿಯೇ ಬೆಳೆದು ಹಲವಾರು ವಿಷಯಗಳಲ್ಲಿ ಪ್ರತಿಭಟ್ವದಲ್ಲಿಯೂ ವೈದಿಕ ಧರ್ಮದೊಂದಿಗೆ ಸಂಧಿ ಮಾಡಿಕೊಳ್ಳುತ್ತಾ ವೈದಿಕ ಧರ್ಮಕ್ಕೂ ತಮ್ಮ ಧರ್ಮಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ ಎಂಬ ಮಟ್ಟಕ್ಕೆ ತನ್ನ ಅಂತರವನ್ನು ಸಡಿಲಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. ನಿಜವಾಗಿಯೂ ಇದು ಭಾರತದ ದುರ್ದೈವವೆಂದು ಹೇಳಬಹುದು. ಹೀಗಾಗಿಯೇ ಭಾರತದ ಯಾವುದೇ ಚಳುವಳಿಗಳು ದೀರ್ಘಕಾಲ ಬಾಳಲಿಲ್ಲ ಮತ್ತು ಅವುಗಳ ಮೂಲ ಅಂತಸ್ಸತ್ವವನ್ನೂ ಉಳಿಸಿಕೊಳ್ಳಲಿಲ್ಲ.

ಆದಿಬ್ರಹ್ಮನು ಪ್ರಜಾಜೀವನ ನಿರ್ವಾಹಕ್ಕಾಗಿ ಸೇವಾಧರ್ಮ ಸಾಧಕವಾದ ಖಡ್ಗ ಕಾರ್ಯವನ್ನೂ, ಅನೇಕ ಲಿಪಿಗಳಿಂದ ಬರೆಯಲಿಕ್ಕೆ ಯೋಗ್ಯವಾದ ಮಷಿಕರ್ಮವನ್ನೂ, ರೈತ ಕುಟುಂಬೋಚಿತವಾದ ಕೃಷಿ ಕರ್ಮವನ್ನೂ, ಶಾಸ್ತ್ರದಿಂದುಪಜೀವಿಸಲು ಸಹಾಯಕವಾದ ಶಾಸ್ತ್ರ ವಿದ್ಯೆಯನ್ನೂ, ವ್ಯಾಪಾರಿ ಜನಕ್ಕುಚಿತವಾದ ವಾಣಿಜ್ಯವನ್ನೂ, ಕೈಗಳ ನಿಪುಣತೆಯಿಂದ ಮಾಡಲರ್ಹವಾದ ಚಿತ್ರ ಕಲಾಪ ಪತ್ರಚ್ಛೇದಾದಿ ರೂಪವಾದ ಶಿಲ್ಪವನ್ನೂ ಜನರಿಗ ಉಪದೇಶಿಸಿದನು. ಕ್ಷತ್ರಿಯ ವಣಿಕ್, ಶೂದ್ರರೆಂಬ ಮೂರು ವರ್ಣದ ಜನಗಳ ಮಧ್ಯದಲ್ಲಿ ಪೆಟ್ಟಿನಿಂದ ರಕ್ಷಿಸಲರ್ಹವಾದ ಗುಣಗಳಿಂದ ಕೂಡಿದ ಕ್ಷತ್ರಿಯ ಸಮೂಹಕ್ಕೆ ಶಸ್ತ್ರ ಕ್ರಮವನ್ನೂ, ವರ್ತಕ ವಂಶಕ್ಕೆ ಪಶುಪಾಲನೆ ವ್ಯವಸಾಯ ಮತ್ತು ಕ್ರಯ ವಿಕ್ರಯಗಳನ್ನು

ನಡೆಸುವ ಕಾರ್ಯಗಳನ್ನೂ, ಸ್ಪೃಶ್ಯಾಸ್ಪೃಶ್ಯರೆಂದು ಇಬ್ಬಗೆಯಾದ ಕರ್ಮಕರ ಶೂದ್ರರಿಗೆ ಶುಶ್ರೂಷಾ ಕಾರ್ಯವನ್ನೂ ಯಥಾಯೋಗ್ಯವಾಗಿ ನಡೆಸುವಂತೆ ಉಪದೇಶಿಸಿದನು. ವರ್ಣ ಸಂಕರಗೊಳ್ಳದಂತೆ ತಮ್ಮ ತಮ್ಮ ಜಾತಿ ಜನರಲ್ಲಿ ಸಂಬಂಧವನ್ನೂ ಕೊಳ್ಕೊಡುಗೆಯನ್ನೂ ಮಾಡಿಕೊಳ್ಳುವಂತೆ ಆಜ್ಞಾಪಿಸಿದನು. (ಆದಿ.ಪು.383).

ದುರ್ಬಲ ವರ್ಗಗಳನ್ನು ಶೋಷಣೆಯಿಂದ ಬಿಡುಗಡೆ ಮಾಡುವ ಹೊಸ ಭ್ರಮೆಯನ್ನು ಹುಟ್ಟಿಸಿದ ಜೈನಧರ್ಮವು ಆದಿಪುರಾಣ ರಚನೆಯ ಕಾಲಕ್ಕೆ ಸ್ಪೃಶ್ಯಾಸ್ಪೃಶ್ಯತೆಯನ್ನು ಒಪ್ಪಿಕೊಂಡು ವರ್ಣಸಂಕರವಾಗುವುದನ್ನು ತಡೆಯಲು ನೆರವಾದ ಅಂಶವನ್ನು ಇಲ್ಲಿ ಮುಖ್ಯವಾಗಿ ಗಮನಿಸಬಹುದು. ಮುಂದೆ ಭರತನು ದುಃಸ್ವಪ್ನಗಳಿಗೆ ಫಲವನ್ನು ಹೇಳುವಾಗ ಚತುರ್ವರ್ಣ ಧರ್ಮ ನಷ್ಟವಾಗುವುದಕ್ಕೆ ತನ್ನ ವ್ಯಥೆಯನ್ನು ವ್ಯಕ್ತಪಡಿಸುತ್ತಾನೆ. (ಆದಿ.ಪು-669).

ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ ನಡೆದ ವೀರಶೈವ ಕ್ರಾಂತಿಯ ಪರಿಣಾಮ ಜೈನ ಧರ್ಮದ ಮೇಲೂ ಆಗಿದೆ. ಆಗ ಜೈನ ಧರ್ಮವು ತನ್ನ ಅಸ್ತಿತ್ವಕ್ಕಾಗಿ ಹೋರಾಡಬೇಕಾದ ಸಂದರ್ಭ ಒದಗದೇ ಇರಲಿಲ್ಲ. ಅದರ ಜೊತೆಗೆ ಕೆಲವು ಆಂತರಿಕ ದೌರ್ಬಲ್ಯಗಳನ್ನು ಅರ್ಥಮಾಡಿಕೊಂಡು ಸಮರ್ಥಿಸಿಕೊಳ್ಳಬೇಕಾದ ಹಂತವೂ ಒದಗಿ ಬಂದಿದೆ. ಬ್ರಹ್ಮಶಿವನ ಕೆಲವು ಪದ್ಯಗಳನ್ನು ಈ ನೆಲೆಯಲ್ಲಿ ಗಮನಿಸಿದಾಗ ಅವನ ನಿಲುವು ತಿಳಿಯುತ್ತದೆ. ° 1.

ಕುಲಹೀನಗೊಂದದಂ
ಕುಲಜಂಗೊಂದದಮಕ್ಕು ಮಾಚಾರಮದೆಂ
ದೊಲವರಮಂ ಪೇಳ್ವುದು ನಿ
ಮ್ಮೊಳಧರ್ಮಮದಲ್ಲ ತಕ್ಕಮತಮೆಂಗೆತವಂ

(ಸಮ.ಪ —332)

ಅಡಿಟಿಪ್ಪಣಿ:

°1. ತನ್ನ ಕೃತಿಯ ಮೊದಲಭಾಗದಲ್ಲಿ ಮೇದಿನಿಪತಿ ಭರತ ಮಾಡಿದುದೇ ಶಾಸನ (ಸಮ.ಪ.31) ಚತುರ್ವರ್ಣಗಳಲ್ಲಿ ಕ್ಷತ್ರಿಯ ಶ್ರೇಷ್ಠ (ಸಮ.ಪ.30) ಎಂದ ಬ್ರಹ್ಮಶಿವ ಇಲ್ಲಿ ಸಮಾನತೆಯ ಬಗ್ಗೆ ಹೇಳುತ್ತಾನೆ. ವೀರಶೈವ ಚಳುವಳಿಯ ಎಲ್ಲರೂ ಸಮರೆಂಬ ಭಾವನೆ ಅವನಿಗೆ ಪ್ರಚೋದನೆ ನೀಡಿರಬಹುದು.

ಪೊಲೆಯುಂ ಪಡೆದ ಸುವರ್ಣಂ
ಕಲುಂಬುಗೊಂಡಿರ್ದು ತಾಂಬ್ರಮಕ್ಕುಮೆ ಧರ್ಮಂ
ಕುಲಜಂಗಮ ಕುಲಜಂಗಂ
ಸಲವೇಳ್ಪುದು ಕುಲಮದೇವುದಱತಿಮುಖ್ಯಂ

(ಸಮು.ಪ — 332)

ಹಿಮಕರನ ಹಿಮಾಂಶುಗಳು
ತ್ತಮ ಜಾತಿಗಮಂತೆ ಜಾತಿಗಂ ತಣ್ಪಿಂದಂ
ಸಮನಪ್ಪತೆಱದಿ ನಱನುಂ
ಸಮನಾಗಲೆವೇಳ್ಕು ಮಾವಜಾತಿಗಮೆಂತುಂ

(ಸಮು.ಪ.333)

ಕ್ಷತ್ರಿಯನಾದಿಯಾಗಿ ಕಡೆಯೊಳ್ ಪೊಲೆಯಂಬರವೆಲ್ಲ ಜಾತಿಗಂ
ಧಾತ್ರಿಯೊಳಿಲ್ಲ ನೋಡುವಡಮೇತೆಱದಿಂ ಕುಲೆಯುಲ್ಲ ಶುದ್ಧಚಾ
ರಿತ್ರಮರೊಂದೆ ಮಾರ್ಗಮದೞೊ ಜಿನಧರ್ಮಮೆ ಧರ್ಮ ಮೈಹಿಕಾ
ಮುತ್ರಿಕ ಸೌಖ್ಯಹೇತು ಭುವನತ್ರಯ ಸಾರಮದೆಂತುಮೆಲ್ಲಿಯುಂ

(ಸಮು.ಪ — 333)

3.5. ಯುದ್ಧ :

ಜೈನ ಪುರಾಣಗಳಲ್ಲಿ ದಿಗ್ವಿಜಯದ ವರ್ಣನೆ ಮತ್ತು ಅನೇಕ ಯುದ್ಧ ಸಂದರ್ಭಗಳ ಚಿತ್ರಣವಿದೆ. ಯುದ್ಧಸಿದ್ಧತೆ, ಸೇನಾಶಿಬಿರ, ಭೀಕರ ಯುದ್ಧ, ವಿರೋಧಿಗಳ ಶರಣಾಗತಿ, ಸೋತವರ ಸಂಪತ್ತನ್ನು ಕೈವಶಪಡಿಸಿಕೊಳ್ಳುತ್ತಿದ್ದ ರೀತಿ, ಹೀಗೆ ಹಲವಾರು ವಿಷಯಕ್ಕೆ ಸಂಬಂಧಿಸಿದ ಚಿತ್ರಗಳಿವೆ. ದಿಗ್ವಿಜಯದ ವರ್ಣನೆಗೂ ಯುದ್ಧದ ವರ್ಣನೆಗೂ ಅಂತರವಿದೆ. ಕಾರಣ ಯುದ್ಧವನ್ನು ವರ್ಣಿಸಿದರೆ ಹಿಂಸೆಯನ್ನು ವರ್ಣಿಸಿದಂತಾಗುತ್ತದೆ. ಜೈನ ಪುರಾಣದ ಸಂವಿಧಾನದ ಪ್ರಕಾರ ಯುದ್ಧ ಮಾಡಿ ಸತ್ತ ವೀರರ, ಯುದ್ಧದ ವೈವಿಧ್ಯಮಯವಾದ ವರ್ಣನೆಗೆ ಅವಕಾಶವಿಲ್ಲ. ಆದುದರಿಂದ ಕವಿಗಳು ಯುದ್ಧದ ತಯಾರಿ ಯುದ್ಧಕ್ಕೆ ಹೊರಟ

ಸೈನ್ಯದ ವರ್ಣನೆ, ಯುದ್ಧ ಶಿಬಿರ, ಯುದ್ಧ ವಿರಾಮದಲ್ಲಿ ರಾಜರ ವಿಲಾಸ, ಜಲಕ್ರೀಡೆ ಮುಂತಾದವುಗಳ ವರ್ಣನೆಗಳನ್ನು ಮಾಡಿ ಯುದ್ಧದ ಫಲಿತಾಂಶವನ್ನು ಒಂದು ಮಾತಿನಲ್ಲಿ ಹೇಳಿ ಮುಗಿಸಿದ್ದಾರೆ.

ಆದರೆ ಶಾಂತಿ ಪುರಾಣದಲ್ಲಿ ದಿಗ್ವಿಜಯದ ವರ್ಣನೆಯಲ್ಲಿ ಅಲ್ಲಲ್ಲಿ ಹಿಂಸೆಯ ಚಿತ್ರಣವಿದೆ. ಕವಿಗೆ ಅಂದಿನ ಯುಗಧರ್ಮದ ಪ್ರಭಾವದಿಂದ ತಪ್ಪಿಸಿಕೊಳ್ಳುವುದು ಅಸಾಧ್ಯವಾಗಿರಬೇಕು. ಶತ್ರುಬಲದ ನಾಶವಾಯಿತು, ಅಧೀನಮಾಡಿಕೊಂಡನು, ಶರಣಾದರು ಎಂಬುದಾಗಿ ಯುದ್ಧದ ಹಂತಹಂತವನ್ನು ವರ್ಣಿಸಿಕೊಂಡು ಬಂದ ಕವಿ 'ನೊಣಗಳು ಮುಸುರಿಕೊಂಡ ಜೇನು ಹುಟ್ಟುಗಳಿಂದಲೇ ಭೂಮಿಯನ್ನು ಪೋಷಿಸುವನೋ ಏನೋ ಎಂಬಂತೆ ಸೇನಾಪತಿಯು 'ಭಲ್ಲ' ವೆಂಬ ಬಾಣವಿಶೇಷದಿಂದ ರೋಮಮಯವಾದ ಆ ಪಾರಸಿಕರ ತಲೆಗಳನ್ನು ಕತ್ತರಿಸಿ ಕೆಡಹಿ ಭೂಮಿಯನ್ನು ಮುಚ್ಚಿಬಿಟ್ಟನು. ಮತ್ತು ಎಳ್ಳಿನ ಗಾಣದಲ್ಲಿ ಎಲ್ಲೋ ಉಳಿದುಕೊಂಡ ಒಂದೊಂದು ಎಳ್ಳು ಕಾಳಿನಂತೆ ಈ ಯುದ್ಧದಲ್ಲಿ ಬದುಕಿ ಉಳಿದವರು ದೊಡ್ಡವರ ಕೋಪಕ್ಕೆ ನಮಸ್ಕಾರವೇ ಮದ್ದು ಎಂದು ಅರಿತು ಶರಣಾದರು (ಶಾಂತಿ.ಪು.—451) ಎಂದು ವರ್ಣಿಸಿದ್ದಾನೆ. ಗಾಣದಲ್ಲಿ ಉಳಿದ ಎಳ್ಳಿನಂತೆ ಎಷ್ಟು ಸೈನಿಕರು ಉಳಿದಿರಲು ಸಾಧ್ಯ ಎಂಬುದನ್ನು ಊಹಿಸಬಹುದು. ಯುದ್ಧವಿಲ್ಲದೆ ಚಕ್ರವರ್ತಿಗಳ ದಿಗ್ವಿಜಯ ನಡೆಯುತ್ತಿರಲಿಲ್ಲ ಎಂಬುದು ಇಲ್ಲಿ ಗಮನಾರ್ಹ.

ನೇಮಿನಾಥ ಪುರಾಣದ ಹನ್ನೊಂದು ಮತ್ತು ಹನ್ನೆರಡನೆಯ ಆಶ್ವಾಸದಲ್ಲಿ ದೀರ್ಘವಾಗಿ ಚಿತ್ರಿಸಲಾಗಿರುವ ಕೌರವ ಪಾಂಡವರ ಯುದ್ಧವರ್ಣನೆ, ಶಾಂತಿ ಪುರಾಣದ ನಾಲ್ಕನೇ ಆಶ್ವಾಸದಲ್ಲಿ ಬರುವ ಅಪರಾಜಿತ ಖೇಚರರ ಯುದ್ಧ ವರ್ಣನೆಗಳು ಜೈನ ಧರ್ಮದ ದೃಷ್ಟಿಯಲ್ಲಿ ಪುರಾಣಕ್ಕೆ ಹೊಂದುವುದಿಲ್ಲ. ಅನಂತವೀರ್ಯನ ಬಾಣಗಳ ಮಳೆಯಲ್ಲಿ ಆಕಾಶದಿಂದ ಬಿಸಿ ನೆತ್ತರಿನ ಮಳೆಗಳೂ ಒಮ್ಮೆಲೆ ಕೂಡಿಕೊಳ್ಳಲಾಗಿ, ರಕ್ತದಿಂದ ತೊಯ್ದುಹೋದ ಆ ವಿಜಯಾರ್ಧ ಪರ್ವತವು ಬೆಳ್ಳಿಯ ಬೆಟ್ಟವಲ್ಲ ಕಾವಿಯ ಬೆಟ್ಟವೋ ಏನೋ ಎಂಬ ಭೀತಿಯನ್ನುಂಟು ಮಾಡಿತು. (ಶಾಂತಿ.ಪು —106) ಎಂಬ ಬೀಭತ್ಸ ವರ್ಣನೆಯನ್ನು ನೋಡುವಾಗ ಪೊನ್ನನಿಗೆ ಅಹಿಂಸಾ ತತ್ವವು ಮರೆತುಹೋದ ಹಾಗೆ ಅನ್ನಿಸುತ್ತದೆ. ಲೌಕಿಕ ಕಾವ್ಯಗಳಲ್ಲಿ ಮಾತ್ರ ಇಂತಹ ವರ್ಣನೆಗಳಿಗೆ ಅವಕಾಶವಿದೆ.

3.6. ವೇಶ್ಯಾವಾಟಿಕೆ :

ಜೈನ ಪುರಾಣಗಳಲ್ಲಿ ವೇಶ್ಯಾವಾಟಿಕೆಯ ದೀರ್ಘ ವರ್ಣನೆಗಳು ಇವೆ. ಪೊನ್ನನು 'ಗುತ್ತಿಗೆದಾರ ವಿಟನಾದ ವರ್ತಕ' ನೊಬ್ಬನನ್ನು ಪ್ರಸ್ತಾಪಿಸಿರುವುದನ್ನು ನೋಡಿದರೆ (ಶಾಂತಿ.ಪು.293) ವೇಶ್ಯಾವಾಟಿಕೆಗಳು ಆ ಕಾಲದ ಅರಸೊತ್ತಿಗೆಯ ಜೀವನದ ಒಂದು ಭಂಗವಾಗಿದ್ದಿರಬಹುದು. ಗುತ್ತಿಗೆದಾರ ರಾಜ ಭಂಡಾರಕ್ಕೆ ಲಾಭದಲ್ಲಿ ಒಂದಂಶವನ್ನು ತೆರಿಗೆಯಾಗಿ ಕೊಡುತ್ತಿದ್ದಿರಬಹುದು. ವೇಶ್ಯಾವಾಟಿಕೆಯ ಪ್ರಯೋಜನವನ್ನು ಅರಸನಾದಿಯಾಗಿ ಇತರರು ಪಡೆಯುತ್ತ ಇದ್ದಿರಬೇಕು. ಹೀಗಾಗಿ ಕವಿಗಳು ತಮ್ಮ ಕಾವ್ಯ ನಾಯಕರನ್ನು ಸೂಳೆಗೇರಿಯಲ್ಲಿ ಹಿಂದು ಮುಂದು ನೋಡದೆ ಸುತ್ತಿಸಿದ್ದಾರೆ.

ಸಾಮಾನ್ಯವಾಗಿ ಲೌಕಿಕ ಕಾವ್ಯದಲ್ಲಿ ವೇಶ್ಯಾವಾಟಿಕೆಯ ವರ್ಣನೆ ಬರುತ್ತದೆ. ಉದಾಹರಣೆಗೆ ಪಂಪನ ವಿಕ್ರಮಾರ್ಜುನ ವಿಜಯವನ್ನು ನೋಡಬಹುದು. ಲೌಕಿಕ ಕಾವ್ಯದಲ್ಲಿ ವೇಶ್ಯಾವಾಟಿಕೆಯ ವರ್ಣನೆ ಮಾಡಿದ ಪಂಪ ಆಗಮಿಕ ಕಾವ್ಯದಲ್ಲಿ ಮಾಡುವುದಿಲ್ಲ. ರನ್ನನೂ ತನ್ನ ಅಜಿತ ಪುರಾಣದಲ್ಲಿ ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದಾನೆ. ಆದರೆ ಪೊನ್ನ ತನ್ನ ಆಗಮಿಕ ಕಾವ್ಯ ಶಾಂತಿಪುರಾಣದ ಎಂಟನೇ ಆಶ್ವಾಸದಲ್ಲಿ ವೇಶ್ಯಾವಾಟಿಕೆಯ ಸಮಗ್ರ ದರ್ಶನ ಮಾಡಿಸಿದ್ದಾನೆ. ಇದಕ್ಕೆ ಜನ್ನ, ನಾಗಚಂದ್ರ, ಕರ್ಣಪಾರ್ಯರು ಹೊರತಲ್ಲ. ಅನಂತನಾಥ ಪುರಾಣದ ಏಳನೇ ಆಶ್ವಾಸ, ನೇಮಿನಾಥ ಪುರಾಣದ ನಾಲ್ಕನೇ ಆಶ್ವಾಸಗಳಲ್ಲಿ ವೇಶ್ಯಾವಾಟಿಕೆಯ ದೃಶ್ಯ ಪರಂಪರೆ ಸಮಾವೇಶಗೊಂಡಿದೆ. ನಯಸೇನನೂ ತನ್ನ ಧರ್ಮಾಮೃತದಲ್ಲಿ ವೇಶ್ಯೆಯರು ಮತ್ತು ಅವರ ವೃತ್ತಿಯ ಬಗ್ಗೆ ಅಲ್ಲಲ್ಲಿ ಸಾಕಷ್ಟು ವಿವರಗಳನ್ನು ನೀಡಿದ್ದಾನೆ. ಪಂಪನು ತನ್ನ ಆದಿಪುರಾಣದ ಹತ್ತನೇ ಆಶ್ವಾಸದಲ್ಲಿ ಕೌಮುದೀ ಮಹೋತ್ಸವದ ಸಂದರ್ಭದಲ್ಲಿ ಸಾಕಷ್ಟು ಶೃಂಗಾರ ವರ್ಣನೆಯನ್ನು ಮಾಡಿದ್ದಾನೆ.

ಜೈನ ಯುಗದ ಆರಂಭಕಾಲೀನ ಕವಿಗಳಾದ ಪಂಪ ರನ್ನರು ಆಗಮಿಕ ಲೌಕಿಕ ಎರಡೂ ಪರಂಪರೆಯಲ್ಲಿ ಕೃತಿ ರಚನೆ ಮಾಡಿದರೆ, ಮುಂದೆ ಬರುವ ಕವಿಗಳು ಆಗಮಿಕ ಕಾವ್ಯಗಳನ್ನು ಮಾತ್ರ ರಚಿಸಿರುವುದನ್ನು ಗಮನಿಸಬಹುದು. ಕೆಲವೊಮ್ಮೆ ಲೌಕಿಕ ವಸ್ತುವನ್ನು ಆಗಮಿಕ ಚೌಕಟ್ಟಿನಲ್ಲಿ ಇರಿಸಿರುವುದನ್ನು ಗಮನಿಸಬಹುದು. ಯುಗಧರ್ಮದ ದೃಷ್ಟಿಯಿಂದ ನೋಡಿದಾಗ ಹನ್ನೊಂದನೇ ಶತಮಾನಕ್ಕಾಗಲೇ ಪ್ರಾರಂಭವಾಗಿದ್ದ ವೀರಶೈವ ಚಳುವಳಿಯ ಪ್ರಭಾವವೇ ಇದಕ್ಕೆ ಕಾರಣ. (ವೀರಶೈವ ಧರ್ಮದ ಆದ್ಯರಲ್ಲೊಬ್ಬನಾದ ದೇವರ ದಾಸಿಮಯ್ಯ

ಹನ್ನೊಂದನೇ ಶತಮಾನಕ್ಕೆ ಸೇರಿದವನು) ಜೈನ ಧರ್ಮವು ತನ್ನ ಅಸ್ತಿತ್ವಕ್ಕಾಗಿ ಸ್ಪರ್ಧಿಸಬೇಕಾದ ನೆಲೆಯಲ್ಲಿ ಧರ್ಮದ ಉಳಿವಿಗಾಗಿ ಧರ್ಮವನ್ನು ಪ್ರಚುರಪಡಿಸುವತ್ತ ಕವಿಗಳ ದೃಷ್ಟಿ ಹೊರಳಿದ್ದರಿಂದ ಆಗಮಿಕ ಕಾವ್ಯ ರಚನೆ ಅವರಿಗೆ ಅನಿವಾರ್ಯವಾಯಿತು. ಈ ಕಾಲದ ಕೃತಿಗಳಲ್ಲಿ ಕವಿಗಳು ಧರ್ಮದ ಮೇಲೆ ಹೆಚ್ಚು ಒತ್ತು ಹಾಕಿರುವುದನ್ನು ಗಮನಿಸಬಹುದು. ವೀರಶೈವ ಸಾಹಿತ್ಯದಂತೆ ಸಾಮಾನ್ಯರಿಗೂ ಜೈನ ಕಾವ್ಯ ತಲುಪಬೇಕು ಎನ್ನುವ ದೃಷ್ಟಿಯಿಂದ ಚಂಪೂ ಕಾವ್ಯದ ಬಿಗಿಯಾದ ಭಾಷೆ ಸಡಿಲಗೊಂಡಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಆಗಮಿಕ ಕಾವ್ಯವನ್ನು ಮಾತ್ರ ರಚಿಸುತ್ತಿದ್ದ ಕವಿಗಳು ಲೌಕಿಕ ಕಾವ್ಯದ ಅನೇಕ ಲಕ್ಷಣಗಳನ್ನು ಇಲ್ಲಿಯೂ ಅಳವಡಿಸಿಕೊಂಡರು. ಅದರಲ್ಲಿ ವೇಶ್ಯಾವಾಟಿಕೆಯ ವರ್ಣನೆಯೂ ಒಂದು.

ಒಟ್ಟಿನಲ್ಲಿ ಆಗಮಿಕ ಕಾವ್ಯದ ಪ್ರಾರಂಭದಲ್ಲಿ ಕಂಡುಬರದ ವೇಶ್ಯಾವಾಟಿಕೆಯ ವರ್ಣನೆ ಮುಂದೆ ಒಂದು ಕಾವ್ಯ ಪದ್ಧತಿಯಾಗಿ ಸಂಪ್ರದಾಯವಾಗಿ ಅಳವಟ್ಟಿದೆ.

3.7. ಬಡತನ:

ಹಳಗನ್ನಡ ಜೈನ ಪುರಾಣಗಳಲ್ಲಿ ಬಡತನ ಮತ್ತು ಬಡವರ ಅಂದಿನ ಸ್ಥಿತಿಯನ್ನು ಪ್ರತಿಬಿಂಬಿಸುವ ಅನೇಕ ಸನ್ನಿವೇಶಗಳಿವೆ. ಬಡವರ ಮೇಲೆ ನಡೆಯುತ್ತಿದ್ದ ಸಿರಿವಂತರ ದಬ್ಬಾಳಿಕೆ, ದೌರ್ಜನ್ಯದ ಚಿತ್ರಣವೂ ಇದೆ. ಜೈನ ದರ್ಶನದ ಪ್ರಕಾರ ಬಡತನ ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕೃತ್ಯದ ಫಲ. (ವಡ್ಡಾ –196).

ಲೋಕದಲ್ಲಿ ಬಡತನದ ಹೊರತಾಗಿ ದುಃಖಕರವಾದುದು ಯಾವುದೊಂದು ಇಲ್ಲ. ಬಡತನವೇ ಲೋಕದಲ್ಲಿ ಮಹಾಪಾಪವು. ಬಡತನವನ್ನು ಪ್ರಕಾಶಪಡಿಸುವುದು ಕಣಿಯಿಲ್ಲದ ದುಃಖವು ಮತ್ತು ಪಾಪವು. ಬಡತನ ಸ್ನೇಹವನ್ನು ಯಾರೂ ಮಾಡುವುದಿಲ್ಲ, ವಿಶೇಷ ಸಮಾರಂಭದಲ್ಲಿ ಇತರರ ಮನೆಗೆ ಹೋದಾಗ ಆ ಮನೆಯವರು ಸಾಮಾನ್ಯನನ್ನಾಗಿ ನೋಡುತ್ತಾರೆ. ಅಲ್ಪವಾದ ಉಡುಪುಳ್ಳವನಾದ ಬಡವನನ್ನು ಕಂಡ ಮಹಾಜನರು ನಾಚಿಕೆಯಿಂದ ದೂರದಿಂದಲೇ ತೊಲಗಿಸಿ ಬಿಡುತ್ತಾರೆ. (ವಡ್ಡಾ–350 –351)

ಅಯ್ಯಾ ನನಗೆ ಉಡಲಿಕ್ಕೆ ಗತಿಯಿಲ್ಲ ಎಲ್ಲಾದರೊಂದು ದುಮ್ಮಿಕ್ಕೆ ಸಿಗುವಷ್ಟಾದರೂ ಬಟ್ಟೆ ತಂದು ಕೊಡಿ. (ವಡ್ಡಾ –158).

ಬಡವರ್ ಕೂಳಿ ರಾಶಿಯುಂ ಕವಿದಂತೆ (ಧರ್ಮಾ.1 -320)

ಬಡಿರುಂಬೈದು ಕಳ್ದುಂ ಪಡೆವಂತಿರೆ ಮುಕ್ತಿ ಮರುಳೆ ಬಡವನ ಧನಮೋ (ಧರ್ಮಾ. 1 -284)

ಅಡಿಗೆ ಮಾಡುವ, ಬಡಿಸುವ, ಸೇವೆ ಮಾಡುವ ಹೆಂಡಿರ ಮೊಲೆಗಳನ್ನು ವಸ್ತ್ರದಿಂದ ಕಟ್ಟಿಸಿ ಶಿಶುಗಳನ್ನು ಮೊಲೆಯುಣ್ಣಲು ಬಿಡದೆ ಸೇವೆ ಮಾಡಿಸುತ್ತಿದ್ದರು. (ವಡ್ಡಾ -328).

ನೆತ್ತಿಯು ತರಂಟಾದ ಸೌದೆ ಹೊರುವ ಬಡವರ್ಗ (ಧರ್ಮಾ.1 -277).

ಎನ್ನುವ ವಿವರಗಳಲ್ಲಿ ಅಂದಿನ ಬಡವರ ಸ್ಥಿತಿಗತಿಯು ಯಥಾಪ್ರಕಾರ ಮೂಡಿ ಬಂದಿದೆ 'ಬಡತನಕ್ಕೆ ಈಡಾಗಿ ಬಂಧುಗಳ ಮುಂದೆ ಒಂದು ಕೈಯೊಡ್ಡುವುದು ಮೂರ್ಖತನ (ನೇಮಿ.ಪು.1 -196) ಎಂದು ಬಡತನವನ್ನು ನುಂಗಿ ಬದುಕುತಿದ್ದ ಬಡವರ ಜೀವನ ಎಂತಹ ಕರುಣಾಜನಕವಾಗಿದ್ದಿರಬಹುದೆಂದು ಕಲ್ಪಿಸಬಹುದು.

ಪಗಲಿರುಳೆಂಬ ಭೇದಮನಂತುಂ ಬಡವರ್ ಕಡುಬಲ್ಲದರ್ ವಿಷಾ
ಹಿಗಣಮನೇಕರೌದ್ರ ಮೃಗಜಾತಿಗಳಾಳರನೆಂಬುದೊಂದುದಂ
ದುಗಮುಳಿಪಾಯುಲಂ ಮಜುಕಮಾಮಯಮಪ್ಪ ಪಮೃತ್ಯುವೆಂದಿವ
ಲ್ಲಿಗೆ ಪೊಱಗೆಂದೊಡಿಂ ಸುಖಮನೇವೊಗಳ್ವುದೊ ಭೋಗಭೂಮಿಯಾ

(ಆದಿ.ಪು -229)

ಎಂದು ಭೋಗಭೂಮಿಯ ಕಲ್ಪನೆಯಲ್ಲಿಯೇ ವಿಹರಿಸುತ್ತಾ, ಇದ್ದ ಜೈನರಿಗೆ ಸಾಮಾನ್ಯನ ಸ್ಥಿತಿಯ ಕಲ್ಪನೆ ಎಷ್ಟರಮಟ್ಟಿಗೆ ಇತ್ತು ಎನ್ನುವುದು ಯೋಚಿಸಬೇಕಾದ ಅಂಶ.

ಅಧ್ಯಾಯ ನಾಲ್ಕು : ಕಾಮ

ಅಧ್ಯಾಯ ನಾಲ್ಕು

: ಕಾಮ :

ಜೈನ ಪುರಾಣಗಳಲ್ಲಿ ಬರುವ ಕಾಮ ದೇವರಲ್ಲಿ ಬಾಹುಬಲಿ ಮೊದಲನೆಯ ಕಾಮ ದೇವ. ಬಾಹುಬಲಿಯಾದಿಯಾಗಿ ಜಂಬೂಸ್ವಾಮಿಯವರೆಗೆ ಇಪ್ಪತ್ತನಾಲ್ಕು ಕಾಮದೇವರಿದ್ದಾರೆ. ಜೈನ ಧರ್ಮವು ಕಾಮವು ಕೀಳಲ್ಲ, ಧರ್ಮದ ವೃದ್ಧಿಗಾಗಿ ಅದು ಸಹಕಾರಿಯಾಗಬೇಕೆಂಬ ಆಶಯವನ್ನು ಹೊಂದಿದೆ. ಆದರೆ ವೈದಿಕ ಧರ್ಮದಷ್ಟು ಖಚಿತವಾದ ನಿಲುವನ್ನು ಹೊಂದಿಲ್ಲ. ವೈದಿಕ ಧರ್ಮದ ಪ್ರಕಾರ ಕಾಮವೂ ಒಂದು ಪುರುಷಾರ್ಥ. ಧರ್ಮಕ್ಕೆ ಹೊಂದಿಕೊಂಡಂತೆ ಕಾಮಕ್ಕೂ ಸಾಧನವಿದೆ. ಆದರೆ ಜೈನ ಧರ್ಮದಲ್ಲಿ ಕಾಮಕ್ಕೆ ಸಾಧನವಿಲ್ಲ. ಪಂಪ ರನ್ನರು ಪುರುಷಾರ್ಥದ ಬಗ್ಗೆ ಹೇಳಿದರೂ ಧರ್ಮಕ್ಕೆ ಪ್ರಧಾನ್ಯತೆ ನೀಡಿದ್ದಾರೆ. (ನೋಡಿ ಆದಿ.ಪು. 457, ಅಜ.ಪು -80). ವೈಧಿಕ ಧರ್ಮವನ್ನು ಅನುಕರಣೆ ಮಾಡಲು ಹೊರಟ ಜೈನ ಧರ್ಮವು ವೈದಿಕ ಧರ್ಮದ ಪುರುಷಾರ್ಥವನ್ನೂ ಅನುಕರಿಸಿ ಕಾಮ ವಿಷಯ ಬಂದಾಗ ಏನನ್ನೂ ಖಚಿತವಾಗಿ ಹೇಳಲಾಗದೆ ಡೋಲಾಯಮಾನ ಸ್ಥಿತಿಯಲ್ಲಿ ಉಳಿದಿರುವುದು ಕಂಡುಬರುತ್ತದೆ. ಬಹುಶಃ ಹಾಗಾಗಿಯೇ ಜೈನ ಯುಗದ ಕವಿಗಳು ತಮ್ಮ ಕಾವ್ಯಗಳಲ್ಲಿ ಕಾಮದ ವಿಷಯವಾಗಿ ಸ್ವಾತಂತ್ರ್ಯ ವಹಿಸಿದರೆಂದು ಕಂಡುಬರುತ್ತದೆ. ಕಾಮ ಭೋಗಗಳನ್ನು ವಿವರಿಸಿ ಕೊನೆಗೆ ವೈರಾಗ್ಯದತ್ತ ದೃಷ್ಟಿ ಹರಿಸುವ ಸಾಂಪ್ರದಾಯಿಕ ಪರಂಪರೆಯನ್ನು ಅನುಸರಿಸಿದರೂ ದ್ವಂದ್ವ ನಿಲುವನ್ನು ಹೊಂದಿರುವುದು ಕಂಡುಬರುತ್ತದೆ.

ವಡ್ಡಾರಾಧನೆಯ ಬಹುತೇಕ ಕಥೆಗಳಲ್ಲಿ 'ಅಂತವರ್ಗಶಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಿರೆ' ಎಂದು ಕಥೆ ಮುಂದುವರಿಯುತ್ತದೆ. ಇಲ್ಲಿ ಸಹಜವಾದ ವಿವರಣೆಯಿದೆ. ಯಾವುದೇ ಉತ್ಪ್ರೇಕ್ಷೆ ಅಥವಾ ಅಸಂಬದ್ಧತೆ ಕಾಣುವುದಿಲ್ಲ. ಮತ್ತು ಇದು ಸಂಪ್ರದಾಯಕ್ಕಾಗಿ ನೀಡಿರುವ ಚಿತ್ರಣವಲ್ಲ ಎಂಬುದು ಗಮನಾರ್ಹ ಅಂಶ.

ಸುಕೌಶಲ ಸ್ವಾಮಿಯ ತಂದೆಯಾದ ಸಿದ್ಧಾರ್ಥನು ಸಂಸಾರದಲ್ಲಿ ಜುಗುಪ್ಸೆ ಹೊಂದಿ ಮಗನಿಗೆ ಪಟ್ಟಕಟ್ಟಿ ಕರ್ಮವನ್ನು ಕುಗ್ಗಿಸುವುದಕ್ಕೋಸ್ಕರ ತಪಸ್ಸನ್ನು ಕೈಗೊಳ್ಳುತ್ತಾನೆ. ತಂದೆಯ ತಪಸ್ಸಿನ ಕಾರಣವನ್ನು ಅರಿತ ಸುಕೌಶಲ ಸ್ವಾಮಿಯು ತಾನೂ

ತಂದೆಯಂತೆಯೇ ತಪವನ್ನು ಕೈಗೊಳ್ಳುವೆನೆಂದು ನಿರ್ಧರಿಸಿದಾಗ ಅವನ ಸ್ವಜನರು, ಸೇವಕರು, ಬಂಧುಗಳು ಎಲ್ಲರೂ ಒಟ್ಟಿಗೆ ಸೇರಿ 'ನೀನಿನ್ನೂ ಮಗುವಾಗಿರುವೆ. ಕಾಮ ಸುಖಗಳನ್ನು ಅನುಭವಿಸುವ ದಿವಸಗಳು, ತಪಸ್ಸನ್ನಾಚರಿಸುವ ದಿನಗಳಲ್ಲ, ಪ್ರಾಯ ಹೋದ ನಂತರ ನಿನ್ನ ತಂದೆ ಹೇಗೆ ನಿನಗೆ ಸೆಟ್ಟ ಪಟ್ಟವನ್ನು ಕಟ್ಟಿ ಎಲ್ಲಾ ಭಾರವನ್ನೂ ವಹಿಸಿ ಕೊಟ್ಟು ತಪಸ್ಸಿಗೆ ತೆರಳಿದನೋ ಹಾಗೆಯೇ ನೀನೂ ನಿನಗೆ ಮಗನಾದಾಗ ಅವನಿಗೆ ಸೆಟ್ಟ ಪಟ್ಟವನ್ನು ಕಟ್ಟಿ ಎಲ್ಲಾ ಭಾರವನ್ನು ಸೂಚಿಸಿ ತಪಸ್ಸನ್ನು ಆಚರಿಸಬಹುದು (ಪದ್ಯ –98) ಎನ್ನುತ್ತಾನೆ.

ವೃಷಭ ಸೇನನಿಗೆ ರಾಜ್ಯ ಪಟ್ಟವನ್ನು ಕಟ್ಟಲು ಅವನ ತಂದೆ ಯೋಚಿಸಿದಾಗ ವೃಷಭ ಸೇನನು ನನಗೆ ರಾಜ್ಯಪಟ್ಟ ಬೇಡ ಮೋಕ್ಷ ಪಟ್ಟವನ್ನು ಕಟ್ಟಿರಿ ಎಂದಾಗ ರಾಜನಾದ ತಂದೆಯು 'ಮಗನೆ, ನೀನಿನ್ನೂ ಮಗುವಾಗಿರುವೆ, ನವಯೌವನನಾಗುವವರೆಗೂ ಬೆಳೆದು ರಾಜ್ಯಭಾರ ಮಾಡಿ, ಇಷ್ಟ ವಿಷಯದ ಕಾಮ ಸುಖಗಳನ್ನು ಅನುಭವಿಸಿದ ನಂತರ ಮತ್ತಿನ ಕಾಲದಲ್ಲಿ ತಪಸ್ಸು ಮಾಡಬಹುದು (ಪದ್ಯ – 226) ಎನ್ನುತ್ತಾನೆ.

ಇಲ್ಲಿ ವೈರಾಗ್ಯ ಪರರಾದ ವೃದ್ಧ ರಾಜರುಗಳು ಸನ್ಯಾಸಕ್ಕೆ ಹೊರಡುವಾಗ ರಾಜ ಪಟ್ಟವನ್ನು ತಮ್ಮ ಮಕ್ಕಳಿಗೆ ಕಟ್ಟಲು ಮುಂದಾಗುತ್ತಾರೆ. ಆಗ ರಾಜ್ಯ ಪಟ್ಟವನ್ನು ಒಲ್ಲದೆ, ಹೇಗಿದ್ದರೂ ತಾವೂ ಒಂದು ದಿನ ಸನ್ಯಾಸ ಸ್ವೀಕರಿಸಿಯೇ ಆಗಬೇಕು. ಆದ್ದರಿಂದ ಈಗಲೇ ಸನ್ಯಾಸ ಸ್ವೀಕರಿಸುತ್ತೇವೆ. ರಾಜ್ಯಭಾರ ಬೇಡ ಎಂದು ಆ ರಾಜ ಕುಮಾರರು ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾರೆ. ನವ ಯುವಕರಾದ ರಾಜಕುಮಾರರು ಆವೇಶದಿಂದ ಕೈಗೊಂಡ ನಿರ್ಧಾರವನ್ನು ಬದಲಾಯಿಸಲು ತಂದೆ, ಬಂಧುಗಳು, ಸ್ವಜನರು, ಸೇವಕರು ಮಾಡುವ ವಿನಂತಿಯು ಕಾರಣ ಅವರ ಅನುಭವದ ಹಿನ್ನೆಲೆಯಲ್ಲಿ ಮಾಡಿದುದಾಗಿದೆ. ಕಾಮ ಸುಖದ ಅನುಭವವನ್ನು ಕಂಡ ಅವರು ರಾಜ ಕುಮಾರನಿಗೆ ಕಾಮ ಸುಖಗಳನ್ನು ಅನುಭವಿಸುವ ದಿವಸಗಳಿವು ಎನ್ನುವುದು ಗಮನಾರ್ಹ. ಜೀವ ಕಾಮದ ಸಂಬಂಧ ಸೃಷ್ಟಿಯಷ್ಟೇ ಅನಾದಿಯಾದುದು. ಆದ್ದರಿಂದಲೇ ಅವರೆಲ್ಲರೂ ಸಹಜವಾದ ಕಾಮ ಸುಖವನ್ನು ಅನುಭವಿಸಿ ಪ್ರಾಯ ಹೋದ ದಿನಗಳಲ್ಲಿ ತಪಸ್ಸನ್ನು ಆಚರಿಸುವಂತೆ ಸೂಚಿಸುವುದು.

ತನಯಂ ಪರಿಣಯನಪ್ರಾ
ಪ್ತನಾದೊಡಾತಂಗೆ ಮದುವೆಯಂ ಮಾಳ್ಪುದೆ ದಲ್
ಜನಕಂಗೆ ಕೃತ್ಯವಾನದ
ನನುಷ್ಠಿಪೆಂ ತಿಳಿವೆನದರಿನಾತನ ಬಗೆಯಂ

(ಮಲ್ಲಿ. ಪು –291)

ಎಂದು ಮಲ್ಲಿನಾಥನ ತಂದೆ ತನ್ನ ಕರ್ತವ್ಯದ ಪಾಲನೆಗೆ ಮುಂದಾಗುತ್ತಾನೆ. ಇಲ್ಲಿ ಮಕ್ಕಳು ಪ್ರಾಪ್ತ ವಯಸ್ಕರಾದಾಗ ಅವರಿಗೆ ಮದುವೆ ಮಾಡುವುದು ತಂದೆಯ ಕರ್ತವ್ಯ ಎನ್ನುವ ಭಾವನೆ ಮುಖ್ಯವಾದುದು.

ಆದಿ ಪುರಾಣದಲ್ಲಿ ನಾಭರಾಜನು ತನ್ನ ಮಗನಾದ ವೃಷಭ ದೇವನಿಗೆ 'ನೀನು ಮದುವೆಯಾಗು, ನನ್ನಂತೆಯೇ ನೀನು ಗೃಹಸ್ಥ ಧರ್ಮವನ್ನು ಪರಿಗ್ರಹಿಸಿದರೆ ಜಗತ್ತಿಗೂ ಸಂತತಿಯು ನಿಲ್ಲುವುದು, ನಿನಗೂ ಧರ್ಮ ಸಂತತಿಯು ನಿಲ್ಲುವುದು (ಆದಿ.ಪು –354) ಎನ್ನುತ್ತಾನೆ. ಒಟ್ಟಿನಲ್ಲಿ ಮದುವೆ ಎಂಬುದು ಮನುಷ್ಯನು ತನ್ನ ಜೀವನದಲ್ಲಿ ಪಾಲಿಸಬೇಕಾದ ಒಂದು ಕರ್ಮ. ಸಂತತಿಯನ್ನು ಮುಂದುವರೆಸಲು ಇದು ಅವಶ್ಯಕವೆನಿಸಿದೆ. ಅಲ್ಲದೆ ಅದು ಮುಂದೆ ಅವರಲ್ಲಿ ವೈರಾಗ್ಯ, ತಪಸ್ಸಿಗೆ ಮನಸ್ಸನ್ನು ಹದಗೊಳಿಸುವ ಸಾಧನವೂ ಹೌದು.

ಜೈನ ಪುರಾಣಗಳಲ್ಲಿ ರಾಜ ಮಂತ್ರಿ ಮನ್ನೆಯರ ಜೀವನ ಚಿತ್ರಣವೇ ಅಧಿಕವಾಗಿರುವುದರಿಂದ ಸಾಮಾನ್ಯರ ಜೀವನ ಗೌಣ. ಮದುವೆಗೆ ಸಂಬಂಧಿಸಿದಂತೆ ಸಿಗುವ ಚಿತ್ರಣಗಳೂ ರಾಜರದೇ ಆಗಿವೆ. ಬಹುತೇಕ ರಾಜರುಗಳು ಬಹು ಪತ್ನಿತ್ವದ ಕುಟುಂಬ ರಚನೆಯನ್ನು ಹೊಂದಿರುವುದು ಕಂಡು ಬರುತ್ತದೆ. 'ಚಂದ್ರವೇಗನು ಸನತ್ಕುಮಾರನಿಗೆ ತನ್ನ ನೂರು ಮಂದಿ ಕನ್ಯೆಯರನ್ನು ಪಾಣಿಗ್ರಹಣ ಪೂರ್ವಕವಾಗಿ ಕೊಟ್ಟನು. ಅಂತು ಆ ನೂರು ಮಂದಿ ಕನ್ಯೆಯರೂ ಹಿಂದಿನ ಬೇರೆ ವಿದ್ಯಾಧರ ಯುವತಿಯರು ಎಲ್ಲರನ್ನೂ ಕೂಡಿಕೊಂಡು ಸನತ್ಕುಮಾರನು ವಿದ್ಯಾಧರನ ಸಾಲಿನಲ್ಲಿದ್ದು ಸುಖವನ್ನು ಅನುಭವಿಸುತ್ತಿದ್ದನು (ವಡ್ಡಾ –129). ಅಜಿತನಾಥನಿಗೆ ಆತನ ತಂದೆ 'ನಿರತಿಶಯ ರೂಪಲಾವಣ್ಯ ಸೌಭಾಗ್ಯ ಹಾವಭಾವ ವಿಲಾಸ ವಿಭ್ರಮ ಸೌಂದರ್ಯ ಸಂಪನ್ನೆಯರುಮಪ್ಪ ಸಾಸಿರ್ವರ್ ಕನ್ನೆಯರುಮಂ ಚೆನ್ನೆಯರುಮಂ ತಂದು ಮಹೋತ್ಸಾಹದಿಂ ಶುಭದಿನ ಪ್ರಶಸ್ತವಾರ ಮಂಗಳ ಕಲ್ಯಾಣ ಮುಹೂರ್ತದೊಳ್ ಪಾಣಿಗ್ರಹಣಂಗೆಯ್ಸಿ ವಿವಾಹ ಕಲ್ಯಾಣಮಂ' ಮಾಡಿದನಂತೆ. (ಅಜಿ.ಪು –149).

ಶ್ರೀಚಂದ್ರ ಮಹಾರಾಜನು ತನ್ನ ಕುಮಾರ ಸುಪ್ರತಿಷ್ಠನಿಗೆ ವಿವಾಹವನ್ನು ಮಾಡಬೇಕೆಂಬ ಉದ್ದೇಶದಿಂದ ವಸುದೇವರಿಗೆ, ಹೇಳಿ ಕಳುಹಿಸಲಾಗಿ ಹರಿವಂಶ ಶ್ರೇಷ್ಠನಾದ ಶ್ರೀಷೇಣನೇ ಮೊದಲಾಗಿ ಅನೇಕ ಭೂಪತಿಗಳು, ಸ್ತುತ್ಯರಾಗಿ ತಂತಮ್ಮ ಪುತ್ರಿಯರನ್ನು ಕರೆತರಲಾಗಿ, ಆ ಎಲ್ಲಾ ಕನ್ಯಾಮಣಿಗಳೊಂದಿಗೆ ತನ್ನ ಮಗನಿಗೆ ಅತ್ಯಧಿಕ ವೈಭವದಿಂದ ಮದುವೆ ಮಾಡುತ್ತಾನೆ. (ನೇಮಿ. ಪು. 1-69). ಬಹುಶಃ ಪತ್ನಿಯರ ಸಂಖ್ಯೆಯ ಆಧಾರದ ಮೇಲೆ ರಾಜರ ಪ್ರತಿಷ್ಠೆಯು ನಿರ್ಣಯವಾಗುತ್ತಿದ್ದಿರಬೇಕು. ಹಾಗಾಗಿ ಇಲ್ಲಿ ನೂರು ಸಾವಿರ ಸಂಖ್ಯೆಯಲ್ಲಿ ಪತ್ನಿಯರನ್ನು ಹೊಂದುವುದು ಕಂಡುಬರುತ್ತದೆ.

4.1. ವಿವಾಹ:

4.1.1. ಗಾಂಧರ್ವ ವಿವಾಹ:

ಶ್ರೇಷ್ಠವಾದ ಸ್ತ್ರೀರತ್ನವು ಭೂಮಿಯನ್ನು ಆಳತಕ್ಕವನಿಗೆ ಸೇರಬೇಕಾದುದು ಎಂಬ ಭಾವನೆಯನ್ನು ಹೊಂದಿದ್ದ ಅಂದಿನ ಸಮಾಜದಲ್ಲಿ ತಂದೆ ತಾಯಂದಿರು ಒಪ್ಪಿ ಕೊಡದ ಹೆಣ್ಣನ್ನು ಸ್ವೀಕರಿಸುವ ಪರಿಪಾಠವಿರಲಿಲ್ಲ. ‘ಕನ್ಯೆಯನ್ನು ಯಥಾವಿಧಿಯಾಗಿ ಕೊಟ್ಟರೆ ಅವಳನ್ನು ಒಯ್ಯುವುದು ಯೋಗ್ಯವೇ ಹಾಗೆ ಕೊಡದೆ ಇರುವಾಗ ಎತ್ತಿಕೊಂಡು ಹೋಗುವುದು ಅಯೋಗ್ಯ (ಶಾಂತಿ.ಪು -85) ಎನ್ನುವಲ್ಲಿ ಅಂದಿನ ಆ ಸಮಾಜದಲ್ಲಿ ಅನುಸರಿಸಲಾದ ಒಂದು ಪದ್ಧತಿ ಆಗಿದ್ದಿತು. ಜನರು ಅದನ್ನು ಪಾಲಿಸುತ್ತಿದ್ದರು ಎಂದೂ ಕಂಡುಬರುತ್ತದೆ. ಆ ಪದ್ಧತಿಗೆ ವಿರೋಧವಾಗಿ ಕನ್ಯೆಯನ್ನು ಪಡೆಯುವುದು ಅಕ್ರಮವಾದುದು ಎಂಬ ಭಾವನೆಯೂ ಇಲ್ಲಿ ವ್ಯಕ್ತವಾಗಿದೆ. ಸನತ್ಕುಮಾರನ ರೂಪವನ್ನು ಕಂಡು ಮಾರುಹೋದ ಸಂಧ್ಯಾವಳಿಯು ಅವನನ್ನು ವರಿಸಲು ನಿರ್ಧರಿಸಿ ಸುನಂದೆಯ ಮೂಲಕ ಅವನನ್ನು ವಿಚಾರಿಸಿದಾಗ ‘ತಂದೆ ತಾಯಿಗಳು ಕೊಡದೆ ಇರತಕ್ಕ ಹೆಣ್ಣುಗಳನ್ನು ಸ್ವೀಕರಿಸುವುದು ನನಗೆ ಯೋಗ್ಯವಲ್ಲ’ ಎನ್ನುತ್ತಾನೆ. ಆಗ ಸುನಂದೆಯು ಸನತ್ಕುಮಾರನಿಗೆ ‘ಮಿತ್ರ ಸಂಬಂಧವುಳ್ಳ ಜನರು ಮುಂದೆ ಇದ್ದು ಕೊಂಡು ಹೆಣ್ಣನ್ನು ಕೊಟ್ಟರೆ ಸ್ವೀಕರಿಸಲು ಯೋಗ್ಯವಾಗುತ್ತದೆ. (ವಡ್ಡಾ -125) ಎಂದು ಅವನನ್ನು ಒಪ್ಪಿಸುತ್ತಾಳೆ. ಮತ್ತು ಗಾಂಧರ್ವ ವಿವಾಹ ಕ್ರಮದಿಂದ ಅವರನ್ನು ಕೂಡಿಸುತ್ತಾಳೆ. ಒಟ್ಟನಲ್ಲಿ ಅಂದಿನ ಸಾಮಾಜಿಕ ವ್ಯವಸ್ಥೆಯು ಒಪ್ಪುವ ವಿಧಿಯನ್ನು ಅನುಸರಿಸಿ ವಿವಾಹವನ್ನು ಕೈಗೊಳ್ಳುತ್ತಿದ್ದ ಅಂಶ ಸ್ಪಷ್ಟವಾಗುತ್ತದೆ. ಗಾಂಧರ್ವ ವಿವಾಹ

ಪದ್ಧತಿಯು ಅನುಷ್ಠಾನದಲ್ಲಿದ್ದುದಕ್ಕೆ ಅಲ್ಲಲ್ಲಿ ಉಲ್ಲೇಖಗಳು ದೊರಕುತ್ತದೆ. ಉದಾಹರಣೆಗೆ ಪಾಂಡು ಕುಂತಿಯನ್ನು ಗಾಂಧರ್ವ ವಿವಾಹ ಪದ್ಧತಿಯಂತೆ ಕೈಹಿಡಿಯುವುದನ್ನು ಗಮನಿಸಬಹುದು (ನೇಮಿ ಪು.1–111).

4.1.2. ವಿವಾಹ – ಉಡುಗೊರೆ :

ಮದುವೆ ಎಂಬುದು ಒಂದು ಸಾಮಾಜಿಕ ವ್ಯವಸ್ಥೆ ಎಂಬುದರೊಂದಿಗೆ ಮದುವೆ ಎರಡು ಮನೆತನಗಳ ಬಾಂಧವ್ಯ ಸಂಬಂಧಗಳನ್ನು ಮೃದುಗೊಳಿಸುತ್ತದೆ ಎಂಬ ಭಾವನೆಯನ್ನು ಅವರು ಹೊಂದಿದ್ದರು. ಈ ಸಂಬಂಧವು 'ರೇಷ್ಮೆಯ ಎರಡೆಳೆಗಳನ್ನು ಗಂಟಿಕ್ಕಿ ಕೂಡಿಸುವಂತೆ. ಆಗಬೇಕೆಂಬ ಅವರ ಆಶಯದಲ್ಲಿನ ಧ್ವನಿ ವಿಶೇಷವಾದುದು. ಮದುವೆಯ ಮುಹೂರ್ತವನ್ನು ನಡೆಸಲು ಪ್ರಶಸ್ತವಾದ ಕಾಲ ಯಾವುದೆಂಬುದನ್ನು ಜೋಯಿಸರು ನಿರ್ಧರಿಸಿ ಹೇಳುತ್ತಿದ್ದ ವಿಷಯದ ಬಗ್ಗೆ ಅಲ್ಲಲ್ಲಿ ವಿವರಗಳು ಸಿಗುತ್ತವೆ. (ನೋಡಿ. ಶಾಂತಿ.ಪು –145).

ಮಹಾಪ್ರತಾಪಶಾಲಿಯೂ ಸಕಲ ಭೂಪನಮಸ್ಕೃತನೂ ಆದ ನಾಗದತ್ತನು, ಕಾಮನಂತೆ ರೂಪವುಳ್ಳ, ಶೌರ್ಯನಿಧಿಯಾದ ಹಾಗೂ ಇಷ್ಟ ಕುಲಾಧಿಪನಾದ ಇಭಕೇತುವಿಗ ತನ್ನ ಮಗಳನ್ನು ಧಾರೆಯೆರೆದು ಕೊಡುತ್ತಾನೆ. ಹಾಗೆ ಕೊಟ್ಟು ಕೊರತೆಯುಂಟಾಗದಂತೆ ಅತ್ಯುತ್ತಮವಾದ ವಸ್ತುಗಳನ್ನು ವಾಹನಗಳನ್ನೂ ಬಳುವಳಿಯಾಗಿ ನೀಡುತ್ತಾನೆ. (ನೇಮಿ.ಪು.1–25) ದ್ರುಪದರಾಜನು ದ್ರೌಪದಿಗೂ ಅರ್ಜುನನಿಗೂ ಮಹಾ ವಿಜೃಂಭಣೆಯಿಂದ ಮದುವೆ ಮಾಡಿ ಅಸಂಖ್ಯವಾದ ಮದದಾನೆಗಳನ್ನೂ, ಕಾಂಭೋಜ ದೇಶದ ಅನೇಕ ಕುದುರೆಗಳನ್ನೂ, ಹಲವಾರು ನವೀನವಾದ ರತ್ನಾಭರಣಗಳನ್ನೂ ಬಳುವಳಿಯಾಗಿ ಕೊಟ್ಟು ಕಳಿಸುತ್ತಾನೆ (ನೇಮಿ.ಪು –2 –108) ಇಲ್ಲಿ ವೈಭವಯುತವಾಗಿ ನಡೆಯುತ್ತಿದ್ದ ರಾಜರ ವಿವಾಹದ ಚಿತ್ರಣವಿದೆ. ಜೊತೆಯಲ್ಲಿ ಅಳಿಯನಿಗೆ ಧಾರಾಳವಾಗಿ ನೀಡುವ ಬಳುವಳಿಯ ಉಲ್ಲೇಖವಿದೆ. ರಾಜ ಬೊಕ್ಕಸದಿಂದ ಖರ್ಚನ್ನು ಭರಿಸಿ ನಡೆಸುತ್ತಿದ್ದ ವೈಭವಯುತ ಮದುವೆಯೊಂದಿಗೆ ಬಳುವಳಿಯನ್ನು ನೀಡುವಲ್ಲಿ ರಾಜರ ಧಾರಾಳತನವನ್ನು ಕಾಣಬಹುದು. ಅರಮನೆಯಲ್ಲಿ ಬಿತ್ತಿದ ಈ ಪದ್ಧತಿ ಮುಂದೆ ಸಾಮಾಜಿಕ ಸ್ತರದಲ್ಲಿ ಒಂದು ಶಾಪವಾಗಿ ಪರಿಣಮಿಸಿ, ಅದರ ಪರಿಣಾಮವು ಸಾಮಾನ್ಯರನ್ನು ತಟ್ಟಿದುದು ಬಹುಶಃ ಅರಮನೆಯಲ್ಲಿರುವವರನ್ನು ತಲುಪದೇ ಹೋಗಿರಬಹುದು.

4.2. ಹಳಗನ್ನಡ ಜೈನ ಕಾವ್ಯಗಳಲ್ಲಿ ಕಾಮ-ವಿರಹ:

ಶಾಂತರಸವೇ ಪ್ರಧಾನವಾಗಿರುವ ಹಳಗನ್ನಡ ಜೈನ ಪುರಾಣಗಳಲ್ಲಿ ಶೃಂಗಾರ ವರ್ಣನೆಗಳೂ ಅಲ್ಲಲ್ಲಿ ಕಂಡುಬರುತ್ತದೆ. ಕೆಲವೆಡೆಗಳಲ್ಲಿ ಕವಿಗಳ ರಚನೆಗಳು ಯಾವುದೇ ಸ್ವಾರಸ್ಯದಿಂದ ಕೂಡಿರದೆ ಬರಿಯ ಕವಿಸಮಯ ನಿಷ್ಠವಾಗಿವೆ.

ವಸುದೇವನು ದೇವ ಕುಮಾರನಂತೆ ವಸ್ತ್ರ ವಿಭೂಷಣ ವಿಲೇಪನಗಳಿಂದ ಬಗೆ ಬಗೆಯಾಗಿ ಅಲಂಕರಿಸಿಕೊಂಡು ಆ ಪುರದಲ್ಲಿ ಸಂಚಾರ ಮಾಡುತ್ತಿರಲು, ಆತನ ಅಧಿಕ ಮನೋಹರವಾದ ರೂಪಿಗೆ ಮನಸೋತು ಆ ಪಟ್ಟಣದ ಸ್ತ್ರೀಯರೆಲ್ಲರೂ ತೀವ್ರವಾದ ಕಾಮಾವಸ್ಥೆಗೆ ಒಳಗಾದರು. ಮನೆಕೆಲಸಗಳನ್ನು ಬಿಟ್ಟರು. ಕಾಮಜ್ವರದ ತಾಪದಲ್ಲಿ ಕುದಿದು ತಳಮಳಿಸಿದರು. ಅಷ್ಟೇ ಅಲ್ಲದೆ, ಕಮಲಮುಖಿಯರು ವಸುದೇವನ ಧ್ಯಾನದಲ್ಲಿಯೇ ಮುಳುಗಿ ಮೌನರಾಗಿ ಏಕಾಂತ ಸಾಧನವನ್ನು ಸೇರಿ, ಊಟದ ಹಂಗು ತೊರೆದು, ಯೋಗಿಗಳ ಹಾಗೆ ಆದರು. ಈ ರೀತಿಯಿಂದ ಆ ಊರಿನ ಸ್ತ್ರೀಯರು ಕಾಮನೆಂಬ ಉಗ್ರ ಗ್ರಹದ ಬಾಧೆಗೆ ಒಳಪಟ್ಟಿರಲು, ನಗರದ ಜನರು ತಮ್ಮ ತಮ್ಮ ಮನೆಗಳಲ್ಲಿ ಆದ ಮನೆವಾರ್ತೆಯ ಕೇಡನ್ನು ಕಂಡು, ಮನಸ್ಸು ಕೊಟ್ಟು ಊರಿನ ಬೀದಿ ಚಾಕಗಳಲ್ಲಿ ನೆರೆದರು. ಆ ಸಮಯದಲ್ಲಿ ಒಬ್ಬ ಬ್ರಾಹ್ಮಣ ಪ್ರಮುಖನ ಹೆಂಡತಿ ವಸುದೇವನ ರೂಪವನ್ನು ಕಂಡು ಮದನನ ಆಗ್ರಹಕ್ಕೆ ಗುರಿಯಾಗಿ ಕುಂದಿ ಕಳವಳಿಸುತ್ತಿರಲು, ಆಕೆಯ ಪತಿ ಅದನ್ನು ನೋಡಿ ನಿಟ್ಟುಸಿರಿಟ್ಟು, ವಿಧಿಯನ್ನು ಬಯ್ದು, ಅಕ್ಕಪಕ್ಕದಲ್ಲಿರುವ ಬ್ರಾಹ್ಮಣರ ಮನೆಗಳನ್ನು ಹೊಕ್ಕು ನೋಡಿದನು. ಎಲ್ಲ ಮನೆಗಳಲ್ಲಿಯೂ ಗೃಹಿಣಿಯರು ಮನ್ಮಥ ಜ್ವರದಿಂದ ಸಂಕಟಪಡುತ್ತಿರುವುದನ್ನು ಕಂಡು 'ಬಹುಜನರೊಂದಿಗೆ ಅನುಭವಿಸುವ ದು:ಖವು ದು:ಖವಲ್ಲ' ಎಂದುಕೊಳ್ಳುತ್ತಾನೆ. (ನೇ.ಪು.ಪು. 1-144-145). ಈ ಹಗರಣ ಇಲ್ಲಿಗೇ ಮುಗಿಯುವುದಿಲ್ಲ. ರಾಜನಲ್ಲಿಗೆ ಈ ಬಗ್ಗೆ ದೂರನ್ನು ಹೊತ್ತುಕೊಂಡು ಊರಿನ ಹಿರಿಯರು ತೆರಳುತ್ತಾರೆ.

ಈ ಚಿತ್ರಣದಲ್ಲಿ ವಾಸ್ತವತೆ ಎಷ್ಟೇ ಇರಲಿ, ವಸುದೇವ ಅಷ್ಟು ಸುಂದರನೆಂದ ಮೇಲೆ ಕಾಮನ ಬಾಧೆಯು ಆ ಊರಿನ ಹೆಣ್ಣುಗಳಿಗೆ ತಟ್ಟುವುದು ಖಂಡಿತ. ಅದನ್ನೇ ವಡ್ಡಾರಾಧನೆಯಲ್ಲಿ 'ಮಹಾತ್ಮನಾದ ಮನ್ಮಥನ ಬಿಲ್ಲ ವಿದ್ಯೆಯ ನೈಪುಣ್ಯ ಆಶ್ಚರ್ಯಕರ ಅವನು ದೇಹಗಳನ್ನು ಮುಟ್ಟದೇ ಇದ್ದರೂ ಒಳಗಿರತಕ್ಕ, ಮನಸ್ಸನ್ನು ತುಂಡರಿಸುತ್ತಾನೆ.' (ವಡ್ಡಾ -118) ಎಂದು ಹೇಳಲಾಗಿದೆ. ವಸುದೇವನ ಶರೀರ ಸಂಪತ್ತಿನಿಂದ ಮೋಹಿತರಾದ ಸ್ತ್ರೀಯರ ಮನಸ್ಥಿತಿ

ಯನ್ನು ಕವಿ ಸುಂದರವಾಗಿ ಹಿಡಿದಿಟ್ಟಿದ್ದಾನೆ. 'ಅತಿಭಂಡನಾದ ಮನ್ಮಥನ ಕೈವಶವಾದ ಮೇಲೆ ಮತಿಭ್ರಂಶನಾಗದಿದ್ದೀತೆ' (ನೇ.ಪು.ಪು.2 -346) ಎಂಬಲ್ಲಿ ಕಾಮಾತುರಳಾದ ಹೆಣ್ಣಿನ ಸ್ಥಿತಿಯನ್ನು ಗಮನಿಸಬಹುದು. ಸ್ತ್ರೀ ಸೌಂದರ್ಯಕ್ಕೆ ಮರುಳಾಗಿ ಮರುಗುವ ಪುರುಷರ ಚಿತ್ರಣಕ್ಕಿಂತ ಭಿನ್ನವಾಗಿ ಇಲ್ಲಿ ಕವಿಗಳು ಸ್ತ್ರೀಯರ ಸ್ಥಿತಿಯನ್ನು ಚಿತ್ರಿಸಿರುವುದು ಗಮನಾರ್ಹ.

ಪುರುಷ ಸೌಂದರ್ಯವೆಂದರೆ ಹೊರನೋಟದ ಬರಿಯ ಶರೀರದ ಸೌಂದರ್ಯ ಮಾತ್ರವಲ್ಲ. ಅವನ ತೇಜಸ್ಸು, ಸಂಪತ್ತು, ದಾನಶೂರತೆ, ಪರಾಕ್ರಮ, ರಾಜ್ಯವಿಸ್ತಾರ ಮೊದಲಾದ ಅಂಶಗಳೂ ಸೇರಿಕೊಳ್ಳುತ್ತವೆ. ಪಂಪನು ಬಾಹುಬಲಿಯನ್ನು ವರ್ಣಿಸುತ್ತಾ 'ಆದಿಬ್ರಹ್ಮನು ದಿವ್ಯವಾದ ಮರಕತ ಪರ್ವತವನ್ನು ಉತ್ತಮವಾದ ಮಾನವಾಕೃತಿಯಿಂದ ನಿರ್ಮಿಸಿದನೋ ಎಂಬಂತೆ ಪಚ್ಚೆ ರತ್ನದಂತೆ ಬಣ್ಣವುಳ್ಳವನಾಗಿಯೂ ಕ್ಷಾತ್ರ ತೇಜವೇ ರಾಜನ ರೂಪದಿಂದ ಧರೆಗಿಳಿದಂತೆಯೂ ಇರುವ ರಾಜಕುಮಾರ' (ಆದಿ.ಪು -613)ಎನ್ನುತ್ತಾನೆ. ಕ್ಷಾತ್ರ ತೇಜದಿಂದ ಉಜ್ವಲಿಸುವ ವೀರದಂತೆಯೇ ಪುರುಷ ರೂಪದ ಸಮ್ಮೋಹಕ ಸೌಂದರ್ಯವನ್ನೂ ಕವಿಗಳು ಚಿತ್ರಿಸಿದ್ದಾರೆ.

ದಿಗ್ವಿಜಯಾರ್ಥವಾಗಿ ಭರತ ಚಕ್ರವರ್ತಿಯು ಸೇನೆಯೊಂದಿಗೆ ಹೊರಟಾಗ ಅವನನ್ನು ಕಂಡು ನಗರದ ಸ್ತ್ರೀಯರಲ್ಲಿ ಉಂಟಾಗುವ ಕಾಮವಿಕಾರದ ಚಿತ್ರಣವನ್ನು ಪಂಪನು ಈ ಪದ್ಯಗಳಲ್ಲಿ ಸುಂದರವಾಗಿ ಹಿಡಿದಿಟ್ಟಿದ್ದಾನೆ.

ನೊಸಲಂ ತುಂಗಲುಂಗುರುಳ್ ಮೇಲುದನೊಗೆವ ಕುಚಂ ಬೆನ್ನನಾನೀಳಕೇಶ
ಪ್ರಸರಂ ಬೆಳ್ಪಂ ಪೊದಳ್ದೊಳ್ಳಿಳಿಯನೆಡದ ತೋಳ್ ಸೋಗೆಯಂ ನೂಲತೊಂಗಲ್
ದನೆಯಂ ಕಣ್ ಕೆನ್ನೆಯಂ ಭ್ರೂಲತಿಕೆಗಳುರಮಂ ಸಂಚಳತ್ತಾರ ಹಾರಂ
ಪಸರಂಬೆತ್ತತ್ತ ಪೋರಂತಲೆಯೆ ಭರತನಂ ನೋಡಲೆಯ್ತಂದಳೊರ್ವಳ್
(ಆದಿ.ಪು -474)

ವಿಶದೋಜ್ಜೃಂಭಿತ ಯೌವನಾಸವಮದಪ್ರೋಲ್ಲಾಸದಿಂ ಚಿತ್ತಭೂ
ವಶೆಯೊರ್ವಳ್ ಮನುವಂಶಚಂದ್ರ ಮುಖಚಂದ್ರಾಲೋಕದಿಂ ಚಂದ್ರಕಾಂ
ತಶಿಲಾಪುತ್ರಿಕೆಯಂತೊಸರ್ತು ಕೊಳಗೊಂಡಾನೀರೊಳದಿರ್ದ ಚಿ
ತ್ತಶಯಾಕ್ರೀಡ ಸರೋವತೀರ್ಣ ರತಿಯೊಂದಾಕಾರಮಂ ತಾಳಿದಳ್
(ಆದಿ.ಪು -475)

ವಿವಿಧಾತೋದ್ಯಲಯಾನುಬಂಧಿವಿಳಸಲ್ಲಾಸ್ಯಂ ತಗುಳ್ದಲ್ಲಿ ನಾ
ಟ್ಯವಿದರ್ ತಾಂ ಗೆಯ್ಯುವೋಲ್ ನೃತ್ಯಗೃಹಮಂ ಚಕ್ರೇಶ್ವರೋದ್ದಾಮರೂ
ಪವಿಳೋಕಾಮೃತತೃಪ್ತಲೋಚನ ಮನಸ್ಸಂಕಲ್ಪ ಸಂಭೋಗಸಂ
ಭವಘರ್ಮಾಂಬುಗಳಿಂದ ವಿಮರ್ಡಿಸಿದಳ್ ನೃತ್ಯಶ್ರಮಸ್ವೇದಮಂ

(ಆದಿ.ಪು –476)

ಇಲ್ಲಿ ಕಾಮಿನಿಯರು ಅವರ ಕಾಮೋದ್ವೇಗವನ್ನು ಇಳಿಸಿಕೊಳ್ಳಲು ಕಂಡುಕೊಂಡ ಪರಿಹಾರ ಗಮನಾರ್ಹವಾದುದು. ದಿಗ್ವಿಜಯದ ಹಾದಿಯಲ್ಲಿರುವ ಚಕ್ರವರ್ತಿಯಿಂದ ತಮ್ಮ ಅಭಿಲಾಷೆ ನೆರವೇರುವುದು ಅಸಾಧ್ಯವೆಂದು ತಿಳಿದ ಅವರು ಮನಸ್ಸಿನಲ್ಲಿಯೇ ಚಕ್ರವರ್ತಿಯ ರಮ್ಯವಾದ ರೂಪವನ್ನು ಊಹಿಸಿ ಸಂಕಲ್ಪ ಸಂಭೋಗದಿಂದ ಸುಖವನ್ನು ಹೊಂದುವರು. ಆದಿ ಪುರಾಣದಲ್ಲಿ ‘ಮನಸ್ಸಿನಲ್ಲಿಯೇ ಸ್ತ್ರೀಯರ ಸಮಾಗಮ ಸುಖವನ್ನು ಕಲ್ಪಿಸಿಕೊಂಡು ಅನುಭವಿಸಿದ’ (ಆದಿ.ಪು –175) ಬಗ್ಗೆಯೂ ಉಲ್ಲೇಖವಿದೆ. ಒಟ್ಟಿನಲ್ಲಿ ಗಂಡು ಹೆಣ್ಣುಗಳ ಪರಸ್ಪರ ಆಕರ್ಷಣೆ ಪ್ರಕೃತಿಯ ಮೂಲ ರಹಸ್ಯಗಳಲ್ಲಿ ಒಂದು. ಸೃಷ್ಟಿಯ ಅಸ್ತಿತ್ವಕ್ಕೆ ಆಧಾರವಾದ ಈ ಆಕರ್ಷಣೆ ಯಾರಲ್ಲೂ ಉಂಟಾಗಬಹುದು. ಕವಿ ತಾನು ಕಂಡ ವಿವಿಧ ಮುಖಗಳನ್ನು ಇಲ್ಲಿ ಚಿತ್ರಿಸಿರುವುದು ಗಮನಾರ್ಹ.

ಪಂಪನು ಶ್ರೀಮತಿ ವಜ್ರಜಂಘರ ಸಮಾಗಮ ಮತ್ತು ಅವರು ಹೊಂದಿದ ಸ್ಪರ್ಶ ಸುಖವನ್ನು ರಮಣೀಯವಾಗಿ ಚಿತ್ರಿಸಿದ್ದಾನೆ. ‘ವಜ್ರಜಂಘನು ಶ್ರೀಮತಿಯ ಕೋಮಲವಾದ ಕರತಲದ ಸ್ಪರ್ಶ ಸುಖದಿಂದ ಅರಳಿದ ಕಣ್ಣುಳ್ಳವನದಾನು. ನಲ್ಲನ ಕರತಳವು ನಲ್ಲೆಯ ಕರತಳವನ್ನು ಸೋಂಕಿತು. ಆಗ ಲಜ್ಜಾಧಿಕ್ಯವೊದಗಿ ಬೆವರು ಹನಿಗಳುಂಟಾಗಿ ತಲೆ ತಗ್ಗಿಸಿದಳು. ಬೆಚ್ಚಗೆ ದ್ರವಿಸುವ ಚಂದ್ರ ಸದೃಶನಾದ ಕಾಂತನ ಕೈಗಳು ಶ್ರೀಮತಿಯ ಕೈಗಳನ್ನದುಮಲು, ಆ ಸ್ಪರ್ಶದಿಂದ ಬೆವರಿದ ಶ್ರೀಮತಿಯು ಚಂದ್ರಕಾಂತ ಕರಸ್ಪರ್ಶದಿಂದೊಸರುವ ಚಂದ್ರಕಾಂತ ಮಣಿಯ ಬೊಂಬೆಯಂತೆ ತೋರಿದಳು. ಆ ಸಮಯದಲ್ಲಿ ಅವಳು ತನ್ನ ಮೇಲೆ ಬಿದ್ದ ಕಟಾಕ್ಷಗಳನ್ನು ಬದಿಗೆ ಸರಿಸಿದಳು. ಮೇಲೇರಿ ಬರುತ್ತಿದ್ದ ನಿಶ್ವಾಸಗಳನ್ನು ಅದುಮಿಕೊಂಡಳು. ಬಾಣ ಬಲೆಗಳ ನಡುವೆ ಸಿಕ್ಕಿಕೊಂಡ ಹೆಣ್ಣು ಜಿಂಕೆಯಂತೆ ಅವಳು ವ್ಯಾಕುಲತೆಗೀಡಾದಳು. ಆಗ ವಜ್ರಜಂಘನೂ ರೋಮಾಂಚಗಳಿಂದುಂಟಾದ ಬೆವರಿನ ಪ್ರವಾಹದೊತ್ತಡಕ್ಕೆ ಒಳಗಾದನು. ಆಗ ನಿಶ್ಚಲವಾದ ಧೈರ್ಯದ ವ್ಯಾಜದಿಂದ ಅಡ್ಡಲಾಗಿ ತಿರುಗಿ ತರಳಿತವಾದ ಅವನ ದೃಷ್ಟಿಯು ರಾಜಪುತ್ರಿಯ

ಮುಗುಳ್ನಗೆಯೆಂಬ ಮಧು ಮತ್ತು ಕಡೆಗಣೆಂಬ ಜಯಶಾಲಿ ಕಾಮಾಸ್ತ್ರಗಳ ಹೊಡೆತವನ್ನು ಸ್ಪಷ್ಟವಾಗಿ ಹೇಳಿತು. ನೂತನ ಪ್ರೇಮಬಂದ ದೃಷ್ಟಿಯು ಹಿಗ್ಗುವೆಡೆಯಲ್ಲಿ ಅದನ್ನು ಯಾರು ಕಾಯ್ದುಕೊಂಡಾರು. ವಜ್ರಜಂಘನು ನೂತನ ಸಮಾಗಮದಿಂದಾದ ಭಯದಿಂದ ರಮಣೀಯವಾದ ಮುಗ್ಧ ವಧುವಿನ ಮುಖ ದರ್ಶನದ ಸುಖವನ್ನು ಅನುಭವಿಸಿದ. ನನ್ನ ನಿನ್ನ ಹಿರಿದಾದೀ ಸಮಾಗಮವು ನಮ್ಮಿಬ್ಬರ ಪೂರ್ವ ಜನ್ಮದ ಪ್ರೇಮದ ಫಲವಾಗಿಯೇ ಸಂಘಟಿತವಾದುದು ಎಂದು ಅವರಿಬ್ಬರೂ ಅಧಿಕವಾದ ಪ್ರೇಮವನ್ನೂ ಸೊಗಸನ್ನೂ ಅನ್ಯೋನ್ಯವಾಗಿ ಮರೆತು ಅನೇಕ ವಿಧ ನಿಧುವನ ಸುಖಾಮೃತದಲ್ಲಿ ಮುಳುಗಿದರು. (ಆದಿ.ಪು –193 – 194). ಇಲ್ಲಿ ಶ್ರೀಮತಿ ವಜ್ರಜಂಘರಿಗೆ ನೂತನ ಸಮಾಗಮದಲ್ಲಿ ಉಂಟಾದ ಆವೇಶದ ಚಿತ್ರಣವನ್ನು ಕವಿ ಎಳೆಎಳೆಯಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ನಾಗಚಂದ್ರನು ಮಲ್ಲಿನಾಥ ಪುರಾಣದಲ್ಲಿ ಸತಿಪತಿಯರ ಸಮಾಗಮದ ಚಿತ್ರಣವನ್ನು ಈ ಎರಡು ಪದ್ಯಗಳಲ್ಲಿ ಸುಂದರವಾಗಿ ಹಿಡಿದಿಟ್ಟಿದ್ದಾನೆ.

ಕೃತವಿದ್ಯಂ ಬಿದಿ ಸೃಷ್ಟಿಯೊಳ್ ಸಮಸಮಾಕಾರಂ ಬೆಡಂಗಾಗೆ ದಂ
ಪತಿಯುಂ ಪುಟ್ಟಿಸೆ ಪೆಂಪುವೆತ್ತನಿಪತ್ಯಾಶ್ಚರ್ಯ ಸೌಂದರ್ಯಮುಂ
ಸತಿಯುಂ ಭೂಪನುಮುಪ್ಪುಕೆಯ್ದು ದೊರೆವೆತ್ತನ್ಯೋನ್ಯ ಸಂಪ್ರೀತಿಯುಂ
ರತಿಯುಂ ಕಾಮನು ಮೆಂಬಿನಂ ಸಲಿಸಿದರ್ ನಾನಾ ವಿನೋದಂಗಳಂ

(ಮಲ್ಲಿ. ಪು –50)

ವದನಾಸ್ವಾದದೊಳಾದ ಲಂಪನ ಮೃತಂ ನೇತ್ರೋತ್ಸವಾನಂದಸಂ
ಪದಮುಂ ಚಂದ್ರಮನಿಂಪುವೆತ್ತನುಡಿಯುಂ ವಶ್ಯಾಕ್ಷರಂ ಸುಯ್ಯೊಳು
ಣ್ಮಿದ ಕಂಪಂ ಮೃಗನಾಭಿ ಸೋಂಕಿನೊದವಂ ಮಂದಾನಿಳಂ ಕೊಟ್ಟವೋ
ಲ್ವದೆದೋರೆರ್ವರೊಳೊರ್ವರಿಂದು ಪಡೆದರ್ ಪಂಚೇಂದ್ರಿಯ ಪ್ರೀತಿಯುಂ

(ಮಲ್ಲಿ.ಪು –50)

ವಿಧಿ ಆ ದಂಪತಿಗಳನ್ನು ಪರಸ್ಪರ ಅನುರೂಪರನ್ನಾಗಿ ಸೃಷ್ಟಿಸಿದ್ದನಂತೆ. ಅನ್ಯೋನ್ಯ ಸಂಪ್ರೀತಿಯುಂದಿರುವ ಆ ಪತಿ ಪತ್ನಿಯರು ಒಬ್ಬರಿಂದ ಮತ್ತೊಬ್ಬರು ಪಡೆದ ಪಂಚೇಂದ್ರಿಯ ಸುಖದ ಪರಿಯಿದು.

ಕಾವ್ಯ ವಸ್ತುವಿನ ಮೂಲ ಸಂವಿಧಾನವೇ ಪ್ರಣಯವಾಗಿರುವ ಯಶೋಧರ ಚರಿತೆಯಲ್ಲಿ ಜನ್ನನು ಯಶೋಧರ ಅಮೃತಮತಿಯರ ಸಮಾಗಮವನ್ನು ಈರೀತಿ ವರ್ಣಿಸಿದ್ದಾನೆ.

ನಡೆ ನೋಂಕಿದ ಕಡೆಗಣ್ಗಳ
ಕುಡಿವೆಳಗಿಂ ಬಿಡುವ ಬೆಮರ್ಗಳಿಂ ಪದದೊಳಮೇಂ
ತಡವಾದಗೆಯಾ ಕೌಮುದಿ ಕ
ಣ್ಣಿಗೆ ಕರಗುವ ಚಂದ್ರಕಾಂತ ಮಣಿಪುತ್ರಿಕೆವೊಲ್

(ಯಶೋ.ಚ -48)

ತನು ನೋಂ ಕಾಲಿಂಗನ ಚುಂ
ಬನದೆ ಸುರತದಿಂ ಸವಿ ರತ ಪ್ರೌಢಿಯಿನಾ
ತನುವಂ ಮಱೆಯಿಸೆ ಅಱೆ ಯದೆ
ಮನೋಜನಾಡಿಸುವ ಜಂತ್ರದಂತಿರೆ ನೆರೆದರ್

(ಯಶೋ.ಚ -48)

ಸುರತ ಸುಖಪಾರವಶ್ಯಂ
ತರೆ ನಿದ್ರಾಭರಮನಿರ್ವರುಂ ಶಿಥಿಲತನೂ
ಪರಿರಂಭಣದಚ್ಚಳಿಯದೆ
ಪರಿವೇಷ್ಟಿತ ಬಾಹುವಳಯದೊಳ್ ಕಣ್ಗೆಯ್ದರ್

(ಯಶೋ.ಚ -49)

ಸುರತ ಸುಖ ಪರವಶತೆಯನ್ನುಂಟು ಮಾಡಿದ್ದರಿಂದ ಅವರಿಬ್ಬರೂ ಪರಸ್ಪರ ತೋಳುಗಳನ್ನು ಹೆಣೆದುಕೊಂಡೇ ನಿದ್ರಾ ಮುದ್ರಿತರಾಗುತ್ತಾರೆ. ಇಲ್ಲಿ ಅಮೃತಮತಿಯ ದೈಹಿಕ ತೃಪ್ತಿಯ ಚಿತ್ರವನ್ನು ಕವಿ ಕೊಡಲು ಬಯಸಿದ್ದಾನೆ. ಈ ಸಂದರ್ಭವನ್ನು ಸನ್ನಿವೇಶ ನಿರ್ಮಾಣಕ್ಕಾಗಿ ಕವಿ ಬಳಸಿ ಕೊಂಡಿರುವುದರಿಂದ ಇಲ್ಲಿಯ ವರ್ಣನೆ ಅಲಂಕಾರಿಕವಾಗಿರದೆ ನೇರವಾಗಿದೆ.

ಒಟ್ಟಿನಲ್ಲಿ ಕಾವ್ಯದ ಮೂಲಕ ಕವಿಗಳು ಜೀವನದ ಮೂಲಭೂತ ಪ್ರವೃತ್ತಿಗಳನ್ನು ಚಿತ್ರಿಸಿರುವುದು ಗಮನಾರ್ಹ. ಮನುಷ್ಯ ಸ್ವಭಾವದ ಬಹುಮುಖ್ಯ ಅಂಗವಾದ ಪ್ರಣಯ

ಪ್ರವೃತ್ತಿಯನ್ನು, ಪ್ರಿಯ ವಸ್ತುಗಳಲ್ಲಿ ಬರುವ ನಾಯಕ ನಾಯಕಿಯರ ಪ್ರೇಮಾನುರಾಗಗಳನ್ನು, ವ್ಯಕ್ತಿಯ ಅಂತರ್ಗತವಾದ ಭಾವನೆಗಳಿಂದ ಪ್ರಕಟಪಡಿಸಿರುವುದು ಇಲ್ಲಿ ಗಮನಿಸಬೇಕಾದ ಅಂಶ. ಜೊತೆಯಲ್ಲಿ ಪ್ರಣಯದ ಸೂಕ್ಷ್ಮ ನವಿರು ಭಾವನೆಗಳನ್ನು ಅಷ್ಟೇ ಸಮರ್ಥವಾಗಿ ಎಳೆ ಎಳೆಯಾಗಿ ಬಿಡಿಸಿರುವುದು ಗಮನಾರ್ಹ.

ಹಳಗನ್ನಡ ಜೈನ ಪುರಾಣಗಳಲ್ಲಿ ವಿರಹದಿಂದ ಬಳಲುವ ನಾಯಕ ನಾಯಕಿಯರ ವಿಪ್ರಲಂಭ ಶೃಂಗಾರದ ವರ್ಣನೆ ಅಲ್ಲಲ್ಲಿ ಕಂಡುಬರುತ್ತದೆ. ಇಲ್ಲಿ ಕವಿಗಳು ವಿರಹದ ವಿವಿಧ ಮುಖಗಳನ್ನು ಚಿತ್ರಿಸಿದ್ದಾರೆ.

ವಿಶ್ವಂಧರನು ಸುಬಂಧುಶ್ರೀಯ ರೂಪಕ್ಕೆ ಮಾರು ಹೋಗುತ್ತಾನೆ. ಅವಳನ್ನು ಕಂಡೊಡನೆ ಅವನಲ್ಲಿ ಉಂಟಾದ ಕಾಮಾಸಕ್ತಿಯಿಂದ ಅವನು ಬಳಲುತ್ತಾನೆ. ಕಾಮದೇವನ ಶಕ್ತಿ ಸಾಮರ್ಥ್ಯಕ್ಕೆ ಬೆರಗಾದ ಅವನ ಉದ್ಗಾರ ಈ ಪದ್ಯದಲ್ಲಿ ಮೂಡಿಬಂದಿದೆ.

ಅರಲಂಬಂ ಪಿಡಿದೀತಂ
ಸ್ಮರನುರ್ವಿಯ ಜನಮನೆಲ್ಲ ನೋಯಿಸಿ ತವಿವಂ
ಸರಲಂಬಂ ಪಿಡಿದಪೊಡೆ
ವರರಂ ಝಷಕೇತು ಕೊಂದು ಕೂಗದೆ ಮಾಣಂ

(ಧರ್ಮಾ. 2 –7)

ಬರಿಯ ಹೂಬಾಣದ ಪ್ರಯೋಗದಿಂದ ಜನರ ಮನಸ್ಸನ್ನು ತವಿವ ಇವನಿಗೆ ಪ್ರತಿಯಾಗಿ ಸರಲಂಬು ಇರುತ್ತಿದ್ದರೆ ನರರನ್ನು ಕೊಂದು ಕೂಗದೆ ಇರುತ್ತಿರಲಿಲ್ಲ ಎನ್ನುತ್ತಾನೆ. ವಿಶ್ವಂಧರನ ಉದ್ಗಾರ ಅವನ ಮನದಲ್ಲಿ ಹೊತ್ತಿ ಉರಿಯುತ್ತಿರುವ ಕಾಮದಾಹವನ್ನು ಸೂಚಿಸುತ್ತದೆ.

'ಮನದೊಳ್ ಗುಜುಗುಜುಗೊಂಡು ದಿವಿಜರಂತೆ ಮೆಯ್ಯಿಕ್ಕದೆ ನಿರ್ಜಿತರಾದರಂತೆ ಮಿಡುಕದೆ ಕಣ್ಣುಗಳ್ ದೈವದಂತೆ ಕಣ್ಣಂ ಬಿಟ್ಟು ಮಗನಂ ನಟ್ಟಂಬಿನಂತೆ ದಿಟ್ಟಿಯಂ ತೆಗೆಯಲಾರದೆ ಬೇಗವೋದ ಬೆಟ್ಟದಂತೆ ಮೆಯ್ ಬಿಸುಪನಾಗೆ, ಕಾಳಗದ ನಡುವಾದ ಪಂದೆಯಂತೆ ನಡನಡನಡುಗಿ, ಉದ್ದಂ ಮೇಯ್ದ ಪಸುಗೂಸಿನಂತೆ ಪೊಗಲರಿಯದೆ, ಒಡೆಯರ ಮನೆಗೆ ಬಂದ ಬಂಟರಂತೆ ಕನ್ನೆಯಂ ನೋಡಿ, ಕೋಣಂ ಪೊಕ್ಕ ಮಡುವಿನಂತೆ ಮನದೊಳ್ ಕದಡಿ,

ಕಿಱಿದಾನುಂ ಬೇಗಮುಮುರ್ವನಕ್ರೀಡೆಗೆ ಪೋಗಲೊಲ್ಲದರ ಮನೆಗರಸಂ ಮಗುಳ್ದು ಬಂದು ಕಣ್ಗಳಂ ಮನದೊಳಂ ಸುಬಂಧುಶ್ರೀಯರೂಪುತೋಱೆಮತಿಗೆಟ್ಟುವಿಹ್ವಲೀಭೂತನಾಗಿ ಸೈರಿಸಲಾರದೆ ಹೋದನಂತೆ (ಧರ್ಮ -2 -8)

'ಕೋಣಂ ಪೊಕ್ಕ ಮಡುವಿನಂತೆ' ಅವನ ಮನಸ್ಸು ಕದಡಿತೆಂದು ಕವಿ ಅವನ ಮನಸ್ಥಿತಿಯನ್ನು ಸಮರ್ಥವಾಗಿ ಚಿತ್ರಿಸಿದ್ದಾನೆ. ಇಲ್ಲಿ ಕವಿ ಕಾಮಪೀಡಿತನಾಗಿ ವಿರಹವನ್ನು ತಾಳಲಾರದೆ ಬೇಯುತ್ತಿರುವವನ ಸ್ಪಷ್ಟ ಚಿತ್ರಣವನ್ನು ಕವಿ ನೀಡಿದ್ದಾನೆ.

ಚಂದ್ರಲೇಖೆಯ ಸೌಂದರ್ಯವನ್ನು ಕಂಡು ಕಾಮೋದ್ವೇಗಗೊಂಡ ಸುವೇಗನು ಮನದಲ್ಲಿಯೇ ಹೀಗೆಂದುಕೊಂಡನು.

ಮನಸಿಜನಾರಡಿಕಾಱಿಂ
ಮುನಿಸಿಂದೀ ಕಾಂತೆಯೆಂಬ ಕೂರಲಗಿಂ ಗಿ
ಱ್ರಿನೆ ತೂಳ್ದು ಬೇಗ ಮಿಱಿದಪ
ನೆನಗಿಂ ಸಾವಲ್ಲದುಳಿವತೆಱನಂ ಕಾಣೆಂ

(ಧರ್ಮ.2 -186)

ಈ ಪದ್ಯ ಸುವೇಗನ ಅಂತರಂಗದ ಸಂತಾಪವನ್ನು ಬಿಚ್ಚಿ ಬಯಲಿಗಿಡುತ್ತದೆ. ಅವನು 'ಪುಷ್ಪ ಬಾಣ ತತಿಗಳ್ಕಿದೆನಳ್ಕದೆ ನೋಪ್ಪೋ ಚರ್ಕದೆಂ' (ಧರ್ಮ.2 -187) ಎಂದು ಗೋಳಿಡುತ್ತಾನೆ. ಚಂದ್ರಲೇಖೆಯ ರೂಪು ಅವನ ಮನಸ್ಸನ್ನು ಒಂದೇ ಸಮನೆ ಪರಿತಪಿಸುತ್ತದೆ. ಕಾಮ ಪೀಡಿತನಾದವನ ವೇದನೆ, ಉದ್ವೇಗಗಳ ಚಿತ್ರಣ ಇಲ್ಲಿ ಮೂಡಿ ಬಂದಿದೆ.

ಮಗಧ ಸೌಂದರಿಯು ತನ್ನ ಪತಿಯನ್ನು ನೆನೆದು ವಿರಹಿಣಿಯಾಗಿ ಬಳಲುತ್ತಾಳೆ. ಅವಳ ವಿರಹದ ತಾಪದ ಚಿತ್ರ ಪದ್ಯದಲ್ಲಿದೆ.

ಅರಗಿಳಿಯುಂ ಮೃಗಾಕ್ಷಿ ಪಿಡಿದೋದಿ ಸಲಣ್ಕೆ ಸುಯ್ಕೆ ಬೆಂಕಿಯುಂ
ಕರಿಮರಿಯುಕ್ಕುವೆಂದು ತೆಗೆದಪ್ಪುಉಮಣ್ಕೆ ಮೆಯ್ಕೆ ತಾಪದಿಂ
ಕುರವಕಮೆಯ್ದೆಸೀದದಿಪುದೆಂದು ಕರಂ ತಿಳಕಾವನೀ ಜಮುಂ
ಕೊರಗುಗು ಮೆಂದು ನೋಡಲಣಮಣ್ಕೆ ತಪ್ತ ವಿಳೋಚನಾರ್ಚಿಯುಂ

(ಅ.ನೇಮಿ.ಪು -71)

ಆಕೆಯ ವಿರಹದ ತಾಪದ ಪರಿಣಾಮಕಾರೀ ಚಿತ್ರಣವಿಲ್ಲದೆ. ಕವಿ ಸಮಯದ ಹಿನ್ನೆಲೆಯಲ್ಲಿ ಅವಳ ವಿರಹತಾಪದ ತೀವ್ರತೆಯನ್ನು ಗುರುತಿಸಬಹುದು.

ಈ ಎರಡು ಪದ್ಯಗಳಲ್ಲಿ ವಿರಹದಿಂದ ಬಳಲುವ ಕುಂತಿಯ ಚಿತ್ರಣವಿದೆ.

ತರುಣಿಯ ಮೆಯ್ಯ ಬೆಂಕಿಯೊಳ್ ಬಿರ್ದಮೃತಾಂಶು ಮರೀಚಿ ಸುಟ್ಟ ಕ
ರ್ಪುರದವೊಲಾಗಿ ಸುಟ್ಟ ಪುದಿರಲ್ಲದೊಡೆಲ್ಲಿಯದೆಲ್ಲಿ ತಾಪಮೋ
ಸರಿಸದೆ ಪುಷ್ಪಬಾಣನಿಸೆ ನಾಂಟಿ ಮುರುಂಟಿದ ಪೂವೆ ಪುಳ್ಳಿಯಾ
ಗಿರೆ ಬಿನವೆಯ್ತಲುಂ ಬೆಂದಪುದದಿಲ್ಲದೊಡೆಲ್ಲಿಯ ದಂಗಜಾನಳಂ

(ಅ.ನೇ.ಮಿ.ಪು –97)

ಕಡು ದಣ್ಣಿಲರಲೆಯ ಬೆಮ
ತೊರ್ಡೆ ಬೀಸುವರಬ್ಜದಳದಿನಬಳೆಗೆ ಬೆಳ್ಳಂ
ಗಡಿದೆಳವೆಳ್ದಿಂಗಳೊಳಂ
ಕೊಡೆ ಪಿಡಿದರ್ ಸಖಿಯರಂಗತಾಪಮದೆಂತೋ

(ಅ.ನೇ.ಮಿ.ಪು –97)

ಇಲ್ಲಿ ವಿರಹ ವೇದನೆಯಿಂದ ಬಳಲುವ ಕುಂತಿಯ ವಿರಹ ತಾಪದ ತೀವ್ರತೆಯನ್ನು ಕಾಣಬಹುದು.

ಕಾಂತನ ಅಗಲಿಕೆಯ ಪರಿತಾಪದಿಂದ ಬಳಲುತ್ತಿರುವ ಓರ್ವಳು ಚಂದ್ರನನ್ನು ಕಂಡು

ಇನಿಯನಗಲ್ದು ಪೋಗಿ ಪರದೇಶದೊಳಿರ್ದಪ ನಾನುಮಿಲ್ಲಿ ಮಾ
ವಿನ ತಳಿರ್ವಾಸಿನೊಳ್ ಪೊರಳುತಿರ್ದಪೆನಾಗಳುಮಿಂತೆ ನೀನು ಮೆ
ನ್ನನೆ ನಡೆ ನೋಡುತುಂ ನಿಭದೊಳಿರ್ದಪೆಯುಪ್ಪುದಱಿಂದೆ ನಿನ್ನನಾ
ನನುಮಿಪೆನೆನ್ನ ಮೆಯ್ಯಡವೊ ನಲ್ಲನ ಮೆಯ್ಯಡವೊ ನಿಶಾಕರಾ

(ಆದಿ.ಪು –534)

ಎಂದು ಕೇಳುತ್ತಾಳೆ. ಪರದೇಶದಲ್ಲಿರುವ ತನ್ನ ಇನಿಯನನ್ನು ನೆನೆದು ವಿರಹ ತಾಪವನ್ನು ಇಳಿಸಿಕೊಳ್ಳಲು ಮಾವಿನ ಚಿಗುರುಗಳಿಂದ ನಿರ್ಮಿತವಾದ ಹಾಸಿಗೆಯಲ್ಲಿ ಹೊರಳುತ್ತಾಳೆ. ಚಂದ್ರನನ್ನು ಕಂಡು ತನ್ನ ಪತಿಯ ದೇಹದ ಬಗ್ಗೆ ವಿಚಾರಿಸುತ್ತಾಳೆ. ಕವಿ ಕಲ್ಪನೆ ಮನವ ಸೆರೆಹಿಡಿಯುತ್ತದೆ.

ಅವಧಿಯನೊಂದು ತಿಂಗಳೆಂದೊಟ್ಟನಿಯಂ ತಡೆದಿರ್ದ ನಲ್ಲನೆ
ಬವಸರದೊಳ್ ನಿಜಾಂಘ್ರಿನಖದರ್ಪಣ ಚುಂಬಿತ ದೃಷ್ಟಿಜಾನನೇಂ
ದುವ ನವಲೋಕಿಸುತ್ತ ವಧಿತಪ್ಪಿದುದಾಳ್ಪನೆ ಪತ್ತು ತಿಂಗಳಾ
ದುವು ಬರಲಾತನಾಗದೊಡೆ ಸಾಯಲು ಮಾಳ್ಪನೆ ಸತ್ತು ನೀಗನೇ

(ಆದಿ.ಪು –534)

ಒಂದು ತಿಂಗಳಲ್ಲಿ ಬರುವೆನೆಂದು ಹತ್ತು ತಿಂಗಳಾದರೂ ಬಾರದೆ ಇರುವ ನಲ್ಲನನ್ನು ನೆನೆದು ತೀವ್ರ ವಿರಹದಿಂದ ಬಳಲುತ್ತಿರುವ ಅವಳ ಮನೋಸ್ಥಿತಿಗೆ 'ಬರಲಾತನಾಗದೊಡೆ ಸಾಯಲು ಮಾಳ್ಪನೆ ಸತ್ತು ನೀಗನೆ' ಎಂಬ ಸಾಲುಗಳು ಕನ್ನಡಿ ಹಿಡಿಯುತ್ತವೆ.

ಸುನಂದೆಯ ರೂಪಿಗೆ ಮೋಹಗೊಂಡ ಚಂಡಶಾಸನನು ಅವಳ ಸಂಗ ಸೌಖ್ಯ ಹೊಂದಲಾಗದೆ ವಿರಹಕ್ಕೀಡಾಗುತ್ತಾನೆ. ಕವಿ 'ಸೋಂಕುವಾಸೆಗೆ ಪಕ್ಕಾಗದೆನಿಂದ ಪಲ್ಲವ ಕನಂಗಕ್ಕಾಯ್ತು ಅನಂಗ ಜ್ವರಂ' (ಅನಂ.ಪು –257) ಎಂದು ಅವನ ಮನೋಸ್ಥಿತಿಯನ್ನು ಚಿತ್ರಿಸಿದ್ದಾನೆ. ಕ್ಷಣಕ್ಷಣಕ್ಕೂ ಅವಳ ವ್ಯಾಮೋಹದಿಂದ ಭ್ರಮಿತನಾದ ಚಂಡಶಾಸನನು ಅನುಭವಿಸುವ ತೀವ್ರ ವಿರಹವನ್ನು ಕವಿ ಕಾವ್ಯದುದ್ದಕ್ಕೂ ಹಿಡಿದಿಟ್ಟಿದ್ದಾನೆ.

4.3. ವಿಕೃತ ಕಾಮ:

ಹಳಗನ್ನಡ ಜೈನ ಪುರಾಣಗಳಲ್ಲಿ ಕವಿಗಳು ಧರ್ಮ ವಿರುದ್ಧ ಪ್ರೇಮದ ಚಿತ್ರಣವನ್ನು ನೀಡಿದ್ದಾರೆ. ಧರ್ಮದ ವಿರುದ್ಧವೆಂದರೆ ಜೈನ ಧರ್ಮದ ಗೃಹಸ್ಥಧರ್ಮದ ವಿರುದ್ಧ. ಪರಪುರುಷ ಅಥವ ಪರಸ್ತ್ರೀಯರನ್ನು ಮೋಹಿಸಿದ ಗಂಡಿನ ಮತ್ತು ಹೆಣ್ಣಿನ ಚಿತ್ರಣ. ಇಲ್ಲಿ ಬರುವ ಕಾಮ ವ್ಯಾಮೋಹವು ಧರ್ಮಬಾಹಿರವಾದರೂ ಅಸಹಜವಾದುದೇನೂ ಅಲ್ಲ. ಇಲ್ಲಿ ಕವಿಗಳು ಬರಿಯ ಶೃಂಗಾರದ ವಿಕೃತ ಮುಖವೊಂದನ್ನೇ ರತಿರಹಸ್ಯವನ್ನೇ ಬಣ್ಣಿಸುವುದಕ್ಕಿಂತ ಭಿನ್ನವಾಗಿ ಪ್ರಣಯ ಸಮಸ್ಯೆಗಳನ್ನು ಎತ್ತಿಕೊಂಡು ಅದನ್ನು ಬಿಡಿಸುವತ್ತ ಆಸಕ್ತರಾಗಿದ್ದಾರೆ.

ವಡ್ಡಾರಾಧನೆಯ ಕಾರ್ತಿಕ ಋಷಿಯ ಕಥೆಯಲ್ಲಿ ಬರುವ ಅಗ್ನಿರಾಜನು ತನ್ನ ಮಗಳನ್ನೇ ಮದುವೆಯಾಗುವ ಬರ್ಬರತೆಯ ಚಿತ್ರಣವಿದೆ. (ನೋಡಿ.ವಡ್ಡಾ.–231) ತನ್ನ ಮಗಳ ರೂಪ ಕಾಂತಿ ಚೆಲುವಿಗೇ ಮನಸೋತು ಧರ್ಮಾಧರ್ಮದ ವಿವೇಕವಿಲ್ಲದೆ ವರ್ತಿಸುವ ಅಗ್ನಿರಾಜನ ವರ್ತನೆ ವಿಚಿತ್ರವಾಗಿದೆ. 'ಎನ್ನಾಳ್ವ ಮಂಡಳಂಗಳೊಳ್ ಪುಟ್ಟಿದ ಲೇಸಪ್ಪ ವಸ್ತು

ಮಾರ್ಗಕಲ್ಪವೆಂದು. ತನ್ನ ಕಾಮೋದ್ದೇಶ ಸಾಧನೆಗಾಗಿ ಸಮಾಜ ಪ್ರಮುಖರನ್ನು ಕೇಳಿ ಅವರಿಂದ 'ಇತ್ತಪ್ಪ ವಸ್ತು ನಿನಗಕಲ್ಪಮ್' ಎಂಬ ಉತ್ತರವನ್ನು ಪಡೆಯುತ್ತಾನೆ. ಮನುಷ್ಯ ಸಹಜ ಕಾಮವು ತನ್ನ ಅಂಕೆಯನ್ನು ಮೀರಿದಾಗ ಧರ್ಮಾಧರ್ಮದ ಬಂಧಗಳನ್ನು ಲೆಕ್ಕಿಸದೆ, ಸಮಾಜದ ಕಟ್ಟುಪಾಡುಗಳನ್ನು ಉಲ್ಲಂಘಿಸಿ ಪ್ರವಾಹದಂತೆ ಸ್ವೇಚ್ಛೆಯಾಗಿ ಮುಂದುವರೆಯುವುದನ್ನೂ, ಆ ಪ್ರವಾಹದೊಂದಿಗೆ ಅಗ್ನಿರಾಜನು ಕೊಚ್ಚಿ ಹೋಗುವುದನ್ನೂ ವಡ್ಡಾರಾಧನಕಾರ ಸಂಕ್ಷಿಪ್ತವಾಗಿ ಚಿತ್ರಿಸಿದ್ದಾನೆ.

ಶಾಂತಿ ಪುರಾಣದಲ್ಲಿ ತನ್ನ ಅಣ್ಣನಾದ ಇಂದ್ರನ ಹೆಂಡತಿ ವಸಂತಸೇನೆಯ ರೂಪಿಗೆ ಮನಸೋತು ಉದ್ರಿಕ್ತನಾಗಿ ಮದನಾವಸ್ಥೆಯನ್ನು ಸೈರಿಸಲಾಗದ ಉಪೇಂದ್ರನು ಒತ್ತಾಯದಿಂದ ಅವಳನ್ನು ಕೂಡುತ್ತಾನೆ. (ಶಾಂತಿ.ಪು –203) ಆಕೆಯ ಮೋಹವನ್ನು ತಡೆಯಲಾರದೆ ಅವಳೊಂದಿನ ಸಂಬಂಧವನ್ನು ಮುಂದುವರೆಸುತ್ತಾನೆ. ತನ್ನ ಸೋದರನ ಅರಸಿಯನ್ನೇ ಪ್ರೇಯಸಿಯನ್ನಾಗಿಸಿಕೊಂಡು ಅವಳ ಸುಖವನ್ನು ಅನುಭವಿಸುವ ಉಪೇಂದ್ರನ ನಡವಳಿಕೆ ವಿಕೃತವಾದುದು.

ನೇಮಿನಾಥ ಪುರಾಣದಲ್ಲಿ ಬರುವ ಸುಮುಖ ವನಮಾಲೆಯರ ಸಂಬಂಧವೂ ಇಂತಹದೇ ಇನ್ನೊಂದು ಅಧಾರ್ಮಿಕ ಪ್ರಸಂಗವಾಗಿದೆ. ಕೌಶಂಬಿ ನಗರದ ವರ್ತಕ ವೀರದತ್ತ. ಅವನ ಹೆಂಡತಿ ವನಮಾಲೆ. ಕವಿ ಅವಳನ್ನು ವರ್ಣಿಸುವಲ್ಲಿ ಮನ್ಮಥನಿಗೆ ಎತ್ತಿದ ವಿಜಯ ಪತಾಕೆಯಂತಿದ್ದಳು ಆ ಚಂಚಲನೇತ್ರೆ ಎಂದಿದ್ದಾನೆ. ಅದೇ ನಗರದ ಅತ್ಯಂತ ಶ್ರೀಮಂತನಾದ ರಾಜ ವರ್ತಕ ಸುಮುಖ. ವನಮಾಲೆಯನ್ನು ಕಂಡ ಅವನ ಚಿತ್ತ ವಿಹ್ವಲವಾಯಿತು. ಹೇಗಾದರೂ ಮಾಡಿ ಒಮ್ಮೆ ಅವಳನ್ನು ಕೂಡಬೇಕೆಂಬ ಆಸೆಯನ್ನು ಹೊಂದಿದನು. ಜಲಯಾತ್ರೆ ಕೈಗೊಂಡು ವ್ಯಾಪಾರ ಮಾಡಬೇಕೆಂಬ ಉದ್ದೇಶವಿದ್ದರೂ ಆರ್ಥಿಕ ಸ್ಥಿತಿಯಿಂದ ಸುಮ್ಮನಿದ್ದ ವೀರದತ್ತನಿಗೆ ಸುಮುಖನು ಯಾತ್ರೆಗೆ ಬೇಕಾದ ಸಕಲ ಸೌಲಭ್ಯವನ್ನೂ ಒದಗಿಸಿ ಅವನನ್ನು ವ್ಯಾಪಾರಕ್ಕಾಗಿ ಹೊರನಾಡಿಗೆ ಕಳುಹಿಸಿ ಕೊಡುತ್ತಾನೆ. ತನಗೆ ಒದಗಿಬಂದ ಈ ಸಂದರ್ಭವನ್ನು ನೆನೆದು 'ಸುಮುಖನು ವನಮಾಲೆಯೊಡನೆ ಸ್ವೇಚ್ಛೆಯಾಗಿ ಪ್ರತಿನಿತ್ಯ ರತಿ ಸುಖವನ್ನು ಅನುಭವಿಸುತ್ತ ಆನಂದದಿಂದ ಕಾಲ ಕಳೆಯುತ್ತಾನೆ. (ನೇಮಿ.ಪು. 1 –81). ತನ್ನ ಕಾಮದ ತೃಷ್ಣೆಯ ಪೂರೈಕೆಗಾಗಿ ಪತಿಯನ್ನು ವ್ಯಾಪಾರಕ್ಕೆಂದು ಹೊರನಾಡಿಗೆ ಕಳುಹಿಸಿ ಆ ಸಂದರ್ಭವನ್ನು ಉಪಯೋಗಿಸಿಕೊಳ್ಳುವುದು ಸುಮುಖನ

ದೌರ್ಬಲ್ಯ. ಆದುದರಿಂದಲೇ ಅವಳೊಂದಿನ ಸಂಬಂಧದಿಂದ ಹೊರಬರಲಾಗದೆ ಅಲ್ಲಿಯೇ ಉಳಿಯುತ್ತಾನೆ.

ಕಾಮ ವಿಕಾರವು ಮನುಷ್ಯನಿಗೆ ಅನರ್ಥಕಾರಿ ಕಾರ್ಯಗಳನ್ನು ಎಸಗಲು ಎಡೆಮಾಡಿ ಕೊಡುತ್ತದೆ. ಚಾಣಕ್ಯ ಋಷಿಯ ಕಥೆಯಲ್ಲಿ ಬರುವ ಕಾಪಿ ಎಂಬ ಮಂತ್ರಿ ರಾಜದ್ರೋಹ ಕಾರ್ಯವೆಸಗಲು ವಿಕೃತ ಕಾಮವೇ ಕಾರಣವಾಗಿದೆ. ನಂದವಂಶದ ಪದ್ಮನೆಂಬ ಅರಸನು ಪಾಟಲೀಪುತ್ರವನ್ನು ಆಳುತ್ತಿದ್ದನು. ಅವನ ಮಹಾರಾಣಿ ಸುಂದರಿ ಎಂಬುವಳು. ಕಾಪಿ ಎಂಬುವನು ಅಲ್ಲಿನ ಮಂತ್ರಿ. ಒಂದು ದಿನ ಕಾಪಿಯು ಸುಂದರಿ ಮಹಾದೇವಿಯನ್ನು ನೋಡಿ ಮೋಹಿತನಾಗಿ ಅರಸನನ್ನು ಕೊಂದು ಅರಸಿಯೊಂದಿಗೆ ಬಾಳುವೆನೆಂಬ ಭಾವನೆಯಿಂದ ಶತ್ರು ರಾಜ್ಯದ ರಾಜರನ್ನು ಪದ್ಮನ ಮೇಲೆ ದಂಡೆತ್ತಿ ಬರುವಂತೆ ಮಾಡಿದನು. (ವಡ್ಡಾ—343). 'ಕಾಮಕ್ಕೆ ಕಣ್ಣಿಲ್ಲ' ಎಂಬ ಹೇಳಿಕೆ ಈ ಸಂದರ್ಭಕ್ಕೆ ಸರಿಯಾಗಿ ಹೊಂದುತ್ತದೆ. ಕಾಮುಕರ ಕುರುಡು ವರ್ತನೆಯು ಉಂಟುಮಾಡುವ ವಿಪರೀತ ಪರಿಣಾಮಕ್ಕೆ ಇದು ನಿದರ್ಶನ.

ಜನ್ನನು ತನ್ನ ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣಗಳಲ್ಲಿ ಎರಡು ಅಧಾರ್ಮಿಕ ಪ್ರಣಯ ಸಮಸ್ಯೆಯನ್ನು ಬಿಡಿಸ ಹೊರಟಿದ್ದಾನೆ. ಒಂದು ಅಮೃತಮತಿ — ಅಷ್ಟವಂಕರ ಧರ್ಮನಿಷಿದ್ಧ ಪ್ರಣಯ ಪ್ರಸಂಗ. ಇನ್ನೊಂದು ಚಂಡಶಾಸನನ ಪ್ರಸಂಗ. ಅಮೃತಮತಿ — ಅಷ್ಟವಂಕರ ಸಂಬಂಧವನ್ನು ಪ್ರಣಯವೆನ್ನುವುದಕ್ಕಿಂತಲೂ ವಿಕೃತಲೈಂಗಿಕ ಸಂಬಂಧವೆನ್ನಬಹುದು. ಇಲ್ಲಿ ಅಮೃತಮತಿ ತನ್ನ ಗಂಡನಿಗೆ ದ್ರೋಹ ಬಗೆದು ಕುರೂಪಿಯಾದ ಮಾವುತನಿಗೆ ತನ್ನನ್ನು ಅರ್ಪಿಸಿಕೊಳ್ಳುತ್ತಾಳೆ. ಅವನ ಹಾಡು ಇವಳಿಗೆ ಮನವಿಕಾರಕ್ಕೆ ಪ್ರೇರಣೆಯಾಗುತ್ತದೆ. ಚಂಡಶಾಸನ ಪ್ರಸಂಗದಲ್ಲಿ ಏಕಮುಖವಾದ ಕಾಮವ್ಯಾಮೋಹವು ಅಭಿವ್ಯಕ್ತವಾಗಿದೆ. ಚಂಡಶಾಸನನದು ಸಹಜ ವ್ಯಾಮೋಹ. ಒಟ್ಟಿನಲ್ಲಿ ಇಲ್ಲಿ ಅಮೃತಮತಿಯ ಜಾರತನವನ್ನೂ, ಸುನಂದೆಯ ಪತಿನಿಷ್ಠ ಪ್ರೇಮವನ್ನೂ ಗುರುತಿಸಬಹುದು.

ಯಶೋಧರನೊಂದಿಗೆ ಸಮಾಗಮದಲ್ಲಿ ಪರವಶತೆ ಹೊಂದಿ ಅವನ ತೋಳ ತೆಕ್ಕೆಯಲ್ಲಿ ಹಿಡಿದುಕೊಂಡು ನಿದ್ರಿಸುತ್ತಿದ್ದರೂ ಅಮೃತಮತಿಗೆ ಅಷ್ಟವಂಕನ ಗಾಯನ ಮನ ಸೆಳೆಯುತ್ತದೆ. ಕೂಡಲೇ ತನ್ನ ಮನಸ್ಸನ್ನು ಆ ಗಾಯಕನಿಗೆ ತೆತ್ತು ಬಿಡುತ್ತಾಳೆ. ಬೆಳಗಿನವರೆಗೆ ಹಾಡುತ್ತಲೇ ಇದ್ದ ಆ ಗಾಯಕನನ್ನು 'ನೋಡುವ ಕೂಡುವ ಚಿಂತೆ ಕಡಲ್ವರಿದುದಂದು ಬೆಳಗಪ್ಪನೆಗಂ' (ಯಶೋ.ಚ —51). ಅವಳ ಚಿಂತೆ ಕಡಲಿನಂತೆ ಉಕ್ಕಿ

ಹರಿಯುವುದು ಅವಳ ಬಯಕೆಯ ತೀವ್ರತೆಯನ್ನು ಸೂಚಿಸುತ್ತದೆ. ತನ್ನ ಹೃದಯದಲ್ಲಿ ಮೂಡಿದ ಈ ಬಯಕೆಯ ಈಡೇರಿಕೆಯ ಕಡೆಗೇ ಅವಳ ಪ್ರಯತ್ನಗಳು ಸಾಗುತ್ತವೆ. ಬೆಳಗಾದೊಡನೆ ತನ್ನ ನೆಚ್ಚಿನ ಗೆಳತಿಯನ್ನು ಆತನ ಬಳಿಗೆ ಕಳುಹಿಸುತ್ತಾಳೆ. ಸಕಲ ಭೋಗ ಭಾಗ್ಯಗಳಿದ್ದರೂ ವಿಷಯ ವ್ಯಾಮೋಹದಿಂದ ಕುರುಡಾದ ಅವಳು ಅಸಹ್ಯ ರೂಪಿನ ಬದಗನಲ್ಲಿ ಅನುರಕ್ತಳಾಗುತ್ತಾಳೆ. ಜನ್ನನು ಇದನ್ನು ಬೇವನ್ನು ಮೆಚ್ಚಿದ ಕಾಗೆಗೆ ಮಾವು ಮೆಚ್ಚಿಗೆಯಾದೀತೇ? (ಯಶೋ.ಚ –55) ಎಂಬುದರ ಮೂಲಕ ಯಾವುದು ತ್ಯಾಜ್ಯ ಯಾವುದು ಸ್ವೀಕಾರಾರ್ಹ ಎಂದು ತಿಳಿಸುತ್ತಾನೆ.

ತನ್ನ ಬಾಲ್ಯ ಸ್ನೇಹಿತ ವಸುಷೇಣನ ಪತ್ನಿ ಸುನಂದೆಯ ಚೆಲುವು ಚಂಡಶಾಸನನ ಮನವನ್ನು ಸೂರೆಗೊಂಡಿತು. ಅವಳೊಮ್ಮೆ ಉಣಬಡಿಸುವಾಗ ಚಂಡಶಾಸನನು ಅವಳನ್ನು ಹತ್ತಿರದಿಂದ ನೋಡಿ ಕಾಮೋನ್ಮತ್ತನಾಗುತ್ತಾನೆ. ಚಂಡಶಾಸನನ ಕಾಮವಿಕಾರಕ್ಕೆ ಅವನ ಮಿತ್ರ ಸುದರ್ಶನನೂ ಕಾರಣನಾಗುತ್ತಾನೆ. ದಾರಿತಪ್ಪಿದ ಸ್ನೇಹಿತನಿಗೆ ವಿವೇಕ ಹೇಳುವುದರ ಬದಲು ಸುನಂದೆಗೂ ನಿನ್ನ ಮೇಲೆ ಮೋಹವುಂಟಾಗಿದೆಯೆಂದು ಸುಳ್ಳು ಹೇಳಿ ಅವನನ್ನು ಉದ್ರೇಕಗೊಳಿಸುತ್ತಾನೆ. ಪರಿಣಾಮವಾಗಿ ಮಿತ್ರನ ಹೆಂಡತಿಯೆಂದು ಬಗೆಯದೆ ಸುನಂದೆಯನ್ನು ಅಪಹರಿಸುತ್ತಾನೆ. ಚಂಡಶಾಸನನ ಪ್ರಣಯ ಭಿಕ್ಷೆಯನ್ನು ತಿರಸ್ಕರಿಸಿದ ಸುನಂದೆ ಪಾತಿವ್ರತ್ಯದ ಪ್ರತೀಕವಾಗಿ ಚಿತ್ರಿತಳಾಗಿದ್ದಾಳೆ. ಕೊನೆಗೂ ಅನ್ಯರಿಗೆ ಒಲಿಯದೆ ಅವಳು ಪ್ರಾಣತ್ಯಾಗ ಮಾಡುತ್ತಾಳೆ (ಅನಂ.ಪು –278). ಚಂಡಶಾಸನ ಮೂಲತಃ ಸುನಂದೆಯನ್ನು ಅಪಹರಿಸಬೇಕೆಂಬ ಉದ್ದೇಶ ಹೊಂದಿರುವುದಿಲ್ಲ. ಮೇಲಾಗಿ ಸುನಂದೆ ಅವನ ಪ್ರಾಣಮಿತ್ರನ ಹೆಂಡತಿ. ಆದರೆ ಅವಳ ಚೆಲುವು ಅವನನ್ನು ಮರುಳುಗೊಳಿಸುತ್ತದೆ. ಅದಕ್ಕೆ ಪೂರಕವಾಗಿ ವರ್ತಿಸಿದ ಸುದರ್ಶನ ಅವನ ಮನೋವಿಕಾರಕ್ಕೆ ಕಾರಣನಾಗುತ್ತಾನೆ. ಕವಿ ಇಲ್ಲಿ ಚಂಡಶಾಸನನ ವಿಕೃತ ಪ್ರೇಮದ ಅವಸ್ಥೆಗಳನ್ನು ನಿರೂಪಿಸಿದ್ದಾನೆ.

ಒಟ್ಟಿನಲ್ಲಿ ಮನುಷ್ಯ ದೌರ್ಬಲ್ಯವು ಯಾವುದೋ ಒಂದು ಸಂದರ್ಭದಲ್ಲಿ ಧರ್ಮಾಧರ್ಮದ ವಿವೇಚನೆಗೆ ಅವಕಾಶವೀಯದೆ ಹೇಗೆ ಅವರನ್ನು ಹತೋಟಿ ತಪ್ಪಿಸುತ್ತದೆ ಎಂಬುದನ್ನು ವಿವರಿಸುವ ಪ್ರಯತ್ನವನ್ನು ಕವಿಗಳು ಇಲ್ಲಿ ಮಾಡಿದ್ದಾರೆ. ಇಲ್ಲಿ ಎಲ್ಲಿಯೂ ಅಗ್ಗದ ಕೀಳು ಕಾಮ ಪ್ರಚೋದನೆಯಿಲ್ಲದಿರುವುದು ಗಮನಾರ್ಹ. ಇಲ್ಲಿಯ ಸನ್ನಿವೇಶಗಳಿಂದ ಉದ್ಭವಿಸುವ ಕಾಮಾಸಕ್ತಿ ಕ್ಷಣಿಕವಾದುದಲ್ಲ. ಅದರ ವಿನಾಶಕರ ಶಕ್ತಿ ಮತ್ತು ಭೀಕರ

ಪರಿಣಾಮಗಳು ಅಷ್ಟೇ ತೀಕ್ಷ್ಣವಾಗಿದೆ. ಒಂದವನೇ ಚೆಲುವನೆಂದು ಅವನನ್ನು ಕೂಡುವ ಅಮೃತಮತಿ, ಶ್ರೇಷ್ಠವಾದ ವಸ್ತುಗಳೆಲ್ಲವೂ ಆಳುವ ಅರಸನಿಗೇ ಸಲ್ಲತಕ್ಕದ್ದು ಎಂದು ಚೆಲುವೆಯಾದ ತನ್ನ ಮಗಳನ್ನೇ ಮದುವೆಯಾಗುವ ಅಗ್ನಿರಾಜ, ಅಣ್ಣನ ಹೆಣ್ಣನ್ನದೆ ಬಲತ್ಕಾರದಿಂದ ಕೂಡುವ ಸುಪೇಂದ್ರ, ಉಪಾಯದಿಂದ ಪತಿಯನ್ನು ವ್ಯಾಪಾರಕ್ಕೆಂದು ಹೊರನಾಡಿಗೆ ಕಳುಹಿಸಿ ಅವನ ಪತ್ನಿಯೊಂದಿಗೆ ವಿಹರಿಸುವ ಸುಮುಖ, ಆಳುವ ಅರಸನನ್ನೇ ಕೊಂದು ಅವನ ಹೆಂಡತಿಯನ್ನು ಕೂಡುವ ಆಸೆ ಹೊತ್ತ ಮಂತ್ರಿ ಕಾಪಿ, ಬಾಲ್ಯ ಸ್ನೇಹಿತನ ಹೆಂಡತಿಯನ್ನು ಕೂಡುವ ಆಸೆಯಿಂದ ಅವಳನ್ನು ಅಪಹರಿಸುವ ಚಂಡಶಾಸನ – ಇವರೆಲ್ಲರೂ ಪ್ರಾಚೀನ ಅನಾಗರಿಕ ವಿಕೃತ ಪ್ರವೃತ್ತಿಯ ಸಂಕೇತಗಳು.

ಸಮಾರೋಪ

ಸಮಾರೋಪ

ಹನ್ನೆರಡನೆಯ ಶತಮಾನದವರೆಗಿನ ಕನ್ನಡ ಸಾಹಿತ್ಯವನ್ನು ಗಮನಿಸಿದಾಗ ಅದು ಅಂದಿನ ರಾಜಕೀಯ ಸಾಮಾಜಿಕ ಬೆಳವಣಿಗೆಯನ್ನು ಹೊಂದಿಕೊಂಡು ಬೆಳೆದಿರುವುದು ಕಂಡು ಬರುತ್ತದೆ. ಜೈನ ಯುಗದ ಸಮಾಜದ ಭಿನ್ನ ಕಾಲಘಟ್ಟಗಳ ಭೇದ ಬದಲಾವಣೆಗಳಿಗೆ ಹೊಂದಿಕೊಂಡು ಸಾಹಿತ್ಯ ಬೆಳೆದಿದೆ ಎನ್ನುವುದಕ್ಕೆ, ಕವಿಗಳು ತಮ್ಮ ದೃಷ್ಟಿಕೋನದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿರುವುದು ಮತ್ತು ಕಥಾವಸ್ತು ಮುಂತಾದವುಗಳಲ್ಲಿ ಆಗಿರುವ ಬದಲಾವಣೆಗಳು ಸಾಕ್ಷಿಯಾಗಿ ನಿಲ್ಲುತ್ತವೆ.

ದಕ್ಷಿಣಕ್ಕೆ ವಲಸೆ ಬಂದು ಶ್ರವಣ ಬೆಳಗೊಳದಲ್ಲಿ ನೆಲೆಸಿದ ಜೈನರು ಧರ್ಮ ಪ್ರಸಾರದ ಆರಂಭ ಘಟ್ಟದಲ್ಲಿ ವೈದಿಕ ವಿರೋಧೀ ಧೋರಣೆಗಳೊಂದಿಗೆ ಕಾರ್ಯ ಪ್ರವರ್ತರಾದುದು ತಿಳಿದುಬಂದರೂ ಕನ್ನಡ ಕಾವ್ಯಗಳ ರಚನಾ ಕಾಲಕ್ಕೆ ವೈದಿಕ ಧರ್ಮದೊಂದಿಗೆ ಹಲವು ವಿಷಯಗಳಲ್ಲಿ ರಾಜಿ ಮಾಡಿಕೊಂಡಿದೆ. ಜೈನ ಧರ್ಮವು ವರ್ಣಾಶ್ರಮ ಧರ್ಮವನ್ನು ಒಪ್ಪಿ ಪ್ರತಿಪಾದಿಸಿರುವುದು ಅದು ವೈದಿಕ ಧರ್ಮದ ವ್ಯವಸ್ಥೆಯ ಬಂಧನಗಳನ್ನು ಒಪ್ಪಿಕೊಂಡು ಅದರೊಂದಿಗೆ ಸಂಧಿಮಾಡಿಕೊಂಡಿದ್ದಕ್ಕೆ ನಿದರ್ಶನ. ಸಮಾನತೆಯ ಬಗ್ಗೆ ಮಾತನಾಡಿದ ಜೈನರು ಸ್ಪೃಶಾಸ್ಪೃಶ್ಯತೆಯನ್ನು ಒಪ್ಪಿಕೊಂಡದ್ದು ಒಂದು ದುರಂತವೇ ಸರಿ.

ಹತ್ತು ಮತ್ತು ಹನ್ನೆರಡನೆಯ ಶತಮಾನಗಳ ಯುಗಧರ್ಮದಲ್ಲಿ ಮೂಲಭೂತ ವ್ಯತ್ಯಾಸಗಳಿವೆ. ಯುಗಧರ್ಮಕ್ಕನುಗುಣವಾಗಿ ಕವಿಗಳ ಮನೋಧರ್ಮ ಬದಲಾಗಿದೆ. ಅಂತೆಯೇ ಕಾವ್ಯ ಧೋರಣೆಯೂ ಕೂಡ. ಹತ್ತನೆಯ ಶತಮಾನದ ಕವಿಗಳ ಸಂತೃಪ್ತ ಮನೋಧರ್ಮಕ್ಕೆ ಅಂದಿನ ಸಮಾಜದಲ್ಲಿ ಜೈನ ಧರ್ಮದ ಸ್ಥಿತಿ ಕಾರಣವಾಗಿದೆ. ಆ ಕಾಲಕ್ಕೆ ರಾಜಮನೆತನಗಳ ಬೆಂಬಲವೂ ಸಾಕಷ್ಟಿದ್ದಿತು. ಆದರೆ ಹನ್ನೆರಡನೆಯ ಶತಮಾನದ ಪರಿಸ್ಥಿತಿಯೇ ಬೇರೆ. ಇಲ್ಲಿ ಕವಿಗಳು ಜೈನ ಧರ್ಮದ ಅಸ್ತಿತ್ವಕ್ಕಾಗಿ ಬೇರೆ ಧರ್ಮಗಳೊಡನೆ ಸ್ಪರ್ಧಿಸಿ ಹೋರಾಡಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿದ್ದರು. ವೀರಶೈವ ಧರ್ಮದ ಜನಪ್ರಿಯತೆಯ ಎದುರು ತತ್ತರಿಸಿ ಹೋದ ಜೈನ ಧರ್ಮವನ್ನು ಪುನರುತ್ಥಾನಗೊಳಿಸಿ ಜನಪ್ರಿಯತೆಗೊಳಿಸಬೇಕೆಂಬ ಪ್ರಯತ್ನವನ್ನು ಇಲ್ಲಿ ಗುರುತಿಸಬಹುದು. ರಾಜಾಶ್ರಯವನ್ನು ಕಳೆದುಕೊಂಡ ಜೈನ ಧರ್ಮ ಈಗ ರಾಜರನ್ನು ಬಿಟ್ಟು ಕೇವಲ ಸಾಮಾನ್ಯರನ್ನು ಅವಲಂಬಿಸಬೇಕಾದ ಪರಿಸ್ಥಿತಿ ಒದಗಿದೆ. ಈ ನೆಲೆಯಲ್ಲಿ

ಕವಿಗಳು ಲೌಕಿಕ ಕಾವ್ಯರಚನೆ ಬಿಟ್ಟು ಬರಿಯ ಆಗಮಿಕ ಕಾವ್ಯ ರಚನೆಗೆ ತೊಡಗಿದ್ದು ಗಮನಾರ್ಹ. ಸಾಮಾನ್ಯರಿಗೆ ಧರ್ಮವನ್ನು ಹೇಳುವಲ್ಲಿ ವಸ್ತುಸ್ಥಿತಿ ಕಾವ್ಯದ ಭಾಷೆಯನ್ನೂ ಮಾರ್ಪಡಿಸಿದೆ. ಆರಂಭದಲ್ಲಿಲ್ಲದ ಪರಧರ್ಮ ಅವಹೇಳನ, ವಿಡಂಬನೆಗಳು ಅನಂತರದ ಕೆಲವು ಕೃತಿಗಳಲ್ಲಿ ತೀವ್ರವಾಗಿ ಬಂದಿದೆ. ಇಲ್ಲಿ ಎಂತಾದರೂ ಧರ್ಮದ ಮೇಲ್ಮೆಯನ್ನು ಸಾಧಿಸಬೇಕೆಂದು ಹೊರಟ ಕವಿಗಳ ಮನೋಭಾವ ಸ್ಪಷ್ಟ. ಈ ಮಟ್ಟಕ್ಕೆ ಇಳಿದಿದ್ದು ಆ ಕಾಲದ ಜೈನಧರ್ಮದ ದೌರ್ಬಲ್ಯವನ್ನು ಇದು ಪ್ರತಿಬಿಂಬಿಸುತ್ತದೆ.

ಹನ್ನೊಂದು ಹನ್ನೆರಡನೆಯ ಶತಮಾನಗಳಲ್ಲಿ ಹಂತ ಹಂತವಾಗಿ ತನ್ನ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತಾ ಹೋದ ಜೈನ ಧರ್ಮ ಸಂಕ್ರಮಣಾವಸ್ಥೆಯಲ್ಲಿದ್ದು, ಅಂದಿನ ಜೈನ ಕವಿಗಳನ್ನು ಸಂಕ್ರಮಣಾವಸ್ಥೆಯ ಕವಿಗಳೆನ್ನಬಹುದಾಗಿದೆ. ಲೌಕಿಕ ಸಂಪ್ರದಾಯವನ್ನು ಬಿಟ್ಟು ಬರಿಯ ಆಗಮಿಕ ಸಂಪ್ರದಾಯಕ್ಕೆ ಅಂಟಿಕೊಂಡ ಈ ಕವಿಗಳು ಲೌಕಿಕ ಕಾವ್ಯದ ಹಲವು ಲಕ್ಷಣಗಳನ್ನು ಆಗಮಿಕದಲ್ಲಿ ಬಳಸಿಕೊಂಡರು. ಜೈನ ಧರ್ಮದ ಪುನರುತ್ಥಾನವನ್ನು ಗುರಿಯನ್ನಾಗಿಸಿಕೊಂಡು ಕಾವ್ಯ ರಚನೆಗಳಿಂದ ಈ ಕಾಲದ ಕವಿಗಳು ಬದುಕಿನ ಅತ್ಯಾಕರ್ಷಕ ಭಾಗವೆಂಬಂತೆ ಪ್ರಣಯ ಶೃಂಗಾರಗಳನ್ನು ಭೋಗಭಾಗ್ಯಗಳ ಮೇಲ್ಮೆಯನ್ನು ಆಗಮಿಕ ಕಾವ್ಯಗಳಲ್ಲಿ ವರ್ಣಿಸಿದರು. 'ಶಾಂತರಸ'ವೊಂದೇ ರಸ ಎಂದ ಕವಿಗಳು ಮುಂದೆ 'ಸ್ತ್ರೀ ರೂಪಮೆ ರೂಪಂ, ಶೃಂಗಾರಮೆ ರಸಂ' ಎನ್ನುವ ನಿಲುವನ್ನೂ ಹೊಂದಿದರು.

ಒಟ್ಟಿನಲ್ಲಿ ಧರ್ಮದ ಏಳು ಬೀಳುಗಳಿಗೆ ಹೊಂದಿಕೊಂಡು ಈ ಕಾಲದ ಸಾಹಿತ್ಯ ಸೃಷ್ಟಿಯಾಗಿದೆ. ಇಲ್ಲಿ ಜೀವನ ಮೌಲ್ಯಗಳ ನಿರೂಪಣೆ, ಅದು ಬೆಳೆದು ಬಂದ ಕಾಲದ ರಾಜಕೀಯ, ಸಾಮಾಜಿಕ ಮೌಲ್ಯಗಳನ್ನೂ ಒಳಗೊಂಡಿದೆ. ಧರ್ಮ ಸಾಧನೆ ಪ್ರಚಾರವೇ ಗುರಿಯಾದ್ದರಿಂದ ಧಾರ್ಮಿಕ ವಿಷಯಗಳೇ ಹೆಚ್ಚಾಗಿ ಮೂಡಿಬಂದಿದೆ. ವೈದಿಕ ಧರ್ಮದ ವಿರುದ್ಧ ದನಿಎತ್ತಿದ ಜೈನರು ಅದರೊಂದಿಗೆ ರಾಜಿಮಾಡಿಕೊಂಡಿದ್ದಾರೆ. ಪ್ರತಿಭಟನೆಯ ಪ್ರತಿನಿಧಿಯಾಗಬೇಕಾಗಿದ್ದ ಜೈನ ಕಾವ್ಯ, ಹಾಗಲ್ಲದೆ ಬರಿಯ ರಾಜಿ ಮನೋಭಾವವನ್ನು ಪ್ರಕಟ ಮಾಡಿದೆ.

ಅನುಬಂಧಗಳು

ಅಧ್ಯಯನಕ್ಕೆ ಬಳಸಿದ ಕೃತಿಗಳನ್ನು ರಚಿಸಿದ ಕವಿಗಳ ಕೃತಿ, ಕಾಲ ಆಶ್ರಯದಾತರ ವಿವರ

ಗ್ರಂಥಕಾರ	ಕಾಲ	ಆಶ್ರಯ	ಗ್ರಂಥ	ಸ್ವರೂಪ
ಶಿವಕೋಟ್ಯಾಚಾರ್ಯ	ಸು – 925		1. ವಡ್ಡಾರಾಧನೆ	ಗದ್ಯಕಥೆ
ಪಂಪ	940	ಚಾಲುಕ್ಯ ಅರಿಕೇಸರಿ	1. ಆದಿಪುರಾಣ	ಚಂಪೂಕಾವ್ಯ
			2. ವಿಕ್ರಮಾರ್ಜುನ ವಿಜಯ (ಪಂಪ ಭಾರತ)	ಚಂಪೂಕಾವ್ಯ
ಪೊನ್ನ	ಸು –950	ರಾಷ್ಟ್ರಕೂಟ 3ನೆಯ ಕೃಷ್ಣ	1. ಶಾಂತಿಪುರಾಣ	ಚಂಪೂಕಾವ್ಯ
			2. ಭುವನೈಕ ರಾಮಾಭ್ಯುದಯ	ಚಂಪೂಕಾವ್ಯ
			3. ಜಿನಾಕ್ಷರಮಾಲೆ	ಕಂದ ಪದ್ಯ
ರನ್ನ	990	ಅತ್ತಿಮಬ್ಬೆ, ಚಾಲುಕ್ಯ ತೈಲಪ, ಸತ್ಯಾಶ್ರಯ	1. ಅಜಿತಪುರಾಣ	ಚಂಪೂಕಾವ್ಯ
			2. ಸಾಹಸ ಭೀಮ ವಿಜಯ (ಗದಾಯುದ್ಧ)	ಚಂಪೂಕಾವ್ಯ
			3. ರನ್ನ ಕಂದ	ಕಂದ ಪದ್ಯ
			4. ಪರಶುರಾಮ ಚರಿತ	?
			5. ಚಕ್ರೇಶ್ವರ ಚರಿತ	?
ಎರಡನೆಯ ನಾಗವರ್ಮ	1042	ಚಾಲುಕ್ಯ ಜಗದೇಕ ಮಲ್ಲ	1. ವರ್ಧಮಾನ ಪುರಾಣ	ಚಂಪೂಕಾವ್ಯ
			2. ಭಾಷಾಭೂಷಣ	ಸೂತ್ರ
			3. ಕಾವ್ಯಾವಲೋಕನ	ಕಂದವೃತ್ತ
			4. ವಸ್ತುಕೋಶ	ಕಂದವೃತ್ತ

ಶಾಂತಿನಾಥ	ಸು –1070	ಭುವನೈಕಮಲ್ಲ ಪಸಾಯಿತ ಲಕ್ಷ್ಮನೃಪ	1. ಸುಕುಮಾರ ಚರಿತ	ಚಂಪೂಕಾವ್ಯ
ನಾಗಚಂದ್ರ (ಅಭಿನವ ಪಂಪ)	ಸು –1100	ಹೊಯ್ಸಳ 1ನೆಯ ಬಲ್ಲಾಳ	1. ಮಲ್ಲಿನಾಥ ಪುರಾಣ	ಚಂಪೂಕಾವ್ಯ
			2. ರಾಮಚಂದ್ರ ಚರಿತ ಪುರಾಣ (ಪಂಪರಾಮಾಯಣ)	ಚಂಪೂಕಾವ್ಯ
ನಯಸೇನ	1100		1. ಧರ್ಮಾಮೃತ	ಚಂಪೂ (ಗದ್ಯಪ್ರಚುರ)
ಬ್ರಹ್ಮಶಿವ	ಸು– 1150		1. ಸಮಯ ಪರೀಕ್ಷೆ	ಕಂದ ವೃತ್ತ
			2. ತ್ರೈಲೋಕ್ಯ ಚೂಡಾಮಣಿ ಸ್ತೋತ್ರ	ವೃತ್ತ
ಕರ್ಣಪಾರ್ಯ	ಸು –1150	ಲಕ್ಷ್ಮರಾಜ	1. ನೇಮಿನಾಥ ಪುರಾಣ	ಚಂಪೂಕಾವ್ಯ
ನೇಮಿಚಂದ್ರ	1200	ಲಕ್ಷ್ಮೀಧರ	1. (ಅರ್ಧ) ನೇಮಿನಾಥ ಪುರಾಣ	ಚಂಪೂಕಾವ್ಯ
			2. ಲೀಲಾವತಿ	ಚಂಪೂಕಾವ್ಯ
ಜನ್ನ	1209	ವೀರಬಲ್ಲಾಳ ನರಸಿಂಹ	1. ಅನಂತನಾಥ ಪುರಾಣ	ಚಂಪೂಕಾವ್ಯ
			2. ಯಶೋಧರ ಚರಿತೆ	ಕಂದ
			3. ಅನುಭವ ಮುಕುರ	ವೃತ್ತ+ಕಂದ

ಗ್ರಂಥ ಸೂಚಿ

ಅಣ್ಣಾರಾಯ ಮಿರ್ಜಿ. ಜೈನಧರ್ಮ. ಡಿ.ವಿ.ಕೆ.ಮೂರ್ತಿ, ಮೈಸೂರು - 1969.

ಅಣ್ಣಾರಾಯ ಮಿರ್ಜಿ. ಕರ್ನಾಟಕದಲ್ಲಿ ಜೈನಧರ್ಮ. ಕರ್ನಾಟಕ ಮತ್ತು ಜೈನ ಸಂಸ್ಕೃತಿ ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ - 1975.

ಅಣ್ಣಾರಾಯ ಮಿರ್ಜಿ. ಕರ್ನಾಟಕದಲ್ಲಿ ಜೈನ ಸಮಾಜ, ಕರ್ನಾಟಕದಲ್ಲಿ ಜೈನ ಧರ್ಮ - ಒಂದು ಅಧ್ಯಯನ. (ಸಂ.ಕಲಘಟಗಿ - ಟಿ.ಜಿ) ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು - 1976.

ಅನಂತ ರಂಗಾಚಾರ.ಎನ್. ನೇಮಿಚಂದ್ರ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು -1969.

ಅಪ್ಪಾಸ್ವಾಮಿ ಚಕ್ರವರ್ತಿ. ಜೈನಧರ್ಮ : ಅದರ ದರ್ಶನ ಮತ್ತು ನೀತಿಶಾಸ್ತ್ರ ಯುಗಯಾತ್ರೀ ಭಾರತೀಯ ಸಂಸ್ಕೃತಿ - ಮೊದಲನೆಯ ಸಂಪುಟ. (ಅನು. ಚಿದಾನಂದ ಮೂರ್ತಿ.ಎಂ) (ಸಂ.ಪುಟ್ಟಪ್ಪ ಕೆ.ವಿ) ಪ್ರಸಾರಾಂಗ - ಮೈಸೂರು - 1970.

ಉಮಾದೇವಿ.ಎಂ.ಆರ್. ಪೊನ್ನ ಮತ್ತು ಆತನ ಕೃತಿಗಳು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ - 1979.

ಕರ್ಣಪಾರ್ಯ. ನೇಮಿನಾಥ ಪುರಾಣಂ - ಸಂಪುಟ -1, ಸಂಪುಟ -2. (ಪ್ರ.ಸಂ. ಗೋಕಾಕ - ವಿ.ಕೃ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು -1981.

ಕಮಲಾ ಹಂಪನಾ. ಶಾಂತಿನಾಥ ಕವಿ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು -1972.

ಕಲಬುರ್ಗಿ ಎಂ.ಎಂ. ಮಾರ್ಗ. ಸಂಪುಟ -1, ನರೇಶ್ ಅಂಡ್ ಕಂಪನಿ, ಬೆಂಗಳೂರು -1988.

ಕಲಘಟಗಿ.ಟಿ.ಜಿ. ಜೈನ ತತ್ತ್ವಜ್ಞಾನ . ಕರ್ನಾಟಕ ಮತ್ತು ಜೈನ ಸಂಸ್ಕೃತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ -1975.

ಕಲಘಟಗಿ. ಟಿ.ಜಿ. *ಕರ್ನಾಟಕದಲ್ಲಿ ಜೈನ ದರ್ಶನ*, ಕರ್ನಾಟಕದಲ್ಲಿ ಜೈನ ಧರ್ಮ – ಒಂದು ಅಧ್ಯಯನ. ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು –1976.

ಕಲ್ಯಾಣ ಪ್ರಸಾದ ಹನಂಗಡಿ. ಜೈನ ನೀತಿ ಶಾಸ್ತ್ರ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ – 1977.

ಕಾಳೇಗೌಡ ನಾಗವಾರ. *ಆದಿಪುರಾಣದಲ್ಲಿ ಧರ್ಮ ಮತ್ತು ಕಾವ್ಯಧರ್ಮ*, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ – ಸಂಪುಟ –2 (ಸಂ.ಶಿವರುದ್ರಪ್ಪ.ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು –1975.

ಕಿಟ್ಟೆಲ್. ಕನ್ನಡ ಇಂಗ್ಲಿಷ ನಿಘಂಟು. (ಸಂ.ಮರಿಯಪ್ಪ ಭಟ್.ಎಂ) ಮದ್ರಾಸ ವಿಶ್ವವಿದ್ಯಾಲಯ ಮದ್ರಾಸು – ಭಾಗ –2, 1977.

ಕೀರ್ತಿನಾಥ ಕುರ್ತಕೋಟಿ. ಯಶೋಧರ ಚರಿತೆಯ ಕಾವ್ಯತಂತ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1982.

ಕುಲಕರ್ಣಿ.ಬಿ.ಎಸ್. *ನೇಮಿನಾಥ ಪುರಾಣ*. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. (ಸಂ.ಶಿವ ರುದ್ರಪ್ಪ.ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1976.

ಕುಲಕರ್ಣಿ.ಬಿ.ಎಸ್. ನೇಮಿಚಂದ್ರ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 1969.

ಕುಲಕರ್ಣಿ.ಬಿ.ಎಸ್. *ಕನ್ನಡದಲ್ಲಿ ಜೈನ ಧಾರ್ಮಿಕ ಸಾಹಿತ್ಯ*. ಕರ್ನಾಟಕ ಮತ್ತು ಜೈನ ಸಂಸ್ಕೃತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ –1975.

ಕುಲಕರ್ಣಿ.ಬಿ.ಎಸ್. *ನೇಮಿನಾಥ ಪುರಾಣದ ಶ್ರೀಕೃಷ್ಣ*. ಕರ್ನಾಟಕ ಭಾರತ. ಸಂಪುಟ –2, ಸಂಚಿಕೆ –2, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ –1970.

ಕುಲಕರ್ಣಿ. ಆರ್.ಸಿ. *ಜನ್ನ – ಒಂದು ಸಮಗ್ರ ವಿವೇಚನೆ*. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂ. ಪುಟ –3, (ಸಂ.ಶಿವರುದ್ರಪ್ಪ. ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು –1976.

ಕೃಷ್ಣ ಕುಮಾರ್.ಸಿ.ಪಿ. ರನ್ನ ಪರೀಕ್ಷೆ. ಚಿತ್ರಭಾನು ಪ್ರಕಾಶನ, ಮೈಸೂರು – 1979.

ಕೃಷ್ಣಕುಮಾರ್ ಸಿ.ಪಿ. ನೇಮಿಚಂದ್ರನ ಕೆಲವು ವರ್ಣನೆಗಳು. ಆಲೋಚನ. ಉಷಾ ಸಾಹಿತ್ಯ ಮಾಲೆ. ಮೈಸೂರು – 1972.

ಕೃಷ್ಣಕುಮಾರ್.ಸಿ.ಪಿ. ರನ್ನ: ಸಮಗ್ರ ಸಮೀಕ್ಷೆ. ರನ್ನ ಕವಿಕಾವ್ಯ ವಿಮರ್ಶೆ, ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು – 1980.

ಕೃಷ್ಣ ಕುಮಾರ್.ಸಿ.ಪಿ. ಜನ್ನ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು –1980.

ಕೃಷ್ಣಕುಮಾರ್.ಸಿ.ಪಿ. ಜನ್ನನ ಹಿನ್ನಲೆ, ಜೀವನ ಮತ್ತು ವ್ಯಕ್ತಿತ್ವ, ಜನ್ನ. (ಸಂ.ಸೀತಾರಾಮಯ್ಯ.ವಿ) ಐ.ಬಿ.ಹೆಚ್.ಪ್ರಕಾಶನ. ಬೆಂಗಳೂರು – 1975.

ಕೃಷ್ಣಕುಮಾರ್.ಸಿ.ಪಿ. ನಾಗಚಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು –1973.

ಕೃಷ್ಣಕುಮಾರ್.ಸಿ.ಪಿ. ಪಂಪ ಕೆಲವು ಮುಖಗಳು. ಅರ್ಕಾವತಿ ಪ್ರಕಾಶನ, ಮೈಸೂರು–1986.

ಕೃಷ್ಣಕುಮಾರ್.ಸಿ.ಸಿ. ರನ್ನ. ಮೈಸೂರು ವಿಶ್ವವಿದ್ಯಾಲಯ, ಮೈಸೂರು –1988

ಕೃಷ್ಣಕುಮಾರ್.ಸಿಪಿ. ನಾಗಚಂದ್ರನ ಕಾಮದಹನ ಪ್ರಕರಣ, ಕಾವ್ಯಾಲಾಪ. ಶ್ರೀನಿಧಿ ಎಂಟರ್ ಪ್ರೈಸಸ್, ಮೈಸೂರು – 1979.

ಕೃಷ್ಣಕುಮಾರ್.ಸಿ.ಪಿ. ಅರ್ಧನೇಮಿ ಪುರಾಣದ ಒಂದು ವೃತ್ತಾಂತ, ಪರಿವೀಕ್ಷಣ ಚಿತ್ರಭಾನು ಪ್ರಕಾಶನ, ಮೈಸೂರು – 1983.

ಕೃಷ್ಣಕುಮಾರ್.ಸಿ.ಪಿ. ರನ್ನನ ಕೃತಿಗಳು. ಪರಿವೀಕ್ಷಣ. ಚಿತ್ರಭಾನು ಪ್ರಕಾಶನ, ಮೈಸೂರು – 1983.

ಕೃಷ್ಣಕುಮಾರ್.ಸಿ.ಪಿ. ಪಂಪನ ದೃಷ್ಟಿ ಸಮಗ್ರತೆ. ಪರಿವೀಕ್ಷಣ. ಚಿತ್ರಭಾನು ಪ್ರಕಾಶನ ಮೈಸೂರು – 1983.

ಕೃಷ್ಣಕುಮಾರ್ ಸಿ.ಪಿ. ಎರಡು ಜೈನ ಪುರಾಣಗಳು. ಉಷಾ ಸಾಹಿತ್ಯ ಮಾಲೆ, ಮೈಸೂರು – 1985.

ಕೃಷ್ಣಕುಮಾರ್.ಸಿ.ಪಿ. ನೇಮಿಚಂದ್ರನ ಕೆಲವು ವರ್ಣನೆಗಳು . ಕಾವ್ಯ ಗೌರವ, ವಾಗ್ದೇವಿ ಎಂಟರ್ ಪ್ರೈಸಸ್, ಮೈಸೂರು – 1981.

ಕೃಷ್ಣಕುಮಾರ್.ಸಿ.ಸಿ. ಜನ್ನ ಮತ್ತು ಅವನ ಕೃತಿಗಳು. ಜಿ.ಕಲ್ಲಯ್ಯ ಅಂಡ್ ಸನ್ಸ್, ಬೆಂಗಳೂರು – 1989.

ಕೃಷ್ಣಯ್ಯ. ಎಂ.ಎಚ್. ಬ್ರಹ್ಮಶಿವ . ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ –3. (ಸಂ.ಶಿವರುದ್ರಪ್ಪ. ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು – 1976.

ಕೇಶವ ಭಟ್ಟ. ಟಿ. ವಡ್ಡಾರಾಧನೆಯ ಅಧ್ಯಯನ . ವಡ್ಡಾರಾಧನೆ. (ಸಂ.ಸೀತಾರಾಮಯ್ಯ.ವಿ) ಐ.ಬಿ.ಹೆಚ್.ಪ್ರಕಾಶನ. ಬೆಂಗಳೂರು – 1977.

ಗಾಯಿ.ಜಿ.ಎಸ್. ಪಂಪ : ಕಾಲ, ದೇಶ, ಚಾರಿತ್ರಿಕ ಸನ್ನಿವೇಶಗಳು , ಪಂಪ. (ಸಂ. ಸೀತಾರಾಮಯ್ಯ.ವಿ.) ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು – 1977.

ಗೋಪಾಲ.ಬಾ.ರಾ. ಕರ್ನಾಟಕದ ಇತಿಹಾಸ.

ಗೋವಿಂದರಾಜ ಗಿರಡ್ಡಿ. ಜನ್ನನ ಯಶೋಧರ ಚರಿತೆ. ಕರ್ನಾಟಕ ಭಾರತಿ. ಸಂಪುಟ –1, ಸಂಚಿಕೆ –2, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ –1969.

ಗೋವಿಂದರಾಜ ಗಿರಡ್ಡಿ. ಜನ್ನನ ಯಶೋಧರ ಚರಿತೆ ನವ್ಯ ವಿಮರ್ಶೆ, ಅಕ್ಷರ ಪ್ರಕಾಶನ ಸಾಗರ – 1975.

ಗೌರೀಶ ಕಾಯ್ಕಿಣಿ. ಪಂಪ : ಒಂದು ಅಧ್ಯಯನ. ಕರ್ನಾಟಕ ಭಾರತಿ. ಸಂಪುಟ –8, ಸಂಚಿಕೆ –2, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ –1975.

ಗೌರೀಶ ಕಾಯ್ಕಿಣಿ. ಸಂಪ : ಒಂದು ಅಧ್ಯಯನ. ಕರ್ನಾಟಕ ಭಾರತಿ. ಸಂಪುಟ –8 ಸಂಚಿಕೆ –1, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ –1975.

ಗೌರೀಶ ಕಾಯ್ಕಿಣಿ. ಪಂಪ : ಒಂದು ಅಧ್ಯಯನ. ಕರ್ನಾಟಕ ಭಾರತಿ. ಸಂಪುಟ –7, ಸಂಚಿಕೆ –4, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 1975.

ಗೌರೀಶ ಕಾಯ್ಕಿಣಿ. ಪಂಪ : ಒಂದು ಅಧ್ಯಯನ. ಕರ್ನಾಟಕ ಭಾರತಿ, ಸಂಪುಟ –7, ಸಂಚಿಕೆ –3, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ –1975.

ಚಿದಾನಂದ ಮೂರ್ತಿ.ಎಂ. ನಯಸೇನ, ಕನ್ನಡದ ಒಬ್ಬ ಜಾನಪದ ಚಂಪೂ ಕವಿ, ಸಂಶೋಧನ ತರಂಗ. ಸಂಪುಟ –2, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1970.

ಚಿದಾನಂದ ಮೂರ್ತಿ.ಎಂ. ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕದ ಧಾರ್ಮಿಕ – ಸಾಮಾಜಿಕ ಜನಜೀವನ . ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ –1, (ಸಂ.ಶಿವರುದ್ರಪ್ಪ. ಜಿ.ಎಸ್). ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು – 1974.

ಚಿದಾನಂದ ಮೂರ್ತಿ.ಎಂ. ಪಂಪಕವಿ ಮತ್ತು ಯುಗಧರ್ಮ. ಪಂಪ ಒಂದು ಅಧ್ಯಯನ (ಸಂ. ಶಿವರುದ್ರಪ್ಪ. ಜಿ.ಎಸ್). ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1974.

ಚೆನ್ನಕೇಶವ.ಎನ್.ಕೆ. ರನ್ನ ಕವಿ. ಕನ್ನಡ ಸಂಘ. ಮಂಗಳೂರು – 1980.

ಚಂದ್ರಶೇಖರ ಐತಾಳ, ಗುಂಡ್ಮಿ. ಪಂಪನ ಪೆಂಪು . ಕನ್ನಡ ಸಂಘ. ಮಂಗಳೂರು – 1980.

ಜನ್ನ. ಯಶೋಧರ ಚರಿತೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು – 1985.

ಜನ್ನ. ಅನಂತನಾಥ ಪುರಾಣಂ. (ಸಂ. ಮಹಿಶವಾಡಿ.ಬಿ.ಬಿ) ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ – 1975.

ಜಯದೇವ.ಹೆಚ್.ಕೆ. ಅಜಿತಪುರಾಣದ ಕಥಾ ವಸ್ತು. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ –2. (ಸಂ.ಶಿವರುದ್ರಪ್ಪ.ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು – 1975.

ಜಂಬುದೇವ್.ಹು.ಕಾ. *ಶಾಸನ ಮತ್ತು ಗದ್ಯ*. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ – ಸಂಪುಟ –2. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು –1975.

ತಿಪ್ಪೇರುದ್ರಸ್ವಾಮಿ.ಎಚ್. ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಡಿ.ವಿ.ಕೆ.ಮೂರ್ತಿ. ಮೈಸೂರು – 1968.

ತುಕೋಳ್. ಟಿ.ಕೆ. *ಕರ್ನಾಟಕದ ಸಾಂಸ್ಕೃತಿಕ ಶ್ರೀಮಂತಿಕೆಗೆ ಜೈನ ಧರ್ಮದ ಕಾಣಿಕೆ* ಕನ್ನಡದಲ್ಲಿ ಜೈನ ವಾಙ್ಮಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 1977.

ತುಕೋಳ್.ಟಿ.ಕೆ. *ಕರ್ನಾಟಕದಲ್ಲಿ ಜೈನ ಪರಂಪರೆ* . ಕರ್ನಾಟಕದಲ್ಲಿ ಜೈನ ಧರ್ಮ – ಒಂದು ಅಧ್ಯಯನ. (ಸಂ. ಕಲಘಟಗಿ.ಟಿ.ಜಿ) ಜೈನ ಶಾಸ್ತ್ರ ಮತ್ತು ಪ್ರಾಕೃತ ವಿಭಾಗ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 1976.

ತುಕೋಳ್.ಟಿ.ಕೆ. ಜೈನ ಆಚಾರ. ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 1985.

ದೇವಿರಪ್ಪ.ಹೆಚ್. *ಕರ್ಣಪಾರ್ಯನ ನೇಮಿನಾಥ ಪುರಾಣ*. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ –2. (ಸಂ. ಶಿವರುದ್ರಪ್ಪ. ಜಿ.ಎಸ್). ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು – 1975.

ಧರಣೇಂದ್ರಯ್ಯ. ಕೆ.ಎಸ್. *ಮಲ್ಲಿನಾಥ ಪುರಾಣ*. ನಾಗಚಂದ್ರ, ಐ.ಬಿ.ಹೆಚ್. ಪ್ರಕಾಶನ ಬೆಂಗಳೂರು – 1976.

ನಯಸೇನ. ಧರ್ಮಾಮೃತಂ; ಪೂರ್ವಭಾಗ –1, (ಸಂ.ಶಾಮಾಶಾಸ್ತ್ರಿ.ಆರ್.) ಮೈಸೂರು ವಿಶ್ವವಿದ್ಯಾಲಯ. ಮೈಸೂರು – 1924.

ನರಸಿಂಹಾಚಾರ್.ಡಿ.ಎಲ್. *ಗ್ರಂಥ*. ಪೀಠಿಕೆಗಳು ಲೇಖನಗಳು. ಡಿ.ವಿ.ಕೆ.ಮೂರ್ತಿ, ಮೈಸೂರು – 1971.

ನರಸಿಂಹಾಚಾರ್.ಡಿ.ಎಲ್. *ವಡ್ಡಾರಾಧನೆ.* ಪೀಠಿಕೆಗಳು ಲೇಖನಗಳು. ಡಿ.ವಿ.ಕೆ.ಮೂರ್ತಿ. ಮೈಸೂರು – 1971.

ನರಸಿಂಹಾಚಾರ್.ಡಿ.ಎಲ್. *ಸುಕುಮಾರ ಚರಿತೆ* ಪೀಠಿಕೆಗಳು ಲೇಖನಗಳು, ಡಿ.ವಿ.ಕೆ.ಮೂರ್ತಿ, ಮೈಸೂರು – 1971.

ನವರತ್ನ.ಎಸ್.ಆರ್. ಜಾಗತಿಕ ಧರ್ಮಗಳು. ಸಮಾಜ ಪುಸ್ತಕಾಲಯ, ಧಾರವಾಡ – 1976.

ನಾಗಚಂದ್ರ. ಮಲ್ಲಿನಾಥ ಪುರಾಣಂ. (ಸಂ.ಹೆಂಡಿ – ಬಿ.ಬಿ) ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 1974.

ನಾಗರಾಜಯ್ಯ ಹಂಪ. *ಕನ್ನಡ ಭಾಷೆ ಮತ್ತು ಜೈನ ಕವಿಗಳು.* ಕನ್ನಡದಲ್ಲಿ ಜೈನ ವಾಙ್ಮಯ ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು – 1977.

ನಾಗರಾಜಯ್ಯ ಹಂಪಾ. *ಪಂಪ ಜಿನಸೇನ ತೌಲನಿಕ ಅಧ್ಯಯನ*.ಸಾಧನೆ. ಸಂಪುಟ –16, ಸಂಚಿಕೆ –3 –4, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1987.

ನಾಗರಾಜಯ್ಯ ಹಂಪ. *ವಡ್ಡಾರಾಧನೆ – ಕೃತಿ ಪರಿಶೀಲನೆ.* ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ –2, (ಸಂ. ಶಿವರುದ್ರಪ್ಪ. ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1975.

ನಾಗರಾಜಯ್ಯ ಹಂಪ. *ಪಂಪನ ಜೀವನ ದೃಷ್ಟಿ.* ಪಂಪ – ಒಂದು ಅಧ್ಯಯನ. (ಸಂ. ಶಿವರುದ್ರಪ್ಪ. ಜಿ.ಎಸ್). ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1974.

ನಾಗವರ್ಮ – II. ವರ್ಧಮಾನ ಪುರಾಣಂ (ಸಂ. ಸಣ್ಣಯ್ಯ. ಬಿ.ಎಸ್) ಮೈಸೂರು ವಿಶ್ವವಿದ್ಯಾಲಯ, ಮೈಸೂರು – 1974.

ನಾಯಕ್.ಜಿ.ಹೆಚ್. *ಪಂಪನ ಅಭಿವ್ಯಕ್ತಿ.* ಪಂಪ : ಒಂದು ಅಧ್ಯಯನ. (ಸಂ.ಶಿವರುದ್ರಪ್ಪ. ಜಿ.ಎಸ್). ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು – 1974.

ನಾಯಕ.ಜಿ.ಹೆಚ್. ಪ್ರಾಚೀನ ಮತ್ತು ಆಧುನಿಕ ಕನ್ನಡ ಸಾಹಿತ್ಯ : ಒಂದು ನೋಟ ನಿರಪೇಕ್ಷ. ಅಕ್ಷರ ಪ್ರಕಾಶನ. ಸಾಗರ – 1984.

ನಾರಾಯಣ.ಪಿ.ವಿ. ಚಂಪೂ ಕವಿಗಳು. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ. ಸಂಪುಟ –4, (ಸಂ.ಶಿವರುದ್ರಪ್ಪ ಜಿ.ಎಸ್) (ಸಂ. ಚಿದಾನಂದ ಮೂರ್ತಿ.ಎಂ) ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು – 1975.

ನೇಮಿಚಂದ್ರ. ನೇಮಿನಾಥ ಪುರಾಣಂ. (ಸಂ. ಕುಲಕರ್ಣಿ. ಬಿ.ಎಸ್) ಕರ್ನಾಟಕ ವಿಶ್ವವಿದ್ಯಾಲಯ ಪ್ರಕಾಶನ. ಧಾರವಾಡ – 1968.

ಪಾಟೀಲ.ಎಸ್.ಪಿ. ಕವಿ ಬ್ರಹ್ಮಶಿವ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 1974.

ಪಾಟೀಲ.ಎಸ್.ಪಿ. ಎರಡನೆಯ ನಾಗವರ್ಮನ ವರ್ಧಮಾನ ಪುರಾಣ. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ – 1976.

ಪುಟ್ಟಪ್ಪ.ಕೆ.ವಿ. 'ಯಶೋಧರ ಚರಿತ್ರೆ' ಯಲ್ಲಿ ಕಾಮವಿಕಾರ ನಿರೂಪಣೆಯ ಉದ್ದೇಶ ದ್ರೌಪದಿಯ ಶ್ರೀಮುಡಿ. ಉದಯರವಿ ಪ್ರಕಾಶನ. ಮೈಸೂರು – 1967.

ಪೂಜಾರ – ವಿ.ಜಿ. ಜೈನ ಕಾವ್ಯಗಳಲ್ಲಿ ಮಾನವೀಯ ದೃಷ್ಟಿ. ಸಾಹಿತ್ಯ ಸಮಾವೇಶ ಪುಸ್ತಕ ಅಕಾಡೆಮಿ. ಕಲಬುರಗಿ – 1987.

ಪೊನ್ನ. ಶಾಂತಿ ಪುರಾಣಂ. (ಸಂ. ನಾಗರಾಜಯ್ಯ. ಹಂ.ಪ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 1982.

ಪಂಪ ಆದಿಪುರಾಣಂ. (ಪ್ರ.ಸಂ.. ಗೋಕಾಕ.ವಿ.ಕೃ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 1980.

ಬಲದೇವ ಉಪಾಧ್ಯಾಯ. ಭಾರತೀಯ ದರ್ಶನ (ಅನು. ರಾಮಚಂದ್ರ ಶಾಸ್ತ್ರಿ.ಎನ್) ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು – 1970.

ಬಸವರಾಧ್ಯ.ಎನ್. ಪೊನ್ನನ ಕೃತಿಗಳು, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ –೭. (ಸಂ. ಶಿವರುದ್ರಪ್ಪ. ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು – 1975.

ಬುದ್ದಣ್ಣ ಹಿಂಗಮಿರೆ. ಹಳೆಯ ಕಾವ್ಯದಲ್ಲಿ ಶೋಕ ಕಾವ್ಯ. ಕನ್ನಡದಲ್ಲಿ ಶೋಕ ಕಾವ್ಯ. ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು - 1977.

ಬ್ರಹ್ಮಪ್ಪ. ಜಿ. ವಿಡಂಬನ ಕವಿ ಬ್ರಹ್ಮಶಿವ, ಡಿ.ವಿ.ಕೆ.ಮೂರ್ತಿ. ಮೈಸೂರು - 1973.

ಬ್ರಹ್ಮಪ್ಪ.ಜಿ. ಶಾಂತಿನಾಥನ ಸುಕುಮಾರ ಚರಿತೆ. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ -2 (ಸಂ. ಶಿವರುದ್ರಪ್ಪ.ಜಿ.ಎಸ್). ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - 1975.

ಬ್ರಹ್ಮಪ್ಪ.ಜಿ. ರನ್ನ ಕವಿ ಡಿ.ವಿ.ಕೆ. ಮೂರ್ತಿ. ಮೈಸೂರು - 1974.

ಬ್ರಹ್ಮಪ್ಪ.ಜಿ. ಜನ್ನನ ಅನಂತನಾಥ ಪುರಾಣ. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ -3. (ಸಂ. ಶಿವರುದ್ರಪ್ಪ. ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು - 1976.

ಬ್ರಹ್ಮಶಿವ. ಸಮಯ ಪರೀಕ್ಷೆ (ಸಂ. ಕುಲಕರ್ಣಿ.ಬಿ.ಎಸ್). ಕನ್ನಡ ಸಂಶೋಧನ ಸಂಸ್ಥೆ ಧಾರವಾಡ - 1958.

ಭೀಮಸೇನ ರಾವ್.ಡಿ.ಕೆ. ಜನ್ನ ಕವಿ ಸಾಹಿತ್ಯಾವಲೋಕನ, ಉಷಾಸಾಹಿತ್ಯಮಾಲೆ, ಮೈಸೂರು - 1970.

ಭೀಮರಾವ್ ಚಿಟಗುಪ್ಪಿ. ವಡ್ಡಾರಾಧನೆಯ ವಿಚಾರ. ಕರ್ನಾಟಕ ಭಾರತಿ. ಸಂಪುಟ -3, ಸಂಚಿಕೆ -1, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 1970.

ಮರಿಯಪ್ಪ ಭಟ್ಟ.ಎಂ. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ. ಭಾರತೀ ಪ್ರಕಾಶನ, ಮೈಸೂರು - 1910.

ಮಲ್ಲಾಪುರ.ಬಿ.ವಿ. ನಯಸೇನ ಮತ್ತು ಅವನ ಕೃತಿಗಳು. ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 1978.

ಮಹೀಶವಾಡಿ.ಬಿ.ಬಿ. ಕವಿ ಚಕ್ರವರ್ತಿ ರನ್ನನ ಜೀವನ ಹಾಗೂ ಕೃತಿಗಳು. ಕನ್ನಡ ಜೈನ ವಾಙ್ಮಯ ವಿಚಾರ. ಚಂದ್ರಗಂಗಾ ಜ್ಞಾನಪೀಠ, ಶೇಡಬಾಳ -1977.

ಮಹೀಶವಾಡಿ.ಬಿ.ಬಿ. ಕನ್ನಡ ಜೈನ ಕವಿಗಳು . ಕನ್ನಡ ಜೈನ ವಾಙ್ಮಯ ವಿಚಾರ. ಚಂದ್ರಗಂಗಾ ಜ್ಞಾನಪೀಠ, ಶೇಡಬಾಳ – 1977.

ಮಹೀಶವಾಡಿ.ಬಿ.ಬಿ. ಜೈನ ಸಿದ್ಧಾಂತ ಸಮೀಕ್ಷೆ . ಜ್ಞಾನ ವಿಕಾಸ ಪ್ರಕಾಶನ. ಧಾರವಾಡ – 1977.

ಮಹೀಶವಾಡಿ.ಬಿ.ಬಿ. ಕನ್ನಡದಲ್ಲಿ ಜೈನ ಲೌಕಿಕ ಸಾಹಿತ್ಯ , ಕರ್ನಾಟಕ ಮತ್ತು ಜೈನ ಸಂಸ್ಕೃತಿ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ –1975.

ಮಹೀಶವಾಡಿ.ಬಿ.ಬಿ. ಜಿನಭಕ್ತ ನಾಗಚಂದ್ರ . ಕನ್ನಡ ಜೈನ ವಾಙ್ಮಯ ವಿಚಾರ, ಚಂದ್ರಗಂಗಾ ಜ್ಞಾನಪೀಠ ಶೇಡಬಾಳ – 1977.

ಮಹೀಷವಾಡಿ.ಬಿ.ಬಿ. ನಯಸೇನನ ಧರ್ಮಾಮೃತ. ಸಮಗ್ರ ಕನ್ನಡ ಸಾಹಿತ್ಯ ಚರಿತೆ ಸಂಪುಟ –2. (ಸಂ. ಶಿವರುದ್ರಪ್ಪ.ಜಿ.ಎಸ್). ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1975.

ಮಾಳವಾಡ.ಎಸ್.ಎಸ್. ರನ್ನನ ಶೈಲಿ . ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ –2. (ಸಂ.ಶಿವರುದ್ರಪ್ಪ.ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1975.

ಮಾಳವಾಡ.ಎಸ್.ಎಸ್. ಕನ್ನಡ ಸಾಹಿತ್ಯಕ್ಕೆ ಜೈನ ಕವಿಗಳ ಕಾಣಿಕೆ , ಕರ್ನಾಟಕ ಸಾಹಿತ್ಯ – ಸಂಸ್ಕೃತಿ ದರ್ಶನ.

ಮುಗಳಿ.ರಂಶ್ರೀ. ಕನ್ನಡ ಸಾಹಿತ್ಯ ಚರಿತ್ರೆ. ಉಷಾ ಸಾಹಿತ್ಯ ಮಾಲೆ, ಮೈಸೂರು –1971.

ಮುಳಿಯ ತಿಮ್ಮಪ್ಪಯ್ಯ. ನಾಡೋಜ ಪಂಪ, ಗೀತಾ ಬುಕ್ ಹೌಸ್, ಮೈಸೂರು–1977.

ರನ್ನ. ಅಜಿತ ತೀರ್ಥಂಕರ ಪುರಾಣಂ. (ಸಂ.ಸಣ್ಣಯ್ಯ ಬಿ.ಎಸ್. ರಾಮೇಗೌಡ) ಗೀತಾಬುಕ್ ಹೌಸ್. ಮೈಸೂರು – 1988.

ರಮೇಶ್.ಕೆ.ವಿ. ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕದ ಧಾರ್ಮಿಕ – ಸಾಮಾಜಿಕ ಜೀವನ. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ –2. (ಸಂ.ಶಿವರುದ್ರಪ್ಪ.ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1975.

ರಾಘವೇಂದ್ರಾಚಾರ್ಯ.ಎಚ್.ಎಸ್. ಜೈನ ಮತ. ಭಾರತೀಯ ತತ್ವಶಾಸ್ತ್ರ ಸಂಗ್ರಹ ಮೈಸೂರು ವಿಶ್ವವಿದ್ಯಾಲಯ, ಮೈಸೂರು – 1962.

ರಾಜಗೋಪಾಲ.ಕ.ವೆಂ. ಆದಿಪುರಾಣದ ಪಾತ್ರಗಳು. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ –2. (ಸಂ. ಶಿವರುದ್ರಪ್ಪ. ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1975.

ರಾಜರತ್ನಂ.ಜಿ.ಪಿ. ಆದಿ ಪುರಾಣ. ಪಂಪ. (ಸಂ.ಸೀತಾರಾಮಯ್ಯ.ವಿ) ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು – 1977.

ರಾಜರತ್ನಂ ಜಿ.ಪಿ. ಶ್ರೀ ಪಾರ್ಶ್ವನಾಥ ಚಂಪು. ಶಾಕ್ಯ ಸಾಹಿತ್ಯ ಮಂಟಪ. ಬೆಂಗಳೂರು – 1950.

ರಾಮೇಗೌಡ (ರಾಗೌ) ಪಂಪ ಕವಿ: ಜೀವನ ಮತ್ತು ಕೃತಿಗಳು. ಅವಗಾಹನ. ತ್ರಿವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು – 1975.

ರೇಣುಕಾರಾಧ್ಯ.ಎಸ್.ಎಸ್. ಪಂಪನನ್ನು ಕುರಿತ ವಿಮರ್ಶೆಯ ನೆಲೆಗಳು : ಒಂದು ಅಧ್ಯಯನ ಸಾಧನೆ – ಸಂಪುಟ –17, ಸಂಚಿಕೆ –3–4. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1988.

ಲಕ್ಷ್ಮೀನಾರಾಯಣ ಭಟ್ಟ.ಎನ್.ಎಸ್. ಜನ್ನನ ಯಶೋಧರ ಚರಿತೆ . ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ –3, (ಸಂ.ಶಿವರುದ್ರಪ್ಪ.ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1976.

ವರದರಾಜರಾವ್.ಜಿ. ಯಶೋಧರನ ಯಶಶ್ಚಂದ್ರಿಕೆ. ಪಡಿನುಡಿ. ಉಷಾ ಸಾಹಿತ್ಯ ಮಾಲೆ, ಮೈಸೂರು – 1966.

ವರದರಾಜರಾವ್.ಜಿ. *ಧಾರ್ಮಿಕ ಕವಿಯಾಗಿ ಪಂಪ* . ಪಂಪ, ಒಂದು ಅಧ್ಯಯನ (ಸಂ. ಶಿವರುದ್ರಪ್ಪ. ಜಿ.ಎಸ್) ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - 1974.

ವಸಂತಕುಮಾರ ತಾಳ್ತಜೆ. *ಆದಿ ಪುರಾಣದ ಒಂದು ರಸ ಪ್ರಸಂಗ*. ಸಾರಸ. ಚಿರಸಾಹಿತ್ಯ ಪ್ರಕಾಶನ, ಬೆಂಗಳೂರು - 1985.

ವಸಂತಕುಮಾರ ತಾಳ್ತಜೆ. *ರನ್ನದಲ್ಲಿ ರಸಾಭಿವ್ಯಕ್ತಿ*. ಸಾರಸ. ಚಿರಸಾಹಿತ್ಯ ಪ್ರಕಾಶನ ಬೆಂಗಳೂರು - 1985.

ವಿಜಯಾ.ಡಿ. ನಯಸೇನ. ಮೈಸೂರು ವಿಶ್ವವಿದ್ಯಾಲಯ, ಮೈಸೂರು - 1977.

ವಿಜಯಾ ದಬ್ಬೆ ನಾಗಚಂದ್ರ ಒಂದು ಅಧ್ಯಯನ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - 1983.

ವೀರಣ್ಣ.ಸಿ. ಪ್ರಾಚೀನ ಸಾಹಿತ್ಯ. ನವಕರ್ನಾಟಕ ಪ್ರಕಾಶನ. ಬೆಂಗಳೂರು - 1986.

ವೀರೇಂದ್ರ ಕುಮಾರ್ *ರನ್ನನ ಅಜಿತ ಪುರಾಣ* , ರನ್ನ ಕವಿ ಕಾವ್ಯ ವಿಮರ್ಶೆ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - 1980.

ವೆಂಕಟರಾಮಪ್ಪ.ಕೆ. ಕವಿ ನೇಮಿಚಂದ್ರ ಅರ್ಕಾವತಿ ಪ್ರಕಾಶನ, ಮೈಸೂರು - 1982.

ವೆಂಕಟರಾಮಪ್ಪ.ಕೆ. ಕನ್ನಡ ಸಾಹಿತ್ಯ ಚರಿತ್ರೆ. ಗೀತಾಬುಕ್ ಹೌಸ್, ಮೈಸೂರು - 1989.

ವೆಂಕಟ ಸುಬ್ಬಯ್ಯ. ಜಿ. ನಯಸೇನ. ಮೈಸೂರು ವಿಶ್ವವಿದ್ಯಾಲಯ, ಮೈಸೂರು - 1974.

ವೆಂಕಟಾಚಲಶಾಸ್ತ್ರಿ. ಟಿ.ವಿ. *ಹಳಗನ್ನಡ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು* , ಪ್ರಾಚೀನ ಕನ್ನಡ ಸಾಹಿತ್ಯ ಕೆಲವು ನೋಟಗಳು. ಗೀತಾಬುಕ್ ಹೌಸ್, ಮೈಸೂರು - 1981.

ವೆಂಕಟಾಚಲ ಶಾಸ್ತ್ರೀ.ಟಿ.ವಿ. ಜೈನ ಧರ್ಮ ಮತ್ತು ಕನ್ನಡ ಸಾಹಿತ್ಯ. ಕರ್ನಾಟಕದಲ್ಲಿ ಜೈನ ಧರ್ಮ – ಒಂದು ಅಧ್ಯಯನ. (ಸಂ. ಕಲಘಟಗಿ. ಟಿ.ಜಿ.) ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 1976.

ವೆಂಕಟಾಚಲ ಶಾಸ್ತ್ರೀ.ಟಿ.ವಿ. ಪಂಪ. ಸಾಹಿತ್ಯ ಅಕಾದೆಮಿ, ನವದೆಹಲಿ –1987.

ವೆಂಕಟೇಶ ಅಯ್ಯಂಗಾರ ಮಾಸ್ತಿ. ಮಹಾಕವಿ ಪಂಪನ ಆದಿಪುರಾಣ. ಪ್ರಸಂಗ –4 ಜೀವನ ಕಾರ್ಯಾಲಯ, ಬೆಂಗಳೂರು – 1967.

ಶಾಮರಾಯ.ತ.ಸು (ಸಂ) ನಾಗರಾಜಯ್ಯ. ತ (ಸಂ) ಜೈನ ಪರಿಭಾಷಾ ರತ್ನಕೋಶ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು – 1981.

ಶಾಮರಾಯ. ತ.ಸು. ಕನ್ನಡ ಸಾಹಿತ್ಯೋದಯ, ಸಮಗ್ರ ಕನ್ನಡ ಸಾಹಿತ್ಯ ಚರಿತೆ. ಸಂಪುಟ –1, (ಸಂ. ಶಿವರುದ್ರಪ್ಪ.ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1974.

ಶಾಮರಾಯ.ತ.ಸು. ಪಂಪ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1973.

ಶಿವಕೋಟ್ಯಾಚಾರ್ಯ. ವಡ್ಡಾರಾಧನೆ. (ಪ್ರ.ಸಂ. ಮುಗಳಿ ರಂ.ಶ್ರೀ.) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 1976.

ಶಿವರುದ್ರಪ್ಪ. ಜಿ.ಎಸ್. ಕನ್ನಡ ಸಾಹಿತ್ಯ ಸಮೀಕ್ಷೆ. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂಪುಟ –1, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು –1975.

ಶಿವರುದ್ರಪ್ಪ.ಜಿ.ಎಸ್. ಪಂಪನ ಪುಷ್ಪೋದ್ಯಾನ. ಹಿನ್ನೆಲೆ. ಜಿ.ಕಲ್ಲಯ್ಯ ಅಂಡ್ ಸನ್ಸ್, ಬೆಂಗಳೂರು – 1982.

ಶ್ರೀಕಂಠಯ್ಯ. ತೀ.ನಂ. ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ. ಕಾವ್ಯ ಸಮೀಕ್ಷೆ ಕಾವ್ಯಾಲಯ ಮೈಸೂರು – 1947.

ಶ್ರೀಕಂಠಯ್ಯ. ತೀ.ನಂ. ಪಂಪ. ಮೈಸೂರು ವಿಶ್ವವಿದ್ಯಾಲಯ, ಮೈಸೂರು –1974.

ಶ್ರೀಧರ. ಬಿ.ಎಚ್. ಯಶೋಧರ ಚರಿತೆಯ ಅವತಾರಗಳು. ಜನ್ನ. (ಸಂ.ಸೀತಾರಾಮಯ್ಯ) ಐ.ಬಿ.ಹೆಚ್. ಪ್ರಕಾಶನ. ಬೆಂಗಳೂರು – 1975.

ಶ್ರೀನಿವಾಸ ಮೂರ್ತಿ.ಎಂ. ಜೈನ ಕೃತಿಗಳಲ್ಲಿ ಸಾಮಾಜಿಕ ನಿಲುವು, ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು. (ಸಂ. ಶಿವರುದ್ರಪ್ಪ. ಜಿ.ಎಸ್) ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು – 1989.

ಶ್ರೀನಿವಾಸ ಮೂರ್ತಿ.ಎಂ.ಆರ್. ಕರ್ಣಾಟಕ ಸಾಹಿತ್ಯ ಚರಿತೆ. ಸಾಹಿತ್ಯಲೋಕ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು – 1978.

ಶ್ರೀನಿವಾಸ ಮೂರ್ತಿ.ಎಂ.ವಿ. ಕನ್ನಡ ಸಾಹಿತ್ಯ ಮತ್ತು ಸಾಮಾಜಿಕ ಪರಿವರ್ತನೆ – ಜೈನ ಸಾಹಿತ್ಯ. ಸಹಚಿಂತನ ಜಿ. ಕಲ್ಲಯ್ಯ ಅಂಡ್ ಸನ್ಸ್, ಬೆಂಗಳೂರು – 1988.

ಶ್ರೀನಿವಾಸ ಮೂರ್ತಿ. ಎಂ.ವಿ. ಆದಿ ಪುರಾಣದ ಕಥಾವಸ್ತು. ಸಹಚಿಂತನ. ಜಿ.ಕಲ್ಲಯ್ಯ ಅಂಡ್ ಸನ್ಸ್, ಬೆಂಗಳೂರು – 1988.

ಶ್ರೀನಿವಾಸ ಮೂರ್ತಿ, ಎಂ.ವಿ. ಜೈನ ಸಾಹಿತ್ಯ. ಕೌಸ್ತುಭ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 1977.

ಶ್ರೀನಿವಾಸ ಶರ್ಮ. ಹೆಚ್.ವಿ. ನಾಗಚಂದ್ರನ ಮಲ್ಲಿನಾಥ ಪುರಾಣ. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ –2. (ಸಂ. ಶಿವರುದ್ರಪ್ಪ. ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1975.

ಶುಭಚಂದ್ರ. ಜೈನ ಕಾವ್ಯ ದೃಷ್ಟಿ : ಇತಿ ಮಿತಿ ಇತ್ಯಾದಿ. ಜೈನ ಸಾಹಿತ್ಯ ಮತ್ತು ಸಂಸ್ಕೃತಿ. ಗೀತಾ ಬುಕ್ ಹೌಸ್. ಮೈಸೂರು – 1976.

ಶೆಟ್ಟರ್.ಎಸ್. ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕದ ಧಾರ್ಮಿಕ ಸಾಮಾಜಿಕ ಜೀವನ. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ –3. (ಸಂ. ಶಿವರುದ್ರಪ್ಪ. ಜಿ.ಎಸ್.) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 1976.

ಶೇಷಗಿರಿ ರಾವ್. ಡಿ.ವಿ. ನಾಗಚಂದ್ರನ ಕಾವ್ಯ ಸಾಧನೆ. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂಪುಟ -2. (ಸಂ. ಶಿವರುದ್ರಪ್ಪ. ಜಿ.ಎಸ್) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - 1975.

ಶೇಷಗಿರಿ ರಾವ್ ಡಿ.ವಿ. ನಾಗಚಂದ್ರನ ಕಾವ್ಯಗಳು . ತುಮಕೂರು - 1950.

ಶೋಭಾ.ಎಂ. ಕಟ್ಟಿ. ಮಹಾಕವಿ ರನ್ನ. ಸಮಾಜ ಪುಸ್ತಕಾಲಯ, ಧಾರವಾಡ - 1976.

ಶಂಕರನಾರಾಯಣ ರಾವ್.ಎಚ್.ಎಂ. ಯಶೋಧರ ಚರಿತೆ . ಕಾವ್ಯಾರಾಧನೆ. ಶಾರದಾ ಮಂದಿರ, ಮೈಸೂರು - 1981.

ಶಾಂತಿನಾಥ. ಸುಕುಮಾರ ಚರಿತಂ (ಸಂ. ರಾಮರಾವ್.ಟಿ.ಎಸ್. ನರಸಿಂಹಾಚಾರ್ ಡಿ.ಎಲ್) ಕರ್ನಾಟಕ ಸಂಘ, ಶಿವಮೊಗ್ಗ - 1954.

ಸಣ್ಣಯ್ಯ. ಬಿ.ಎಸ್. ನಾಗವರ್ಮ ಮತ್ತು ವರ್ಧಮಾನ ಪುರಾಣ. ಪ್ರಬುದ್ಧ ಕರ್ನಾಟಕ - ಸಂಪುಟ -55, ಸಂಚಿಕೆ -2. ಮೈಸೂರು ವಿಶ್ವವಿದ್ಯಾನಿಲಯ ಮೈಸೂರು - 1973.

ಸದಾನಂದ ನಾಯಕ. ಕನ್ನಡ ಸಾಹಿತ್ಯದಲ್ಲಿ ಜೈನ ಪುರಾಣಗಳು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ - 1975.

ಸಾಲ್ವಿ.ಬಿ.ಜಿ.ಎಲ್. ಪಂಪನ ಕಾವ್ಯಗಳಲ್ಲಿ ಹೂಗಿದ ಮರಬಳ್ಳಿಗಳು. ಪ್ರಬುದ್ಧ ಕರ್ಣಾಟಕ - ಸಂಪುಟ -55, ಸಂಚಿಕೆ -4. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - 1974.

ಸಿದ್ಧಲಿಂಗಯ್ಯ ಜಿ.ಎಸ್. ಪಂಪ : ಪರಂಪರೆಯ ನಿರ್ಮಾಪಕ ಪಂಚಮುಖ. ಜಿ.ಕಲ್ಲಯ್ಯ ಅಂಡ್ ಸನ್ಸ್, ಬೆಂಗಳೂರು - 1986.

ಸೀತಾರಾಮ ಜಾಗೀರದಾರ. ಆದಿಪುರಾಣದ ಒಂದು ಪದ್ಯ ಹಾಗೂ ಪಂಪನ ಜೀವನ ದೃಷ್ಟಿ ಕರ್ನಾಟಕ ಭಾರತಿ, ಸಂಪುಟ -8, ಸಂಚಿಕೆ -1. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 1975.

ಸೀತಾರಾಮಯ್ಯ.ವಿ. (ಸಂ) ನೇಮಿಚಂದ್ರ. ಐ.ಬಿ.ಹೆಚ್. ಪ್ರಕಾಶನ,
ಬೆಂಗಳೂರು – 1981.

ಸೀತರಾಮಯ್ಯ ಎಂ.ವಿ. ಜೈನ ಧರ್ಮದಲ್ಲಿ ನೀತಿ ಸಂಹಿತೆ. ಚಿಂತನ ದೀಪ್ತಿ.
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು –1974.

ಸೀತಾರಾಮಯ್ಯ.ವಿ. ಸಾಹಿತ್ಯ: ಸಂಪ್ರದಾಯ ಮತ್ತು ಹೊಸ ಮಾರ್ಗ.
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 1967.

ಸುಖಲಾಲ್ ಸಾಂಘ್ವಿ ಪಂಡಿತ. ಜೈನಧರ್ಮದ ಕೆಲವು ಮೂಲ ತತ್ವಗಳು. ಯುಗ
ಯಾತ್ರೀ ಭಾರತೀಯ ಸಂಸ್ಕೃತಿ – ಮೊದಲನೆಯ ಸಂಪುಟ.
(ಅನು. ಅನಂತರಾಮಯ್ಯ. ಆರ್.ಎಲ್) (ಸಂ.ಪುಟ್ಟಪ್ಪ ಕೆ.ವಿ)
ಪ್ರಸಾರಾಂಗ ಮೈಸೂರು – 1970.

ಸಂಗಮನಾಥ ಜಿ.ಹಂಡಿ. ಜನ್ನನ ಸುನಂದೆ. ಸಮಾಗಮ. ಶೈಲಜಾ ಪ್ರಕಾಶನ,
ಬಿಜಾಪುರ – 1970.

ಸಿಂಗಮ್ಮ.ಎಂ.ಎ. ಅನಂತನಾಥ ಪುರಾಣ. ಜನ್ನ. (ಸಂ. ಸೀತಾರಾಮಯ್ಯ.ವಿ)
ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು – 1977.

ಸುಂಕಾಪುರ.ಎಂ.ಎಸ್. ಅಜಿತನಾಥ ಪುರಾಣ. ಮಹಾಕವಿ ರನ್ನ ಹಾಗೂ ಅವನ ಕೃತಿಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 1976.

ಸುಂಕಾಪುರ.ಎಂ.ಎಸ್. ನಗೆಗಾರ ನಯಸೇನ. ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ – 1976.

ಹನುಮಂತರಾಯಪ್ಪ.ಎಚ್. ಪಂಪನ ಕೆಲ ಪದ್ಯಗಳು – ಪ್ರಾಯೋಗಿಕ ವಿಮರ್ಶೆ.
ಸಂಕ್ರಮಣ – 165–166, ಸಂಪುಟ –21, ಸಂಚಿಕೆ –5–6.
ಸಂಕ್ರಮಣ ಪ್ರಕಾಶನ, ಧಾರವಾಡ – 1985.

ಹಿರೇಮಠ ಆರ್.ಸಿ. ಪಂಪನ ಆದಿಪುರಾಣ. ಮಹಾಕವಿ ಪಂಪ ಹಾಗೂ ಅವನ ಕೃತಿಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 1976.

ಹೀರಾಲಾಲ ಜೈನ್ . ಜೈನಧರ್ಮ: ಅದರ ಇತಿಹಾಸ ತತ್ವಗಳು ಮತ್ತು ಬೋಧನೆಗಳು.
ಯುಗಯಾತ್ರೀ ಭಾರತೀಯ ಸಂಸ್ಕೃತಿ – ಮೊದಲನೆಯ
ಸಂಪುಟ. (ಅನು. ಚಿದಾನಂದ ಮೂರ್ತಿ.ಎಂ) (ಸಂ.ಪುಟ್ಟಪ್ಪ.ಕೆ.ವಿ)
ಪ್ರಸಾರಾಂಗ ಮೈಸೂರು – 1970.